# ಕನ್ನಡ ಸಂಪ್ರೀತಿ

## ಬಿ.ಎ. ಎರಡನೇ ವರ್ಷ


ಪ್ರಧಾನ ಸಂಪಾದಕರು

**ಪ್ರೊ॥ ಪದ್ಮಾ ಶೇಖರ್**

ಕುಲಪತಿಗಳು

ಸಂಪಾದಕರು

**ಡಾ॥ ಎಸ್.ಎಲ್. ಶ್ರೀನಿವಾಸ ಮೂರ್ತಿ**



**ಪ್ರಸಾರಾಂಗ**

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

**ಚಾಮರಾಜಪೇಟೆ, ಬೆಂಗಳೂರು**

**KANNADA SAMPREETHI : Kannada Text book for B.A. 2nd year, Karnataka Sanskrit University -** Published by Prasaranga, Karnataka Sanskrit University, Pampa Mahakavi Road, Chamarajapet, Bangalore - 560 018
email : Karnatakasanskrituniversity@gmail.com,
Website : www.ksu.ac.in

First Print : 2018

Copies :

Pages : 134

Price : **₹ /-**

© Reserved

Cover Design :

Type Setting : **Sampada Publications,** Bangalore

Printed at :

## ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಏಕಕಾಲದಲ್ಲಿ ಬಿ.ಎ./ಶಾಸ್ತ್ರೀ, ಎಂ.ಎ./ಆಚಾರ್ಯ ಪದವಿಗಳನ್ನು ನೀಡುತ್ತಾ ಬಂದಿದೆ. ಆ ಸಂಬಂಧವಾಗಿ ಪಠ್ಯಪುಸ್ತಕಗಳನ್ನು ಸಂಪಾದಿಸುವ, ಪ್ರಕಟಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಬಿ.ಎ. ಎರಡನೇ ವರ್ಷದ ಕನ್ನಡ ಭಾಷೆಯ ಪಠ್ಯಪುಸ್ತಕವಾಗಿ 'ಕನ್ನಡ ಸಂಪ್ರೀತಿ'ಯನ್ನು ಸಿದ್ಧಪಡಿಸಿ ನಿಮ್ಮ ಕೈಗೆ ಇಡುತ್ತಿದೆ.

'ಕನ್ನಡ ಸಂಪ್ರೀತಿ' ಕೇವಲ ಮಾಹಿತಿ ಕೋಶವಲ್ಲ, ಸ್ಮರಣಪೂರ್ವಕ ದಾಖಲೆಯೂ ಅಲ್ಲ. ಕನ್ನಡ ಭಾಷೆಯ ವೈವಿಧ್ಯ, ವಿಸ್ತಾರವನ್ನು ಪರಿಚಯಿಸುವ ಕೈಪಿಡಿಯಾಗಿದೆ. ಇದರ ಅಧ್ಯಯನದ ನೆರಳಲ್ಲಿ ಕನ್ನಡ ಸಾಹಿತ್ಯದ ಅಭಿವ್ಯಕ್ತಿಯ ಸಾಧ್ಯತೆಯನ್ನು ಮನಗಾಣಲು ಸಾಧ್ಯವಿದೆ. ಸಂಸ್ಕೃತ ವಿದ್ಯಾರ್ಥಿಗಳು ಶಾಸನ ಸಾಹಿತ್ಯವೂ ಸೇರಿದಂತೆ ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಅಭಿಜಾತ ಕೃತಿಗಳ ಭಾಗಗಳನ್ನೂ ಪ್ರಾತಿನಿಧಿಕವಾಗಿ ಪರಿಚಯ ಮಾಡಿಕೊಳ್ಳುವ ಅವಕಾಶ ಇಲ್ಲಿದೆ. ವಿದ್ಯಾರ್ಥಿಗಳು ಕನ್ನಡ ಸೃಜನಶೀಲ ಮನಸುಗಳೊಡನೆ ಅರ್ಥಪೂರ್ಣ ಅನುಸಂಧಾನ ನಡೆಸಲು ಪೂರಕವಾಗುವಂತೆ ಈ ಪಠ್ಯವನ್ನು ಇತಿಮಿತಿಯೊಳಗೆ ಸಿದ್ಧಪಡಿಸಲಾಗಿದೆ. ಈ ಪಠ್ಯರಚನೆಯಲ್ಲಿ ತಮ್ಮ ಬರಹಗಳಿಗೆ ಅನುಮತಿಯಿತ್ತ ಎಲ್ಲ ಲೇಖಕರನ್ನು ವಿಶ್ವವಿದ್ಯಾಲಯ ಕೃತಜ್ಞತೆಯಿಂದ ಸ್ಮರಿಸುತ್ತದೆ.

'ಕನ್ನಡ ಸಂಪ್ರೀತಿ'ಯನ್ನು ರೂಪಿಸುವಲ್ಲಿ ಸಂಪಾದಕರಾದ ಡಾ.ಎಸ್.ಎಲ್. ಶ್ರೀನಿವಾಸಮೂರ್ತಿಗಳ ಶ್ರಮ ದೊಡ್ಡದು. ಅವರ ಜೊತೆ ಸಮನಾಗಿ ಶ್ರಮವಹಿಸಿದವರು ಡಾ. ವೀರನಾರಾಯಣ ಪಾಂಡುರಂಗಿ ಅವರು. ಹಾಗೇ ಭಾಷಾ ನಿಕಾಯದ ಡೀನರಾದ ಪ್ರೊ. ವಿ. ಗಿರೀಶ್‌ಚಂದ್ರ, ಪ್ರಸಾರಾಂಗದ ಉಪನಿರ್ದೇಶಕರಾದ ಡಾ. ಸಂತೋಷ ಹಾನಗಲ್ಲ, ಸಹಾಯಕ ನಿರ್ದೇಶಕರಾದ ಡಾ ಗೋವಿಂದ ಬಿ. ಇವರೆಲ್ಲರು ಪಠ್ಯದ ಸಿದ್ಧತೆಯಲ್ಲಿ ಸಹಕರಿಸಿದ್ದಾರೆ. ಇವರೆಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ. ಕುಲಸಚಿವರಾದ ಶ್ರೀಮತಿ ಎಂ. ಶಿಲ್ಪ, ಹಣಕಾಸು ಅಧಿಕಾರಿ ವಿದ್ವಾನ್ ಪ್ರಕಾಶ ಆರ್. ಪಾಗೋಜಿ ಅವರ ಬೆಂಬಲವನ್ನು ನೆನೆಯುತ್ತೇನೆ.

**ಪ್ರೊ. ಪದ್ಮಾ ಶೇಖರ್**
ಕುಲಪತಿ

## ಪರಿವಿಡಿ


1. ಕೋಡಿಮಠ ವರ್ಣನಂ– ಶಾಸನ ಪದ್ಯ
2. ಪಡೆಗಂ ಪಾಪಕ್ಕಮಂಜದವರೇಗೆಯ್ಯರ್– ನಾಗಚಂದ್ರ
3. ಬೆಕ್ಕಸ ಬೆರಗಾಗಿ ನಿಂದಳು– ಹೆಳವನಕಟ್ಟೆ ಗಿರಿಯಮ್ಮ
4. ಗಿರಣಿ ವಿಸ್ತಾರ ನೋಡಮ್ಮಾ– ಶಿಶುನಾಳ ಶರೀಫ
5. ಕುರುಡು ಕಾಂಚಾಣಾ– ದ.ರಾ. ಬೇಂದ್ರೆ
6. ಬತ್ತಲಾರದ ಗಂಗೆ– ಗೋಪಾಲಕೃಷ್ಣ ಅಡಿಗ
7. ಹೊಸಬಾಳಿಗೆ ಹೊರಟ ಮಗಳಿಗೆ– ಚಂದ್ರಶೇಖರ ಕಂಬಾರ
8. ಕತ್ತೆ ಮತ್ತು ಧರ್ಮ– ಸಿದ್ದಲಿಂಗಯ್ಯ
9. ಹೇ ಹುಲಿ!– ಎಚ್.ಎಸ್. ಶಿವಪ್ರಕಾಶ್
10. ಧರ್ಮೋ ಜಯತಿ ನಾಧರ್ಮಃ– ದುರ್ಗಸಿಂಹ
11. ಕದಳಿ ಹೊಕ್ಕು ಬಂದೆ– ರಹಮತ್ ತರೀಕೆರೆ
12. ಮೊಸರು ಅವಲಕ್ಕಿ– ಸುನಂದಾ ಬೆಳಗಾಂವಕರ
13. ಬರಹದ ಹಣೆಬರಹ– ಪಾ.ವೆಂ. ಆಚಾರ್ಯ
14. ಶಕುಂತಲೆಯೊಂದಿಗೆ ಕಳೆದ ಒಂದು ಅಪರಾಹ್ನ– ವೈದೇಹಿ
15. ಕವಿಕಾಯಕ ರಾಜಕಾಯಕ– ಕೆ.ವಿ. ಸುಬ್ಬಣ್ಣ
16. ನಮ್ಮ ಅಳತೆಯನ್ನು ಮೀರಲಾರದ ದೇವರು– ಶಿವರಾಮ ಕಾರಂತ
17. ಭಾಷಾಭ್ಯಾಸ

**ಪ್ರಶ್ನಪತ್ರಿಕೆಯ ಸ್ವರೂಪ**


## ಸಂಪಾದಕ ಮಂಡಲಿ


**ಪ್ರಧಾನ ಸಂಪಾದಕರು**

**ಪ್ರೊ॥ ಪದ್ಮಾ ಶೇಖರ್**

ಕುಲಪತಿಗಳು

**ಸಂಪಾದಕರು**

**ಡಾ॥ ಎಸ್.ಎಲ್. ಶ್ರೀನಿವಾಸ ಮೂರ್ತಿ**

**ಸದಸ್ಯರು**

**ಪ್ರೊ॥ ವಿ. ಗಿರೀಶ್‌ಚಂದ್ರ**

**ಡಾ. ವೀರನಾರಾಯಣ ಪಾಂಡುರಂಗಿ**

**ಪ್ರಕಟಣಾ ಸಂಯೋಜಕರು**

**ಡಾ. ಸಂತೋಷ್ ಹಾನಗಲ್**

**ಡಾ. ಗೋವಿಂದ**

# ೧. ಕೋಡಿ ಮಠ ವರ್ಣನಂ

## ಶಾಸನ ಪದ್ಯ

ಓಂ ನಮಶ್ಶಿವಾಯ ॥
ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ
ತ್ರೈಲೋಕ್ಯ ನಗರಾರಂಭಮೂಲಸ್ತಂಭಾಯ ಶಂಭವೇ ॥ ಶ್ಲೋಕ ೧॥

[॥ವೃ॥]
ವೇದೋ ಮೂಲಮಥೋವೃತಿರ್ದೃಢತರನ್ಯಾಯಾದಿಶಾಸ್ತ್ರಂ ಖಲು
ಸ್ಮೃತ್ಯಾದಿರ್ವ್ವಿಟಪಸ್ಸತಾಂ ಕಿಸಲಯೋ ಧರ್ಮ್ಮೋನುರಾಗಃ ಕೃಯಾಃ
ಪುಷ್ಪಂ ಯತ್ತಿವ ಶಾಸನೋಕ್ತಿವಿದಿತಂ ಸಂಕಲ್ಪಿತಾರ್ತ್ಥಂ ಫಲಂ
ಧರ್ಮ್ಮಃ ಕಲ್ಪತರುಃ ಕರೋತು ಭವತಃ ಶ್ರೀವಾಮಶಕ್ತೇರ್ಮ್ಮುನೇಃ ॥ ೧ ॥

ದೋರ್ದ್ದಂಡೈರ್ವ್ವಿಟಪೈಃ ಕರೈಃ ಕಿಸಲಯೈಃ ಪುಷ್ಪೈಃ ಸ್ಮಿತೈಃ ಮಂಗಳೈಃ
ಪಾದಾಲಂಬಿ ಜಟಾಸ್ಸಟಾನಿಕರಕೈರ್ನಾನಾಫಳೈಃ ಸಿದ್ಧಿಭಿಃ
[ವ್ಯಾ]ಪ್ತಃ ಶೈಲಸುತಾಮರೇಂದ್ರ ಲತಯಾ ಶ್ರೀ ಪಾರಿಜಾತಶ್ಶಿವಃ
ಶ್ರೀಮದ್ಬಿಜ್ಜಳಭೂಪತೇಃ ಪ್ರತಿದಿನಂ ಕುರ್ಯಾದಭೀಷ್ಟಂ ಫಳಂ ॥ ೨ ॥

ದಕ್ಷಿಣ ಕೇದಾರಸ್ಥಾನಮುಂ ಶಿವಲಿಂಗಪೂಜಾ ಪುಳಕ ಸಸ್ಯ ಸರಸ ಕೇದಾರಸ್ಥಾನಮುಂ ನೈಷ್ಠಿಕ ಬ್ರಹ್ಮಚರ್ಯ್ಯ ಶಿವ ಮುನಿಜನಾನುಷ್ಠಾನ ನಿಷ್ಠಿತಸ್ಥಾನಮುಂ ಸಾಂಗ ಋಗ್ಯಜುಸ್ಸಾಮಾಥರ್ವ್ವ ಚತುರ್ವ್ವೇದ ಸ್ವಾಧ್ಯಾಯಸ್ಥಾನಮುಂ ಕೌಮಾರ ಪಾಣಿನೀಯ ಶಾಕಟಾಯನ ಶಬ್ದಾನುಶಾಸನಾದಿಬ್ಯಾಕರಣ ಬ್ಯಾಖ್ಯಾನಸ್ಥಾನಮುಂ ನ್ಯಾಯ

ವೈಶೇಷಿಕ ಮೀಮಾಂಸಾ ಸಾಂಖ್ಯ ಬೌದ್ಧಾದಿ ಷಡುದರ್ಶನ ಬ್ಯಾಖ್ಯಾನಸ್ಥಾನಮುಂ ಲಾಕುಳ ಸಿದ್ಧಾನ್ತ ಪಾತಂಜಳಾದಿ ಯೋಗಶಾಸ್ತ್ರಬ್ಯಾಖ್ಯಾನ ಸ್ಥಾನಮುಂ ಅಷ್ಟಾದಶಪುರಾಣ ಧರ್ಮ್ಮಶಾಸ್ತ್ರ ಸಕಟಿ ಕಾಬ್ಯ ನಾಟಕ ನಾಟಿಕಾದಿ ವಿವಿಧ ವಿದ್ಯಾಸ್ಥಾನಮುಂ ದೀನಾನಾಥ ಪಂಗ್ವಂಧ ಬಧಿರ ಕಥಕ ಗಾಯಕ ವಾದಕ ವಾಂಶಿಕ ನರ್ತ್ತಕ ವೈತಾಜಿಕ ನಗ್ನಭಗ್ನ ಕ್ಷಪಣಕೈಕದಂಡಿ ತ್ರಿದಂಡಿ ಹಂಸ ಪರಮಹಂಸಾದಿ ನಾನಾ ದೇಶ ಭಿಕ್ಷುಕ ಜನಾನಿವಾರ್ಯ್ಯಾಂನದಾನ ಸ್ಥಾನಮುಂ ನಾನಾನಾಥ ರೋಗಿ ಜನ ರೋಗ ಭೈಷಜ್ಯ ಸ್ಥಾನವುಂ ಸಕಲ ಭೂತಾಭಯಪ್ರದಾನಸ್ಥಾನವುಂ ಆಗಿ ಕೋಡಿಯಮಠವಿರ್ಪ್ಪುದಾಸ್ಥಾನದೊಳೇನಾನುಮೊಂದು ಧರ್ಮ್ಮಮಂ ಮಾಡಿ ನಮ್ಮ [ವೃ]ತ್ತಮುಮಂ ವಿತ್ತಮುಮಂ ತ್ರಿಸಪ್ತ ಕುಲಮುಮಂ ಪವಿತ್ರಮಾ[ಟ್ಪಿ]ಮೆಂಬ ಬಗೆಯಿಂ ಬಗೆವುತಿರ್ಪ್ಪುದುಂ.

ಅನ್ನೆಗಂ ದಕ್ಷಿಣ ದಿಗ್ಭಾಗಮಂ ಸಾಧಿಸಲೆಂದು ಬಿಜ್ಜಲ ಮಹಾರಾಜಂ ಬಿಜಯಂಗೆಯ್ದು ಬಳ್ಳಿಗಾವೆಯೊ[ಳ್] ಬೀಡಂ ಬಿಟ್ಟು ಸುಖ ಸಂಕಥಾ ವಿನೋದದಿಂದ [ಮಿ]ರ್ಪ್ಪುದುಮನಿಬರುಮೊಂದಾಗಿ ಬಂದು ಕುಳ್ಳಿರ್ದ್ದು ಕೋಡಿಯ ಮಠದ ಧರ್ಮ್ಮಪ್ರಸಂಗಮಂ ಮಾ(ಟ್ಪು]ದುಂ

ಆ ಪ್ರಸ್ತಾವದೊಳ್ ಕಸಪಯನಾಯಕನೆ [ಟ್ದು] ನಿಂದಿರ್ದ್ದು ತನ್ಮಹಾರಾಜಂಗಭಿಮುಖನಾಗಿ ಕರಕಮಳಂಗಳಂ ಮುಗಿದುದೇವ ಬಿಂನಪವೆಂದಿಂತೆಂದಂ

॥ ಕಂ ॥

ದಕ್ಷಿಣ ಕೇದಾರಂ ಪಾ
ಪಕ್ಷಯ ಕಾರಣ [ಮ] ಶೇಷ ನಗರಜನ ಪ್ರ
ತ್ಯಕ್ಷೀಕೃತ ಶಿವ ಸಂನಿಧಿ
ಸಾಕ್ಷಾತ್ಕೃತ [ಕೃ]ತಯುಗಂ ಪ್ರಭಾ ಸರ್ವ್ವಸ್ವಂ ॥ ೩ ॥

॥ ವ ॥ ಅದಲ್ಲದೆಯು [ಮಾ] ಮಠಂ ಪುರಾಣಕಮಠನನ್ತೆ ಸಕಳ ಲೋಕಾಧಾರಮುಂ ಪುರುಷ ಸಿಂಹನನ್ತೆ ಹಿರಣ್ಯಕಶಿಪು ದಾನ ಸಂಶೋಭಿತಮುಂ ಕುರುಕ್ಷೇತ್ರದನ್ತೆ ಸರಸ್ವತೀ ವಿಳಸಿತಮುಂ ಖಚರಲೋಕದನ್ತೆ ವಿದ್ಯಾಧರಾಧೀಶ್ವರ ಪರಿ[ವೃ]ತಮುಂ ಮಂದರಮಹಾಮಹೀಧರದನ್ತೆ ಸರ್ವ್ವದಿಕ್ಸಾರಭೂತಮುಂ ವಾಸುದೇವನಂತಕ್ರೂರೋಕ್ತಿ ಶ್ರವಣ ರಮಣೀಯಮುಂ ಭವಾನೀ ಭವನದನ್ತೆ ಬ್ರಹ್ಮಚಾರಿ ಸದಾಚಾರ ಸಂಭಾವಿತಮುಮಾಗಿರ್ಪ್ಪುದಾ ಮಠಂ.

ಅದು ಕಾರಣದಿನಾ ಮಠದೊಳೇನಾನುಂ ಧರ್ಮ್ಮಮಂ ದೇವರ್ಮ್ಮಾಡಿದೊಡದು ಚಂದ್ರಾರ್ಕ್ಕಸ್ಥಾಯಿಯಾಗಿ ನಡೆವುದೆಂಬುದು [ಮ]ದನೆ ಮನದೆಗೊಂಡು ಬಿಜ್ಜಲ ಮಹೀಪಾಳಂ ದಕ್ಷಿಣ ಕೇದಾರೇಶ್ವರ ದೇವರಂಗಭೋಗಕ್ಕಂ ತಪೋಧನರಾಹಾರದಾನಕ್ಕಂ



ವಿದ್ಯಾದಾನಕ್ಕಂ ಖಣ್ಡಸ್ಫುಟಿತ ಜೀರ್ಣ್ಣೋದ್ಧಾರಕ್ಕಂ ಶಿಷ್ಟೇಷ್ಟ ಸಂತರ್ಪಣಕ್ಕಮೆಂದಾ ೬ನೆಯ ವಿಷು ಸಂವತ್ಸರದ ಪುಷ್ಯಮಾಸದಮಾವಾಸ್ಯೆ ಸೂರ್ಯ್ಯಗ್ರಹಣದಂದು ಗೌತಮಾಚಾರ್ಯ್ಯ ಶಿಷ್ಯರಪ್ಪ ವಾಮಶಕ್ತಿ ಪಣ್ಡಿತದೇವರ ಕಾಲಂಕರ್ಚ್ಚಿ ನೂಱುಂಬಾಡದೊಳಗಣ ಕಿಱುಗೇರಿಯಂ ತ್ರಿಭೋಗಾಭ್ಯನ್ತರಂ ಧಾರಾಪೂರ್ವಕಂ ಮಾಡಿಕೊಟ್ಟನ್

ಈ ಧರ್ಮ್ಮಮಂ ಪರಿಪಾಳಿಸಿದವರ್ಗೆ ವಾರಣಾಸಿ ಕುರುಕ್ಷೇತ್ರದೊ[ಳ್] ಸಾಸಿರ ಕವಿಲೆಯಂ ಕೋಡುಂ ಕೊಳಗುಮಂ ಪೊನ್ನುಂ ರಂನ್ನದಿಂ ಕಟ್ಟಿಸಿ ಚತುರ್ವ್ವೇದ ಪಾರಗರಪ್ಪ ಬ್ರಾಹ್ಮಣರ್ಗ್ಗೆ ಕೊಟ್ಟ ಫಳಂ

॥ ವೃ ॥

ಸಾಮಾನ್ಯೋಯಂ ಧರ್ಮ್ಮಸೇತು [ನೃ] ಪಾಣಾಂ
ಕಾಲೇಕಾಲೇ ಪಾಲನೀಯೋ ಭವದ್ಭಿಃ
ಸರ್ವ್ವಾನೇತಾನ್ಭಾವಿನಃ ಪಾರ್ತ್ಥಿವೇನ್ದ್ರಾ [ನ್]
ಭೂಯೋ ಭೂಯೋ ಯಾಚತೇ ರಾಮಚನ್ದ್ರಃ ॥ ೪ ॥

ಬಹುಭಿಃ ರ್ವ್ವಸುಧಾ ಭುಕ್ತಾ ರಾಜಭಿಃಸ್ಸಗರಾದಿಭಿಃ
ಯಸ್ಯಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಲಂ ॥ ೫ ॥

ವಿನ್ಧ್ಯಾಟವೀ [ಷ್ವ] ತೋಯಾಸು ಶುಷ್ಕ ಕೋಟರವಾಸಿನಃ
ಕೃಷ್ಣಸರ್ಪ್ಪಾ ಪ್ರಜಾಯನ್ತೇ ದೇವಬ್ರಹ್ಮಸ್ವಹಾರಿಣಾ ॥ ೬ ॥

ನವಿಷಂ ವಿಷಮಿತ್ಯಾಹುರ್ದ್ದೇವಸ್ವಂ ವಿಷಮುಚ್ಯತೇ
ವಿಷಮೇಕಾಕಿನಂ ಹನ್ತಿ ದೇವಸ್ವಂ ಪುತ್ರ ಪೌತ್ರಿಕಂ ॥ ೭ ॥

ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುನ್ಧರಾಂ
ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿ [ಃ] ॥ ೮ ॥

## ಟಿಪ್ಪಣಿ

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಬಳ್ಳಿಗಾವೆ ಗ್ರಾಮದ [ಬೆಳಗಾವಿ ಎಂದೂ ಹೆಸರಿದೆ]. ಊರ ಹೊರಗಿರುವ ಕೆರೆಯ ಕೋಡಿಯ ಬಳಿ ಕೇದಾರೇಶ್ವರ ದೇವಾಲಯ ಇದೆ. ಆ ದೇವಾಲಯದ ಪ್ರಾಕಾರದಲ್ಲಿರುವ ವಸ್ತು ಸಂಗ್ರಹಾಲಯದ ಹೊರ ಆವರಣದಲ್ಲಿ ಈ ಶಾಸನದ ಕಲ್ಲನ್ನು ರಕ್ಷಿಸಲಾಗಿದೆ. ಎಪಿಗ್ರಾಫಿಯಾ ಕರ್ನಾಟಕದ VII ನೇ ಸಂಪುಟದಲ್ಲಿ ಭಾಗ–I ರಲ್ಲಿ ಶಿಕಾರಿಪುರ ೧೦೨ ಎಂದು ಈ ಶಾಸನವನ್ನು ಪ್ರಕಟಿಸಲಾಗಿದೆ.

ಕಾಳಾಮುಖ ಶೈವರ ಅತ್ಯಂತ ಮಹತ್ವದ ಈ ಶಾಸನವು ಕಲಚೂರ್ಯರ ಬಿಜ್ಜಳನ ಕಾಲದಲ್ಲಿ [ಕ್ರಿ.ಶ. ೧೧೬೨ರಲ್ಲಿ] ರಚಿತವಾಗಿದ್ದು ಕರ್ನಾಟಕದ ಪ್ರಸಿದ್ಧ ವಿದ್ಯಾಕ್ಷೇತ್ರವೊಂದನ್ನು ಪರಿಚಯಿಸುತ್ತದೆ. ಆ ಭಾಗವಷ್ಟನ್ನೇ ಇಲ್ಲಿ ಆಯ್ದು ನೀಡಲಾಗಿದೆ.

## ಶಬ್ದಾರ್ಥ ವಿವರಣೆ

ಕೇದಾರ – ಒಂದು ಪ್ರಸಿದ್ಧ ಶೈವಕ್ಷೇತ್ರ ಮತ್ತು ಬತ್ತದ ಗದ್ದೆ; ಬ್ಯಾಖ್ಯಾನ – ವಿವರಣೆ, ವ್ಯಾಖ್ಯಾನ; ಪಂಗು – ಕುಂಟ; ಭೈಷಜ್ಯ – ಔಷಧ; ವೃತ್ತ – ಬದುಕು; ವಿತ್ತ – ಹಣ; ಕಮಠ – ಆಮೆ; ಖಚರ – ದೇವತೆ; ಅಕ್ರೂರ – ಒಬ್ಬ ವ್ಯಕ್ತಿ ಮತ್ತು ಕೆಟ್ಟದ್ದಲ್ಲದ; ಕರ್ಚಿ – ತೊಳೆದು; ಪಾರಗ – ಪರಾಗತ.

## ೧. ಸಂದರ್ಭ ಸಹಿತ ವಿವರಿಸಿ

೧. ಸಕಲ ಭೂತಾಭಯ ಪ್ರದಾನ ಸ್ಥಾನಮಂ.

೨. ಮಠದೊಳೇನಾನುಂ ಧರ್ಮ್ಮಮಂ ದೇವರ್ಮಾಡಿದೊಡೆ.

೩. ಭೂಯೋ ಭೂಯೋ ಯಾಚನೇ ರಾಮಚನ್ದ್ರಃ.

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ದಕ್ಷಿಣ ಕೇದಾರಸ್ಥಾನವೆಂದು ಪ್ರಸಿದ್ಧವಾಗಿರುವ ಸ್ಥಳ ಯಾವುದು?

೨. ಷಟ್‌ದರ್ಶನಗಳು ಯಾವುವು?

೩. ಬಿಜ್ಜಳನು ಯಾವ ದಿಗ್ಭಾಗವನ್ನು ಸಾಧಿಸಲೆಂದು ಬಂದನು?

೪. ಬಳ್ಳಿಗಾವೆಯ ವಿಶೇಷತೆಯನ್ನು ಬಿಜ್ಜಳನಿಗೆ ವಿವರಿಸಿದವರು ಯಾರು?

೫. ಬಿಜ್ಜಳನು ಯಾರ ಕಾಲನ್ನು ತೊಳೆದು ದಾನ ಕೊಟ್ಟನು?



## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ವಾಮಶಕ್ತಿ ಪಂಡಿತನನ್ನು ಶಾಸನವು ವರ್ಣಿಸಿರುವ ಬಗೆಯನ್ನು ವಿವರಿಸಿ.

೨. ಕೋಡಿಮಠವನ್ನು ಕಮಠ, ಹಿರಣ್ಯಕಶಿಪು, ವಾಸುದೇವ ಮುಂತಾದವುಗಳಿಗೆ ಹೋಲಿಸಿರುವುದರ ಔಚಿತ್ಯವನ್ನು ವಿವರಿಸಿ.

೩. ಬಿಜ್ಜಳನು ಕೋಡಿಮಠಕ್ಕೆ ನೀಡಿದ ದಾನದ ವಿವರಗಳನ್ನು ಬರೆಯಿರಿ.

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಕೋಡಿಮಠವು ಪ್ರಸಿದ್ಧ ಪ್ರಾಚೀನ ವಿಶ್ವವಿದ್ಯಾಲಯವಾಗಿತ್ತು ಎಂಬ ಹೇಳಿಕೆಯನ್ನು ಶಾಸನದ ವಿವರಗಳ ಹಿನ್ನೆಲೆಯಲ್ಲಿ ವಿವರಿಸಿ.

೨. ಕೋಡಿಮಠವು 'ಸಕಲ ಭೂತಾಭಯ ಪ್ರದಾನಸ್ಥಾನ'ವಾಗಿದ್ದದ್ದು ಹೇಗೆ?

೩. ಕೋಡಿಮಠ ಶಾಸನದ ನಾಂದಿ ಪದ್ಯಗಳ ಸೊಬಗನ್ನು ವಿವರಿಸಿ.

೪. ಕೋಡಿಮಠದ ಶಾಸನದಲ್ಲಿ ಕವಿಯು ನಾನಾರ್ಥ ಪದಗಳನ್ನು ಬಳಸಿ ಮಾಡಿರುವ ಚಮತ್ಕಾರವನ್ನು ವಿವರಿಸಿ.

೫. ಕೋಡಿಮಠ ಶಾಸನದ ಶಾಪಶಯದ ಭಾಗವನ್ನು ವಿವರಿಸಿ.

***

# ೨. ಪಱಿಗಂ ಪಾಪಕ್ಕಮಂಜದವರೇಗೆಯ್ಯರ್

**ನಾಗಚಂದ್ರ**

ಆ ಸಮಯದೊಳ್ ದಶಾಸ್ಯನೊಂದು ತಣ್ಬುೞಿಲ ತಾಣದೊಳ್ ಬಱಿಸಿಡಿಲ ಬೞಿವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯಂ ಕಂಡು

ಬಲೆ ದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ ॥ ೧ ॥

ಹಾರಮರೀಚಿಮಂಜರಿ ಸುಧಾರಸಧಾರೆ ಸುಧಾಂಶು ಲೇಖೆ ಕ
ರ್ಪೂರ ಶಲಾಕೆ ನೇತ್ರಸುಖದಾಯಕಮೀ ದೊರೆತಲ್ಲವೀಕೆ ಶೃಂ
ಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ
ಣ್ಣಾರೆ ದಶಾಸ್ಯನೀಕ್ಷಿಸಿದ ನೀಕ್ಷಿಸಿ ಕಣ್ಣಱಿದಾರೆ ಮನ್ಮಥಂ ॥ ೨ ॥

ಪಲರುಂ ವಿದ್ಯಾಧರಸ್ತ್ರೀಯರು ಮಮರಿಯರುಂ ಮಾನವಸ್ತ್ರೀಯರುಂ ತ
ಮ್ಮೊಲವಿಂ ಮೇಲ್ವಾಯ್ದೊಡಂ ಮುನ್‌ಬಗೆಯದ ಬಗೆಯೇನಾದುದೆಂದುದ್ಧತಂ ಮೂ
ದಲಿಸುತ್ತುಂ ರೂಪಿನೊಳ್ ಮಚ್ಚರಿಸುವನೆನಗೆಂದಂಬನಂಬಟ್ಟುವನ್ನಂ
ಪಲಕ್ಕಾಲಕ್ಕೇಸುವೆತ್ತಂ ದಶಮುಖನೆನುತಂ ಮನ್ಮಥಂ ಮಾಣದೆಚ್ಚಂ ॥ ೩ ॥



ನಡೆ ನಡುಕೋಲ್ವರಂ ದಶಮುಖಂ ಮನಮಂ ಸುಮನಶ್ಶಿಲೀಮುಖಂ
ನಡೆಗಿಡೆ ಕೀರ್ತಿ ಬಾರ್ತೆಗಿಡೆ ಲಕ್ಷ್ಮಿ ಮೊದಲ್ಗಿಡೆ ಮಾನಸಿಕ್ಕೆ ನೇ
ರ್ಪಡುಗಿಡೆ ಸತ್ಯಶೌಚಗುಣಸಂಪದಮೇಳಿದನಾದನೆನ್ನುರುಂ
ಕಿಡಿಮಸಿಯಾದವೊಲ್ ವಿಷಯ ಲೋಭದಿನೇಳಿದರಾಗದಿರ್ಪರೇ ॥ ೪ ॥

ಪರವಧುಗಾಸೆಗೆಯ್ವಧಿಕ ಪಾತಕಮೊಂದು ರಘುಪ್ರವೀರನೊಳ್
ಧುರದೊಳಿದಿರ್ಚದೋಸರಿಸಿ ವಂಚಿಸಿ ಸೀತೆಯನುಯ್ವ ಭೀತಿಯೊಂ
ದೆರಡಱೊಳಂ ಜಸಂ ಮಸುಳೆ ತನ್ನವಲೋಕಿನಿಯಂ ದಶಾನನಂ
ಸ್ಮರಿಸಿದನಾತ್ಮ ಸತ್ವಗುಣಹಾನಿಯೆ ಸೂಚಿಸದೇ ವಿನಾಶಮಂ ॥ ೫ ॥

ಅಂತು ನೆನೆಯಲೊಡಮವಲೋಕಿನೀ ವಿದ್ಯೆ ಬಂದು ಬೆಸನಾವುದೆನೆ ದಶಮುಖನಿವರಾರೆಂಬುದುಮಯೋಧ್ಯಾ ಸಿಂಹಾಸನಕ್ಕಧಿಪತಿಯುಮಿಕ್ಷ್ವಾಕು ವಂಶ ಸಂಭವನುಮಪ್ಪನರಣ್ಯ ತನೂಭವಂ ದಶರಥನರನಾಥಂ ತದಪತ್ಯ ರಿವರ್ ಈ ಕಾಲದ ಬಲದೇವ ವಾಸುದೇವರ್ ದೇವತಾಧಿಷ್ಠಿತಂಗಳಪ್ಪ ವಜ್ರಾವರ್ತ ಸಾಗರಾವರ್ತ ಚಾಪರತ್ನಂಗಳನಪ್ರಯತ್ನದಿಂ ಪಡೆದ ರಾಮಲಕ್ಷ್ಮಣರೆಂಬರ್, ಮಹಾಬಲ ಪರಾಕ್ರಮರೀಕೆ ರಾಮನ ಮಹಾದೇವಿ ಮಿಥಿಲಾಪುರವರೇಶ್ವರನಪ್ಪ ಹರಿವಂಶದ ಜನಕನ ತನೂಭವೆ ರಥನೂಪುರ ಚಕ್ರವಾಳಪುರಮನಾಳ್ವ ಚಂಡಬಲನಪ್ಪ ಪ್ರಭಾಮಂಡಲನ ತಂಗೆ ಸೀತಾದೇವಿಯೆಂಬಳೆಂಬುದು ಮೀಕೆಯನೀತನಿಂದಗಲ್ಚುವುಪಾಯಮಾವುದೆನೆ ದೇವತೆ ಚಕಿತ ಚಿತ್ತೆಯಾಗಿ

ಅರಯ್ಯೆ ವಿರೋಧಂ ಸಾ
ಧಾರಣ ಪುರುಷರೊಳಮುಚಿತಮಲ್ತಧಿಕಬಲರ್
ಕಾರಣಪುರುಷರಿವರ್ ನಿ
ಷ್ಕಾರಣವಿವರೊಳ್ ವಿರೋಧಮಂ ಮಾಡುವುದೇ ॥ ೬ ॥

ಕಾವ ಬೆಸಂ ನಿನ್ನದು ಸಕ
ಲಾವನಿಯನಧರ್ಮನಿರತರಂ ನಿಯಮಿಸಿ ನೀ
ನೀ ವಿಷಯಕ್ಕೆಱಗುವುದುಂ
ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ ॥ ೭ ॥

ಅನ್ನೆಯದಿಂ ನಡೆವವರಂ
ನೀನ್ ನಿಯಮಿಸುವೈ ದಶಾಸ್ಯ ಪೆಱನಾವಂ ನಿ
ನ್ನನ್ ನಿಯಮಿಸುವಂ ಮುನ್ನೀರ್
ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೇ ॥ ೮ ॥

ಎಂದು ತೆಱಯೆ ನುಡಿದುದರ್ಕೆ ಕಡುಮುಳಿದು

ಮದನಯಶಃಪಟಹಧ್ವನಿ
ಪುದಿಯೆ ವಿಯಚ್ಚರನ ಕರ್ಣಮಂ ಹೃದಯಕ್ಕೆ
ಯ್ದಿದುದಿಲ್ಲ ದಿವ್ಯವಚನಂ
ಬಿದಿಯಂ ಮೀಱುಗುಮೆ ಪೆಱರ ಪೇೞ್ದುಪದೇಶಂ ॥ ೯ ॥

ಆನೊಂದಂ ಬೆಸಗೊಂಡೊಡೆ
ನೀನೊಂದನಿದೇಕೆ ಪೇೞ್ದೆ ಪೇೞ್ದುದನೇಗೊಳ್
ಏನೆಂದು ಕೀಱ ನುಡಿವಯ್
ಮಾನವರಾಂತಪರೆ ಮರುಳೆ ಲಂಕಾಪತಿಯಂ ॥ ೧೦ ॥

ಎಂಬುದುಂ ವಿದ್ಯಾದೇವತೆ ಕನಲ್ದು

ಜನಕಜೆಯನುಯ್ಯೆ ದಶರಥ
ತನೂಜರಿಂ ಮರಣಮಾಗಲೆಂದಿರ್ದಪುದೀ
ತನ ಕಯ್ಯೊಳವಲ್ತು ಪುರಾ
ತನ ಕರ್ಮಾಯತ್ತಮಲ್ತೆ ದೇಹಿಗಳೆಸಕಂ ॥ ೧೧ ॥

ಗೆಲಲೆನಗೆ ರಿಪುಬಲಂ ಬ
ಲ್ವಲಮಾದೊಡೆ ಸಿಂಹನಾದಮಂ ಮಾೞ್ಪೆಂ ಬೆಂ
ಬಲಮಾಗಿ ಬರ್ಪುದೆಂದೀ
ಬಲದೇವಂಗಱುಪಿ ವಾಸುದೇವಂ ಪೋದಂ ॥ ೧೨ ॥



ಎಂದು ರಾವಣಂಗೆ ಪೇೞ್ವುದುಮವಂ ರಣಕ್ಷೋಣಿಗೆ ಪೋಗಿ ಲಕ್ಷ್ಮಣಂ ಕೇಳದಂತು ವೈಕುರ್ವಣ ಶಕ್ತಿಯಿಂ ಸಿಂಹನಾದಂಗೆಯ್ಯೆನೆ ವಿದ್ಯಾದೇವತೆ ಪೋಗಿ ಅಂತೆಗೆಯ್ವುದುಮಾ ಧ್ವನಿಯಂ ಕೇಳ್ದು

ಧುರದೊಳ್ ದುರ್ಜಯನಾರ್ಗಮೆನ್ನನುಜನೆಂಬೀ ನಿಶ್ಚಯಂಗೆಟ್ಟು ಸಿಂ
ಹರವಂದೋಟಿದನಾಹವಂ ವಿಷಮಮೆಂಬೀ ವಿಸ್ಮಯಂ ಚಿತ್ತದೊಳ್
ದೊರೆಕೊಂಡತ್ತು ರಘೂದ್ವಹಂಗಮುಟಿದಂದೆಂತಕ್ಕುಮೋ ಜಾನಕೀ
ಹರಣ ಕರ್ಮವಿಪಾಕಮಾರ ಬಗೆಗಂ ವೈಕಲ್ಯಮಂ ತಾರದೇ ॥ ೧೩ ॥

ಕಾಪಂ ಪೇೞ್ದು ಜಟಾಯುವ
ನೋಪಳನಿರವೇೞ್ದು ವೈರಿಬಲಮಂ ತವಿಸಲ್
ಪೋಪಂತಿರೆ ದಂಡಧರಂ
ಚಾಪಧರಂ ಬಲನವಂಧ್ಯ ಕೋಪಂ ಪೋದಂ ॥ ೧೪ ॥

ಅನ್ನೆಗಮಿತ್ತಲ್

ಅಳಿಪಿ ಪರವಧುಗಧೋಗತಿ
ಗಿಟಿವುದನಭಿನಯಿಸುವಂತೆ ಸೀತೆಯ ಸಾರ
ಣ್ಗಿಟಿದಂ ನಭದಿಂ ಖಚರಂ
ಪಟಿಗಂ ಪಾಪಕ್ಕಮಂಜದವರೇಗೆಯ್ಯರ್ ॥ ೧೫ ॥

ದೋಷಿ ಪಿಡಿವಂತೆ ದಿವ್ಯದ
ಕಾಸಿದ ಕುಟುವಂ ಕಡಂಗಿ ಕಾಳೋರಗನಂ
ಕೂಸು ಪಿಡಿವಂತೆ ಪಿಡಿದಂ
ಸಾಸಿಗನವಿವೇಕಿ ಸೀತೆಯಂ ದಶಕಂಠಂ ॥ ೧೬ ॥

ಕ್ರೂರಾತ್ಮಂ ವಂಚಕನವಿ
ಚಾರಿ ದುರಾಚಾರಿ ಬಗೆಯದುಯ್ದಪನೆನ್ನಂ
ಹಾ ರಾಮಾ ಹಾ ರಾಮಾ
ಬಾರಿಪರಾರೆಂದು ಸೀತೆ ಶೋಕಂಗೆಯ್ದಳ್ ॥ ೧೭ ॥

## ಕವಿ–ಕಾವ್ಯ ವಿಚಾರ

**ನಾಗಚಂದ್ರ [ಸು. ೧೧೦೦]**

ನಾಗಚಂದ್ರನು 'ಮಲ್ಲಿನಾಥ ಪುರಾಣ' ಹಾಗೂ 'ರಾಮಚಂದ್ರಚರಿತ ಪುರಾಣ' ಎಂಬ ಎರಡು ಚಂಪೂಕಾವ್ಯಗಳನ್ನು ರಚಿಸಿದ್ದಾನೆ. ಮಲ್ಲಿನಾಥ ಪುರಾಣವು ೧೯ನೆಯ ತೀರ್ಥಂಕರನಾದ 'ಮಲ್ಲಿನಾಥನ' ಕತೆಯನ್ನು ಒಳಗೊಂಡಿದೆ. ನಾಗಚಂದ್ರನು 'ವಿಜಯಪುರ' [ಈಗಿನ ವಿಜಾಪುರ]ದಲ್ಲಿ ಮಲ್ಲಿನಾಥ ಜಿನಾಲಯವನ್ನು ಕಟ್ಟಿಸಿದನೆಂದು ತಿಳಿದು ಬರುವುದರಿಂದ ಈ ವಿಜಯಪುರ ಈತನ ಸ್ಥಳವಾಗಿರಬಹುದು. ರಾಮಚಂದ್ರ ಚರಿತ ಪುರಾಣಕ್ಕೆ 'ಪಂಪರಾಮಾಯಣ' ಎಂಬ ಹೆಸರೂ ಉಂಟು. ಇವನಿಗೆ 'ಅಭಿನವ ಪಂಪ' ಎಂಬ ಹೆಸರೂ ರೂಢಿಯಲ್ಲಿ ಬಂದಿದೆ.

ರಾಮಚಂದ್ರಚರಿತಪುರಾಣದ ಕಥೆ ರಾಮಾಯಣದ ಕಥೆಯೇ ಆಗಿದ್ದರೂ ಜೈನ ಸಂಪ್ರದಾಯದ ವಿಮಲಸೂರಿ ಹಾಗೂ ರವಿಷೇಣನ ರಾಮಾಯಣದ ಕಥೆಯನ್ನು ನಾಗಚಂದ್ರನು ಅನುಸರಿಸಿದ್ದಾನೆ. ಈ ಜೈನ ಸಂಪ್ರದಾಯಕ್ಕೂ ವೈದಿಕ ಸಂಪ್ರದಾಯಕ್ಕೂ ಇರುವ ಕೆಲವು ಮುಖ್ಯ ವ್ಯತ್ಯಾಸಗಳನ್ನು ಗಮನಿಸಬಹುದು: ಜೈನ ಧರ್ಮದ ಪರಿಕಲ್ಪನೆಯಂತೆ ತ್ರಿಷಷ್ಟಿಶಲಾಕಾಪುರುಷರಿದ್ದಾರೆ. ಇವರಲ್ಲಿ ೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ಬಲದೇವರು, ೯ ವಾಸುದೇವರು, ೯ ಪ್ರತಿವಾಸುದೇವರು. ಜೈನ ಪರಂಪರೆಯ ರಾಮಾಯಣದಲ್ಲಿನ ರಾಮನು ವಿಷ್ಣುವಿನ ಅವತಾರವಲ್ಲ. ೨೦ನೆಯ ತೀರ್ಥಂಕರನಾದ ಮುನಿಸುವ್ರತನ ಕಾಲದ ೮ನೆಯ ಬಲದೇವ, ವಾಸುದೇವ ಮತ್ತು ಪ್ರತಿವಾಸುದೇವರು ಕ್ರಮವಾಗಿ ಇಲ್ಲಿನ ರಾಮ, ಲಕ್ಷ್ಮಣ ಹಾಗೂ ರಾವಣರು. ಬಲದೇವನಾದ ರಾಮನು ಚರಮದೇಹಿಯೂ ಅಹಿಂಸಾವ್ರತಿಯೂ ಆಗಿರುವುದರಿಂದ ರಾವಣನನ್ನು ಕೊಲ್ಲುವಂತಿಲ್ಲ. ವಾಸುದೇವನಾದ ಲಕ್ಷ್ಮಣನೇ ಪ್ರತಿವಾಸುದೇವನಾದ ರಾವಣನ್ನು ಕೊಲ್ಲುತ್ತಾನೆ. ಇಲ್ಲಿನ ದಶರಥನಿಗೆ ನಾಲ್ವರು ರಾಣಿಯರು. ಅಪರಾಜಿತೆ [ರಾಮನ ತಾಯಿ], ಸುಮಿತ್ರೆ [ಲಕ್ಷ್ಮಣನ ತಾಯಿ], ಸುಪ್ರಭೆ [ಶತ್ರುಘ್ನನ ತಾಯಿ] ಹಾಗೂ ಕೈಕೆ [ಭರತನ ತಾಯಿ]. ಸೀತೆ ಭೂಮಿಯಲ್ಲಿ ದೊರಕಿದವಳಲ್ಲ. ಜನಕನ ಮಗಳು. ಪ್ರಭಾಮಂಡಲ ಸೀತೆಯ ಅಣ್ಣ. ಒಂಬತ್ತು ಮುಖದ ಕನ್ನಡಿಯಲ್ಲಿ ರಾವಣನ ಮುಖ ಪ್ರತಿಬಿಂಬಿಸಿ ಆತ ದಶಮುಖನೆನಿಸಿದ. ಸುಗ್ರೀವಾದಿಗಳು ಕಪಿಗಳಲ್ಲ; ಕಪಿಧ್ವಜರು. ಇವಲ್ಲದೆ ಮೂಲ ರಾಮಾಯಣದಲ್ಲಿನ ಹಲವು ಪ್ರಸಂಗಗಳು ಇಲ್ಲಿ ಕಂಡು ಬರುವುದಿಲ್ಲ.

ಪ್ರಸ್ತುತ ಭಾಗದಲ್ಲಿ ರಾವಣನು ಸೀತಾವ್ಯಾಮೋಹಕ್ಕೆ ಬಲಿಯಾಗಿ ತನ್ನ ಅವಲೋಕಿನೀ ವಿದ್ಯೆಯ ಸಹಾಯವನ್ನು ಪಡೆದು ಸೀತೆಯನ್ನು ಅಪಹರಿಸಿದ ಪ್ರಸಂಗವು ವರ್ಣಿತವಾಗಿದೆ.



## ೨. ಶಬ್ದಾರ್ಥ ವಿವರಣೆ

**ಗದ್ಯ**

ದಶಾಸ್ಯ [ದಶ+ಆಸ್ಯ] ರಾವಣ; ತಣ್ಬುಟಿಲ್– ತಂಪಾದ ತೋಪು. ತಾಣ [<ಸ್ಥಾನ]– ಸ್ಥಳ; ಬಟೆವಿಡಿದು [ಬಟೆಯಂಪಿಡಿದು] ಹಿಂಬಾಲಿಸಿ; ಕುಡುಮಿಂಚು– ಬಳ್ಳಿ ಮಿಂಚು; ಬಲಭದ್ರ– ಶ್ರೀರಾಮ.

ಸಂಕಲೆ [<ಶೃಂಖಲಾ]– ಸಂಕೋಲೆ, ಸರಪಳಿ; ಕಣ್ಬೊಲ [ಕಣ್+ಪೊಲ]– ಕಣ್ನೋಟದ ಪ್ರದೇಶ, ಆಸುಪಾಸು, ಪದ್ಮಪತ್ರ– ತಾವರೆಯ ಎಲೆ; ಚಲಿತ– ಚಂಚಲ; ಚಿತ್ತ– ಮನಸ್ಸು, ಸೀತೆಯನ್ನು ರಾವಣನ ಕಣ್ಣಿಗೆ ಬಲೆ, ಹೃದಯಕ್ಕೆ ಸಂಕೋಲೆ ಎಂದು ವರ್ಣಿಸಿರುವುದು ಧ್ವನಿಪೂರ್ಣವಾಗಿದೆ.

ಹಾರ ಮರೀಚಿಮಂಜರಿ– ರತ್ನಹಾರದ ಕಿರಣಗಳ ಸಮೂಹ; ಸುಧಾರಸಧಾರೆ– ಅಮೃತದ ಪ್ರವಾಹ; ಸುಧಾಂಶುಲೇಖೆ– ಚಂದ್ರಕಳೆ; ಶಲಾಕೆ– ಸಲಾಕಿ; ಈ ದೊರೆತಲ್ಲಮ್ [ಈ+ದೊರೆತು+ಅಲ್ಲಮ್]– ಸೀತೆಯ ಕಾಂತಿಗೆ ಸಮಾನವಾದುದಲ್ಲ; ಹೃದ್ಭವನ್ [ಹೃತ್+ಭವನ್]– ಮನಸ್ಸಿನಲ್ಲಿ ಹುಟ್ಟಿದವನು, ಮನ್ಮಥ; ಉದ್ಭವೆಯಾದಳ್– ಹುಟ್ಟಿದಳು; ಈಕ್ಷಿಸಿ ಕಣ್ಣಜಿದಾರೆ ಮನ್ಮಥಂ [ಕಣ್ಣು+ಅಜಿದು+ಆರ್+ಎ]– ಮನ್ಮಥನು ರಾವಣನ ಕಣ್ಣನೋಟದ ಇಂಗಿತವನ್ನು ತಿಳಿದು ಗರ್ಜಿಸಲು; ಕಣ್ಣಾರೆ– ಕಣ್ತುಂಬ.

ಮೇಲ್ವಾಯ್ದೊಡಂ [ಮೇಲ್+ಪಾಯ್ದೊಡಂ(– ಮೇಲೆ ಬಿದ್ದರೂ; ಮುನ್‌ಬಗೆಯದ– ಈ ಹಿಂದೆ ಲಕ್ಷಿಸದಿದ್ದ; ಬಗೆ– ಮನಸ್ಸು; ಉದ್ಧತಂ– ಸೊಕ್ಕಿದವನು [ಮನ್ಮಥ]; ಮಚ್ಚರಿಸು–ಮತ್ಸರಿಸು; ಅಸೂಯೆಪಡು; ಅಂಬನಂಬಟ್ಟುವನಂ [ಅಂಬನ್+ಅಂಬ+ ಅಟ್ಟುವ+ಅನ್ನಂ]– ಒಂದು ಬಾಣವನ್ನು ಮತ್ತೊಂದು ಬಾಣವು ಅಟ್ಟಿಕೊಂಡು ಹೋಗುವಂತೆ, ಪುಂಖಾನುಪುಂಖವಾಗಿ; ಪಲಕಾಲಕ್ಕೇಸುವೆತ್ತಂ ದಶಮುಖಂ– [ಪಲಕಾಲಕ್ಕೆ+ಏಸು+ ಪೆತ್ತಂ]– ರಾವಣನು ಬಹಳ ಕಾಲದ ಬಳಿಕ ತನ್ನ ಹೊಡೆತಕ್ಕೆ ಸಿಕ್ಕಿದ್ದಾನೆ ಎನ್ನುತ್ತ; ಮಾಣದೆ– ಬಿಡದೆ; ಎಚ್ಚು [ಇಸು>ಎಚ್ಚು]– ಬಾಣವನ್ನು ಪ್ರಯೋಗಿಸಿ; ರಾವಣನೂ ಮನ್ಮಥನಂತೆಯೇ ಸ್ಫುರದ್ರೂಪಿ ಎಂಬ ಭಾವವೂ, ಅವನು ಪರಸ್ತ್ರೀಯರನ್ನು ಮುಟ್ಟುವುದಿಲ್ಲ ಎಂಬ ವ್ರತವನ್ನು ಕೈಗೊಂಡಿದ್ದುದನ್ನೂ ಸೂಚಿಸುತ್ತದೆ.

ನಡೆನಡುಕೋಲ್‌ವರಂ– ನಡು ಭಾಗದವರೆಗೆ ಬಾಣವು ನಾಟಲು; ಸುಮನಶ್ಶಿಲೀಮುಖಂ [ಸುಮನಃ+ಶಿಲೀಮುಖಂ]– ಹೂವಿನ ಬಾಣ; ನಡೆಗಿಡೆ– ನಡೆಕೆಡಲು; ಬಾರ್ತೆಗಿಡೆ [ಬಾರ್ತೆ+ಕಿಡೆ]– ಬಾಳುವೆ ಕೆಡಲು; ಮೊದಲ್ಗಿಡೆ ಮಾನಸಿಕ್ಕೆ– ಮನಸ್ಸಿನ ಮೂಲಸ್ಥಿತಿ ಕೆಡಲು; ಶೌಚ– ಪರಿಶುದ್ಧ ಶೀಲ; ನೇರ್ಪಡುಕಿಡೆ– ಋಜುತ್ವ ಹಾಳಾಗಲು; ಏಳಿದನ್– ಹೀನನು, ನಿಕೃಷ್ಟನು; ಎನ್ನರುಂ– ಎಂಥವರೂ; ಕಿಡಿ

ಮಸಿಯಾದವೋಲ್– ಕೆಂಡವು ಮಸಿಯಾದಂತೆ.

ಧುರ–ಯುದ್ಧ; ಇದಿರ್ಚು– ಎದುರಿಸು, ಹೋರಾಡು; ಓಸರಿಸಿ– ಹಿಂದೆ ಸರಿದು; ಜಸ [<ಯಶ]– ಕೀರ್ತಿ; ಮಸುಳೆ– ಮಸುಕಾಗಲು; ಅವಲೋಕಿನೀ– ರಾವಣನು ಸಾಧಿಸಿಕೊಂಡ ಒಂದು ವಿದ್ಯೆ, ಮನದಲ್ಲಿ ನೆನೆದ ಕೂಡಲೆ ಆ ವಿದ್ಯಾದೇವತೆಯು ಪ್ರತ್ಯಕ್ಷವಾಗಿ ಕೇಳಿದುದನ್ನು ತಿಳಿಸುವಳು.

ಬೆಸನ್– ಅಪ್ಪಣೆ; ಅನರಣ್ಯ– ಅನರಣ್ಯನೆಂಬುವನು ಜೈನ ರಾಮಾಯಣದ ಪ್ರಕಾರ ದಶರಥನ ತಂದೆ; ಅಪತ್ಯರ್– ಮಕ್ಕಳು; ಅಧಿಷ್ಠಿತ–ಕೊಟ್ಟ; ವಜ್ರಾವರ್ತ ಸಾಗರಾವರ್ತ– ಎರಡು ಧನಸ್ಸುಗಳು. ವಾಲ್ಮೀಕಿ ರಾಮಾಯಣದಲ್ಲಿ ಶಿವಧನುಸ್ಸು ಮಾತ್ರ ಇದೆ. ರಥನೂಪುರ– ಪ್ರಭಾಮಂಡಲನ ರಾಜಧಾನಿ; ತನೂಭವೆ– ಮಗಳು; ವಾಲ್ಮೀಕಿ ರಾಮಾಯಣದಲ್ಲಿ ಸೀತೆಯ ಸೋದರರನ ಪ್ರಸ್ತಾಪವಿಲ್ಲ.

ಆರಯ್– ವಿಚಾರಮಾಡು; ಕಾರಣಪುರುಷರ್– ಮಹತ್ಕಾರಣಕ್ಕಾಗಿ ಲೋಕದಲ್ಲಿ ಹುಟ್ಟಿರುವ ಮಹಾಸತ್ವರು.

ಕಾವಬೆಸನ್– ಕಾಪಾಡುವ ಕರ್ತವ್ಯ, ಹೊಣೆಗಾರಿಕೆ; ನಿಯಮಿಸು– ನಿಯಂತ್ರಿಸು, ಶಿಕ್ಷಿಸು; ವಿಷಯ– ಇಂದ್ರಿಯಗಳ ಆಸೆ, ಇಂದ್ರಿಯಲೋಲುಪತೆ; ಎಱಗು– ಬೀಳು; ಕಾವರೆಕಣೆಗೊಂಡರ್ [ಕಣೆಯಂ+ಕೊಂಡರ್]– ಕಾಪಾಡುವವರೆ ಬಾಣ ಪ್ರಯೋಗ ಮಾಡಿದರು, ಇದೊಂದು ಹಳಗನ್ನಡದ ಗಾದೆ.

ಮುನ್ನೀರ್– ಸಮುದ್ರ, ಮೂರು ನೀರು ಸೇರುವ ಸ್ಥಳ. ಮಳೆನೀರು, ನದಿಯ ನೀರು ಹಾಗೂ ಅಂತರ್ ಜಲ ಸೇರಿರುವ ಜಾಗ; ಬೆನ್ನೀರ್ [ಬೆಚ್ಚನೆಯ+ನೀರ್] ಬಿಸಿ ನೀರು; ಒಳವೆ– ಇರುವುದು ಉಂಟೆ?; ಮುನ್ನೀರ್ ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೆ [ಇದೊಂದು ಹಳಗನ್ನಡ ಗಾದೆ]

ತೆಱೆಯೆ ನುಡಿ– ಮನಬಿಚ್ಚಿ ಮಾತನಾಡು, ಸ್ಪಷ್ಟವಾಗಿ ಹೇಳು.

ಮದನ ಯಶಃಪಟಹ ಧ್ವನಿ ಪುದಿಯೆ– ಮನ್ಮಥನ ಕೀರ್ತಿ ಎಂಬ ನಗಾರಿಯ ಧ್ವನಿ ತುಂಬಲು; ವಿಯಚ್ಚರ [ವಿಯತ್+ಚರ]– ರಾವಣ; ಬಿದಿ–ವಿಧಿ; ಕೀಱೆ– ಚೀರಿ

ಕನಲ್– ಕೋಪಗೊಳ್ಳು.

ಕಯ್ಯೊಳವಲ್ತು– ಅಧೀನದಲ್ಲಿಲ್ಲ, ವಶದಲ್ಲಿಲ್ಲ. ಪುರಾತನ ಕರ್ಮಾಯತ್ತ ಮಲ್ತೆ ದೇಹಿಗಳೆಸಕಂ– ಇದೊಂದು ಪಡೆನುಡಿ. ಮನುಷ್ಯರ ಕಾರ್ಯವೆಲ್ಲವೂ ಹಿಂದಿನ ಕರ್ಮಗಳ ಫಲವಾಗಿ ಬರುತ್ತವೆ.

ಬಲ್ವಲಂ [ಬಲ್+ಬಲಂ]– ಮಹಾಶಕ್ತಿಶಾಲಿ



ರಣಕ್ಷೋಣಿ– ಯುದ್ಧಭೂಮಿ; ವೈಕುರ್ವಣ ಶಕ್ತಿ– ಮಾಯಾ ಶಕ್ತಿ

ಆಹವ– ಯುದ್ಧ; ವಿಷಮಂ– ಘೋರವಾದುದು; ರಘೂದ್ವಹ– ರಘುಶ್ರೇಷ್ಠ; ವೈಕಲ್ಯ– ವಿಕಲತೆ.

ಕಾಪು– ಕಾವಲು; ಒಪಳ್– ಪ್ರಿಯಳು; ತವಿಸು– ನಾಶಮಾಡು; ದಂಡಧರ– ದಂಡಪಾಣಿಯಾದ ಯಮ; ಬಲನ್–ಬಲಭದ್ರ; ಆವಂಧ್ಯ ಕೋಪಂ– ನಿಷ್ಫಲವಾಗದ, ವ್ಯರ್ಥವಾಗದ ಕೋಪವುಳ್ಳವನು; ವಂಧ್ಯಾ [ಸಂ] ಬಂಜೆ [ತದ್ಭವ].

ಅಳಿಪು– ಅತ್ಯಾಸೆ; ಸಾರಣ್ಗೆ–ಸಮೀಪಕ್ಕೆ, ಪೞಿ– ನಿಂದೆ, ಕೆಟ್ಟ ಹೆಸರು.

ದಿವ್ಯ [ದಿಬ್ಬ]– ಉಗ್ರ ಪರೀಕ್ಷೆಯ ವಿಧಾನ [ಹಿಂದಿನ ಕಾಲದಲ್ಲಿ ಆಪಾದಿತರಾದವರ ಸತ್ಯಸಂಧತೆಯನ್ನು ನಿರ್ಧರಿಸಲು ಅನುಸರಿಸುತ್ತಿದ್ದ ಒಂದು ಪರೀಕ್ಷಾ ಪದ್ಧತಿ. ಈ ಪದ್ಧತಿಯಲ್ಲಿ ದೋಷಿಯಾದವನು ಕಾದ ಕಬ್ಬಿಣ ಕುಳವನ್ನಾಗಲೀ ಅಥವಾ ಕೊಡದಲ್ಲಿರಿಸಿದ ಉಗ್ರಸರ್ಪವನ್ನು ಹಿಡಿದಾಗಲೀ ತನ್ನ ಸತ್ಯಸಂಧತೆಯನ್ನು ಸ್ಥಾಪಿಸಬೇಕಾಗಿತ್ತು.]

## ೧. ಸಂದರ್ಭ ಸಹಿತ ವಿವರಿಸಿ

೧. ಪದ್ಮಪತ್ರದ ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ.

೨. ಆತ್ಮಸತ್ವಗುಣ ಹಾನಿಯೆ ಸೂಚಿಸದೆ ವಿನಾಶಂ

೩. ನಿಷ್ಕಾರಣಂ ಇವರೋಳ್ ವಿರೋಧಮಂ ಮಾಡುವುದೇ

೪. ಬಿದಿಯಂ ಮೀರುಗುಮೆ ಪೆರರ ಪೇಳ್ದುಪದೇಶಂ

೫. ರಿಪುಬಲಂ ಬಲ್ವಲಮಾದೊಡೆ ಸಿಂಹನಾದ ಮಾಳ್ಪೆಂ

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ರಾವಣನು ಮೊದಲ ಬಾರಿಗೆ ಸೀತೆಯನ್ನು ಎಲ್ಲಿ ಕಂಡನು?

೨. ಸೀತೆಯು ಎಲ್ಲಿ ಹುಟ್ಟಿರಬೇಕೆಂದು ರಾವಣನು ತಿಳಿದನು?

೩. ಸೀತೆಯ ಅಣ್ಣ ಯಾರು?

೪. ರಾಮನು ಸೀತೆಯ ರಕ್ಷಣೆಯನ್ನು ಯಾರಿಗೆ ವಹಿಸಿದನು?

೫. ರಾವಣನು ಯಾರಿಗೆ ಕೇಳಿಸದಂತೆ ಸಿಂಹನಾದ ಮಾಡಿದನು?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ರಾವಣನು ಸೀತೆಯನ್ನು ಕಂಡಾಗ ಅವನ ಮನಸ್ಸಿನಲ್ಲಿ ಉಂಟಾದ ಭಾವನೆಯೇನು?
೨. ಮನ್ಮಥನು ರಾವಣನ ಮೇಲೆ ಬಾಣ ಬಿಡಲು ಕಾರಣವೇನು?
೩. ರಾವಣನು ಅವಲೋಕಿನಿಯನ್ನು ಸ್ಮರಿಸಲು ಕಾರಣಗಳೇನು?
೪. ಅವಲೋಕಿನಿ ವಿದ್ಯೆ ರಾಮ ಲಕ್ಷ್ಮಣ ಸೀತೆಯನ್ನು ಪರಿಚಯಿಸಿದ್ದು ಹೇಗೆ?
೫. ಅವಲೋಕಿನಿಯು ರಾವಣನಿಗೆ ಹೇಳಿದ ಬುದ್ಧಿವಾದ ಏನು?

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ನಾಗಚಂದ್ರನು ಚಿತ್ರಿಸಿರುವ ರಾವಣನ ವ್ಯಕ್ತಿತ್ವವನ್ನು ವಿವರಿಸಿ.
೨. ಅವಲೋಕಿನಿಗೂ ರಾವಣನಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.
೩. ವಾಲ್ಮೀಕಿ ರಾಮಾಯಣಕ್ಕೂ ಜೈನ ರಾಮಾಯಣಕ್ಕೂ ಈ ಭಾಗದಲ್ಲಿ ಇರುವ ವ್ಯತ್ಯಾಸಗಳನ್ನು ಗುರುತಿಸಿ.

***

# ೩. ಬೆಕ್ಕಸ ಬೆರಗಾಗಿ ನಿಂದಳು

**ಹೆಳವನಕಟ್ಟೆ ಗಿರಿಯಮ್ಮ**

ಚಿಕ್ಕ ಪ್ರಾಯದ ಕೋಮಲಾಂಗಿಯು ಹೆ
ಮ್ಮಕ್ಕಳನಗಲಿ ತಾ ಚೂತ
ವೃಕ್ಷದ ನೆರಳಲ್ಲಿ ಮಲಗಿದ್ದಾತನ ಕಂಡು
ಬೆಕ್ಕಸ ಬೆರಗಾಗಿ ನಿಂದಳು ॥ ೧ ॥

ಅತಿ ಚೆಲುವ ಪುರುಷನ ಕಾಣುವ ಮೂರ್ಚೆ
ಗತಳಾಗಿ ತಿಳಿದು ಎಚ್ಚೆತ್ತು
ಪೃಥುವಿಯೊಳಗೆ ಇಂಥ ಚೆಲುವನಿಲ್ಲವೆಂದು
ಮತಿ ಭ್ರಮೆಯಿಂದ ನೋಡಿದಳು ॥ ೨ ॥

ಪಾರ್ವತಿ ಪತಿಯೆಂಬೆನೆ ಪಣೆಗಣ್ಣಿಲ್ಲ
ವಾರಿಜೋದ್ಭವನಿವನಲ್ಲ
ನಾರಾಯಣನೆಂಬೆನೆ ಶಂಖ ಚಕ್ರವು
ತೋರುವುದಿಲ್ಲ ಕೈಯೊಳಗೆ ॥ ೩ ॥

ಇಂದ್ರನೆಂಬೆನೆ ಬಿಳಿಯಾನೆ ಕೆಲದಲಿಲ್ಲ
ಚಂದ್ರನೆಂಬೆನೆ ಮೃಗವಿಲ್ಲ
ಕುಂದದೆ ಲೋಕ ಲೋಕವ ತಿರುಗಿದ ರವಿ
ಬಂದಿಳಿದಾನೊ ಭೂತಳಕೆ ॥ ೪ ॥

ವಸುದೇವಸುತನಾತ್ಮಜ ತಾನೆಂಬೆನೆ
ಕುಸುಮ ಬಾಣವು ಕೈಯೊಳಿಲ್ಲ
ದಶದಿಕ್ಪಾಲನೊ ಯಕ್ಷಗಾಂಧರ್ವನೊಯೆಂದು
ವಿಸ್ಮಿತೆಯಾದಳು ವಿಷಯೆ ॥ ೫ ॥

ಸುತ್ತ ನೋಡುವಳಾರ ಸಂಚಾರವಿಲ್ಲೆನುತ
ಹತ್ತಿರೆ ಬಂದು ನಿಲ್ಲುವಳು ।
ಚಿತ್ತದೊಳೊಮ್ಮೊಮ್ಮೆ ನೆರೆಯೆ ನೇಮಿಸುವಳು
ಹೊತ್ತಲ್ಲವೆಂದು ಸಾರುವಳು ॥ ೬ ॥

ಇಟ್ಟ ಕಾಲಂದಿಗೆ ಅಲುಗದಂದದಿ ಬಂದು
ಮುಟ್ಟುವೆನೆಂದು ನಿಲ್ಲುವಳು
ದಿಟ್ಟ ಹೆಂಗಸು ಇವಳಾರೊ ಎಂಬುವನೆಂದು
ಥಟ್ಟನೆ ಕಡೆಗೆ ಸಾರುವಳು ॥ ೭ ॥

ಆದುದಾಗಲಿ ಇವನ ಅಗಲಲಾರೆನು ಲಜ್ಜೆ
ಹೋದರು ಹೋಗಲಿ ಎನುತ
ಪಾದದಿಂದಿಡಿದು ಮಸ್ತಕ ಪರಿಯಂತರ
ಭೇದಿಸಿ ನೋಡಿದವಳವನ ॥ ೮ ॥

ಸೊಗಸಿಂದ ನಿದ್ರೆಗೈದಿಂದುಹಾಸನು ತೊಟ್ಟ
ಚೊಗೆಯ ಕುಪ್ಪಸದ ಕೊನೆಯಲ್ಲಿ
ಬಿಗಿದು ಕಟ್ಟಿರ್ದ ಪತ್ರಿಕೆಯನ್ನು ಮೆಲ್ಲನೆ
ತೆಗೆದುಕೊಂಡಳು ಮಂತ್ರಿ ತನುಜೆ ॥ ೯ ॥

ನಿದ್ರೆಯ ತಿಳಿದು ಎಚ್ಚತ್ತು ನೋಡುವನೆಂದು
ಹೊದ್ದಿದ್ದ ಲಜ್ಜೆ ಭಾವದಲಿ



ಸದ್ದು ಮಾಡದೆ ಸಂಪಿಗೆ ವೃಕ್ಷವನೆ ಸಾರ್ದು
ಮುದ್ರೆಯೊಡೆದಳಂಬುಜಾಕ್ಷಿ ॥ ೧೦ ॥

ನೋಡಿದು ತಮ್ಮ ತಂದೆಯ ಸ್ವಹಸ್ತದ
ಮೋಡಿಯ ಬರೆದ ಬರಹನು
ರೂಢಿಯೊಳತಿಚೆಲುವ ಇವನೆಂದು ಕಳುಹಿದ ನಾ
ಮಾಡಿದ ಸುಕೃತದ ಫಲದಿ ॥ ೧೧ ॥

ಶ್ರೀಮತು ಮಂತ್ರಿ ದುಷ್ಟಬುದ್ಧಿ ಮದನಗೆ
ನೇಮಿಸಿ ಕಳುಹಿದ ಕಾರ್ಯ
ಸೀಮೆಗರಸು ಇವನಹನು ಕಾಣುತ ಶೀಘ್ರ
ವಿಷವ ಕೊಡುವುದುತ್ತಮವು ॥ ೧೨ ॥

ಒಂದು ಲಿಖಿತ ಸಹಸ್ರ ಲಿಖಿತವು
ಎಂದು ಭಾವಿಸಿ ನಿನ್ನ ಮನದಿ
ಸಂದೇಹವಿಲ್ಲದೆ ವಿಷವ ಕೊಡುವುದು
ಮುಂದಕ್ಕೆ ಲೇಸುಂಟು ನಮಗೆ ॥ ೧೩ ॥

ವಿಪ್ಪನ್ನವಾಗಿರ್ದ ವರನ ಕಾಣುತ ನ
ಮ್ಮಪ್ಪನವರು ಕಳುಹಿದರು
ತಪ್ಪುಂಟು ಇದರೊಳು ಕೆಡುವುದು ಕಾರ್ಯ ಕೈ
ತಪ್ಪೆಂದು ಮನದಲ್ಲಿ ತಿಳಿದು ॥ ೧೪ ॥

ವಾಕಾರವನೆ ಚೆಳ್ಳುಗುರಿಂದಲಿ ತಿದ್ದಿ
ಏಕಾರವನೆ ಮಾಡಿದಳು
ಜೋಕೆಯಿಂದಲಿ ಎಂದಿನಂದದಿ ಕಟ್ಟಿ ವಿರ
ಹಾಕಾತುರದಿಂದ ಮರುಗಿದಳು ॥ ೧೫ ॥

ಉಚ್ಚಿ ನೋಡಿದನು ಓಲೆಯನಾಗ ಮಂತ್ರಿಯು
ಉತ್ಸಾಹದೊಸಗೆ ಸಂಭ್ರಮವ
ಅಚ್ಯುತ ಹರಿಯ ಕಿಂಕರ ತಂಗಿಗೆ ವರನೆಂದು
ನಮ್ಮಪ್ಪ ಮೆಚ್ಚಿದನೀ ವರನ ॥ ೧೬ ॥

ಗುಡಿ ತೋರಣಗಳ ಕಟ್ಟಿ ಪಟ್ಟಣವನ್ನು
ತಡಮಾಡದೆ ಸಿಂಗರಿಸಿ
ಗಿಡಿಬಿಡಿ ತಮ್ಮಟ ವಾದ್ಯಗಳು ಉ
ಗ್ಗಡಿಸಿತು ಕುಂತಳ ಪುರದಿ ॥ ೧೭ ॥

ನಂಬಿದ ಭಕ್ತ ಕುಟುಂಬಿ ರಕ್ಷಕನಹು
ದೆಂಬ ಹೆಳವನಕಟ್ಟೆ ರಂಗ
ಬೆಂಬಿಡದಲೆ ಇಂದುಹಾಸನ ಮದುವೆಗಾ
ರಂಭಗಳನೆ ಮಾಡಿಸಿದ ॥ ೧೮ ॥

## ಕವಿ–ಕಾವ್ಯ ವಿಚಾರ

**ಹೆಳವನಕಟ್ಟೆ ಗಿರಿಯಮ್ಮ [ಕ್ರಿ.ಶ. ೧೭೫೦]**

ಹೆಳವನಕಟ್ಟೆ ಗಿರಿಯಮ್ಮನ ಜನ್ಮಸ್ಥಳ ರಾಣಿಬೆನ್ನೂರು. ಮಲೆಬೆನ್ನೂರಿನ ತಿಪ್ಪರಸ ಕುಲಕರಣಿಯೊಂದಿಗೆ ಈಕೆಯ ವಿವಾಹವಾಗಿತ್ತು. ಈಕೆ ಮಲೆ ಬೆನ್ನೂರಿನ ಸಮೀಪದ ಹೆಳವನ ಕಟ್ಟೆಯ ರಂಗನಾಥನ ಭಕ್ತಳಾಗಿದ್ದಳು. ತನ್ನ ಇಷ್ಟದೈವವಾದ ಹೆಳವನಕಟ್ಟೆಯ ರಂಗನಾಥನ ಅಂಕಿತದಲ್ಲಿಯೇ ಕೀರ್ತನೆಗಳನ್ನು ಹಾಡುಗಬ್ಬಗಳನ್ನು ರಚಿಸಿದ್ದಾಳೆ. ಈಕೆಯ ಗೋಪಾಲದಾಸರ [೧೭೨೧–೧೭೬೨] ಪ್ರೇರಣೆಯಿಂದ ಕೃತಿ ರಚನೆ ಮಾಡಿದ್ದಾಳೆ. 'ಚಂದ್ರಹಾಸನ ಕಥೆ', 'ಕೃಷ್ಣಕೊರವಂಜಿ', 'ಬ್ರಹ್ಮ ಕೊರವಂಜಿ', 'ಉದ್ದಾಳಿಕನ ಕಥೆ', 'ಲವಕುಶರ ಕಾಳಗ'– ಮೊದಲಾದವು ಗಿರಿಯಮ್ಮನ ಕೃತಿಗಳು. ಇಲ್ಲಿನ ಪದ್ಯಭಾಗವನ್ನು 'ಚಂದ್ರಹಾಸನ ಕಥೆ' ಎಂಬ ಸಾಂಗತ್ಯದಿಂದ ತೆಗೆದುಕೊಳ್ಳಲಾಗಿದೆ.

ರಾಜನ ಮಗನಾಗಿ ಹುಟ್ಟಿದರೂ ಬಾಲ್ಯದಲ್ಲೇ ತಂದೆ ತಾಯಿಗಳನ್ನು ಕಳೆದುಕೊಂಡು ಅನಾಥನಾಗಿ ಬೆಳೆದ ಬಾಲಕ ಚಂದ್ರಹಾಸ. ಈ ಬಾಲಕನನ್ನು ಕೊಲ್ಲಿಸಲು ಕುಂತಳ ನಗರದ ಮಂತ್ರಿಯಾದ ದುಷ್ಟಬುದ್ಧಿಯು ಮಾಡಿದ ಕುತಂತ್ರ ಫಲಿಸಲಿಲ್ಲ. ಪುಳಿಂದಕನ ಸಾಕುಮಗನಾಗಿ ಬೆಳೆಯುತ್ತಿದ್ದ ಚಂದ್ರಹಾಸನನ್ನು ಕೊಲ್ಲಿಸಲು ಮತ್ತೊಂದು ಸಂಚನ್ನು ಹೂಡಿದನು. ಅವನು ಚಂದ್ರಹಾಸನ ಕೈಗೆ ಪತ್ರವೊಂದನ್ನು ಕೊಟ್ಟು ಅದನ್ನು ತನ್ನ ಮಗನಾದ ಮದನನಿಗೆ ಕೊಟ್ಟು ಬರುವಂತೆ ನೇಮಿಸಿದನು. ಕುಂತಳಪುರಕ್ಕೆ ಹೊರಟ ಚಂದ್ರಹಾಸನು ನಗರ ಸಮೀಪದ ಉದ್ಯಾನವನವೊಂದರಲ್ಲಿ ಮಾವಿನ ಮರದ ಕೆಳಗೆ ನಿದ್ರಿಸುತ್ತ ಮಲಗಿದ್ದನು. ಇದೇ ಸಮಯದಲ್ಲಿ ದುಷ್ಟಬುದ್ಧಿಯ ಮಗಳು 'ವಿಷಯೆ' ತನ್ನ ಸಖಿಯರೊಂದಿಗೆ ವನವಿಹಾರಕ್ಕೆ ಬಂದಳು– ಮುಂದಿನದು ಈ ಕಥಾಭಾಗ.

'ವಿಷವ' ಮತ್ತು 'ವಿಷಯ' ಎಂಬ ಪದಗಳಲ್ಲಿ ಒಂದು ಅಕ್ಷರ ಪಲ್ಲಟದಿಂದ ಅನಾಹುತವೊಂದು ತಪ್ಪಿ ಸುಖಾಂತವಾದ ಪ್ರಸಂಗ ಇಲ್ಲಿದೆ. ಪತ್ರದ ಮುಂದಿನ ಸಾಲುಗಳ ಅರ್ಥ ಬದಲಾವಣೆಗೆ ಹೊಂದುವಂತಿರುವುದು ಈ ಪ್ರಸಂಗದ ಒಂದು ವೈಶಿಷ್ಟ್ಯ.

## ಶಬ್ದಾರ್ಥ ವಿವರಣೆ

೧. ಪ್ರಾಯ– ಹರಯ, ವಯಸ್ಸು; ೨. ಚೂತ ವೃಕ್ಷ– ಮಾವಿನ ಮರ. ೩. ವಾರಿಜ– ಕಮಲ; ೪. ಬಿಳಿಯಾನೆ– ಇಂದ್ರನ ಐರಾವತ; ಮೃಗ– ಜಿಂಕೆ; ೫. ವಸುದೇವಸುತನಾತ್ಮಜ– ಮನ್ಮಥ; ಕುಸುಮಬಾಣ– ಮನ್ಮಥನ ಹೂಬಾಣ; ವಿಸ್ಮಯ– ಆಶ್ಚರ್ಯ; ೬. ಸಾರು– ಹತ್ತಿರ ಹೋಗು; ೭. ನೆರೆಯೆ– ಸೇರಲು; ೮. ಮಸ್ತುಕ– ತಲೆ; ೯. ಚೊಗೆ– ಅಂಗಿ; ಕುಪ್ಪಸ– ನಿಲುವಂಗಿ [ಸಂ. ಕೂರ್ಪಾಸ]; ೧೦. ಸಾರ್ದು– ಸಮೀಪಿಸಿ; ೧೧. ಮೋಡಿ– ಬರವಣಿಗೆಯ ವಿಧಾನ; ೧೨. ರೂಢಿ–ಲೋಕ; ೧೩. ಸುಕೃತ– ಪುಣ್ಯ; ೧೪. ವಿಪ್ಪನ್ನ> ವಿಪನ್ನ, ಕಷ್ಟಕ್ಕೆ ಗುರಿಯಾದ; ೧೫. ಚೆಳ್ಳುಗುರು– ಚೂಪಾದ ಉಗುರು; ೧೬. ಒಸಗೆ– ಶುಭ, ಉಚ್ಚು<ಉರ್ಚು–ಬಿಚ್ಚು; ಅಚ್ಯುತ– ನಾಶವಿಲ್ಲದವ; ಕಿಂಕರ–ಸೇವಕ; ೧೭. ಗಿಡಿಬಿಡಿ– ಒಂದು ವಾದ್ಯ.

## ೧. ಸಂದರ್ಭ ಸಹಿತ ವಿವರಿಸಿ

೧. ಪೃಥುವಿಯೊಳಗೆ ಇಂಥ ಚೆಲುವನಿಲ್ಲ.
೨. ಚಂದ್ರನೆಂಬೆನೆ ಮೃಗವಿಲ್ಲ.
೩. ಹೊತ್ತಲ್ಲವೆಂದು ಸಾರುವಳು.
೪. ನೋಡಿದು ತಮ್ಮ ತಂದೆಯ ಸ್ವಹಸ್ತದ ಮೋಡಿಯ ಬರೆದ ಬರಹ.
೫. ಏಕಾರವನೆ ಮಾಡಿದಳು

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಚಿಕ್ಕ ಪ್ರಾಯದ ಕೋಮಲಾಂಗಿ ಯಾರು?
೨. ಚಂದ್ರಹಾಸನು ಎಲ್ಲಿ ಮಲಗಿದ್ದನು?
೩. ವಿಷಯೆ ಏಕೆ ಮೂರ್ಛೆ ಹೋದಳು?
೪. ಮದನನು ಯಾರು?
೫. ವಿಷಯೆ ಪತ್ರವನ್ನು ಯಾವುದರ ಸಹಾಯದಿಂದ ತಿದ್ದಿದಳು?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಶಿವ, ನಾರಾಯಣ, ಇಂದ್ರ, ಚಂದ್ರ ಮತ್ತು ಮನ್ಮಥರನ್ನು ಗುರುತಿಸಿರುವ ಬಗೆ ಹೇಗೆ?
೨. ಚಂದ್ರಹಾಸನು ಯಕ್ಷನೋ ಗಂಧರ್ವನೋ ಆಗಿರಬೇಕೆಂದು ವಿಷಯೆ ಹೇಗೆ ನಿರ್ಧರಿಸಿದಳು?
೩. ಚಂದ್ರಹಾಸನನ್ನು ಕಂಡ ವಿಷಯೆಯ ಮಾನಸಿಕ ಹೊಯ್ದಾಟವು ಹೇಗೆ ಚಿತ್ರಿತವಾಗಿದೆ?

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಸಾವಿಗೆ ಕಾರಣವಾಗಬೇಕಿದ್ದ ಪತ್ರವು ಹೇಗೆ ಚಂದ್ರಹಾಸನ ವಿವಾಹಕ್ಕೆ ಕಾರಣವಾಯಿತು?
೨. ಚಂದ್ರಹಾಸನನ್ನು ಒಬ್ಬ ಅದೃಷ್ಟವಂತ ಎನ್ನಬಹುದೇ? ಹೇಗೆ? ವಿವರಿಸಿ.

***



# ೪. ಗಿರಣಿ ವಿಸ್ತಾರ ನೋಡಮ್ಮಾ

**ಶಿಶುನಾಳ ಶರೀಫ**

ಗಿರಣಿ ವಿಸ್ತಾರ ನೋಡಮ್ಮಾ ಇದಕೆ
ಪರಾಕು ಮಾಡಮ್ಮಾ ॥ ಪ ॥
ಧರಣಿಪತಿ ಮಹಾರಾಣಿ ದೊರೆಗಳು
ಕರ್ನಾಟಕ ರಾಜ್ಯದಿ
ಮೆರೆಸಿದ ಮಹಾಚೋದ್ಯ ವಿದ್ಯ ಅರಿಯದಾಯಿತು ನರರಿಗೆಲ್ಲಾ ॥ ಅ.ಪ ॥

ಜಲ ಅಗ್ನಿ ವಾಯು ಒಂದಾಗಿ
ಕಲೆತು ಚಂದಾಗಿ
ಜಲ ಅಗ್ನಿ ವಾಯು ಒಂದಾಗಿ
ನೆಲದಿಂದ ಗಗನಕ್ಕೆ ಮುಟ್ಟಿದಂತೆ ಕಾಂಬುದು
ಚಲುವ ಮಧ್ಯದ ಕಂಬವೊ, ಹೊಗಿ ಬಿಂಬವೋ ॥ ೧ ॥

ಒಳಗೊಂದು ಬೇರೆ ಆಕಾರ
ತಿಳಿಕೋ ಚಮತ್ಕಾರ
ಒಳಗೊಂದು ಬೇರೆ ಆಕಾರ
ದಳಗಳೊಂಬತ್ತು ಚಕ್ರ ಸುಳಿವ ಸೂತ್ರದ ದಾರದಲ್ಲಿ
ಒಳಗೆ ಹೊರಗೆ ನವಕೊಳಿವೆಯೋ ಇದರೊಳಿವೆಯೋ ॥ ೨ ॥

ಆಲಿಯೊಳಿಟ್ಟರಳಿ ಹಿಂಜಿ
ಅಲ್ಲ್ಯಾದವೊ ಹಂಜಿ
ಆಲಿಯೊಳಿಟ್ಟರಳಿ ಹಿಂಜಿ
ಗಾಲಿಯೊಂದರ ಮೇಲೆ ಬ್ರಹ್ಮದ ಕೀಲ
ಮೂಲ ಸುಷುಮ್ನದಲಿ ಜೋಲುತಿರುವುದು ನಾಡಿ ಅಲ್ಲ್ಯಾಯ್ತು ಕುಕ್ಕಡಿ ॥ ೩ ॥

ಪರಬೊಮ್ಮನ ಪಟ್ಟವೊ ಅಲ್ಲೆ
ಪ್ರಾಣವನು ಮರೆತಿಟ್ಟವೊ
ಪರಬೊಮ್ಮನ ಪಟ್ಟವೊ
ಧರಣೀಲಿ ಶಿಶುವಿನಾಳ ದೇವಾಂಗ ಋಷಿಯಿಂದ
ನೇಸಿ ಹಚ್ಚಡ ಹೊಚ್ಚಿತೋ ಲೋಕವೆಲ್ಲಾ ಮೆಚ್ಚಿತೋ ॥ ೪ ॥

## ಕವಿ–ಕಾವ್ಯ ವಿಚಾರ

**ಶಿಶುನಾಳ ಶರೀಫ [ಕ್ರಿ.ಶ. ೧೮೧೯–೧೮೮೯]**

ಕರ್ನಾಟಕದ ಕಬೀರ ಎಂದು ಕರೆಸಿಕೊಂಡ ಕನ್ನಡದ ಮಹಮ್ಮದೀಯ ಸಂತ ಕವಿ. ಈತನ ಜನ್ಮಸ್ಥಳ ಧಾರವಾಡ ಜಿಲ್ಲೆಯ ಶಿಶುನಾಳ. ತಂದೆ ಇಮಾಮ್‌ಸಾಹೇಬ. ಗುರು ಕಳಸದ ಗೋವಿಂದಭಟ್ಟನೆಂಬ ಬ್ರಾಹ್ಮಣ. ಶರೀಫ ಜಾತಿ ಮತಗಳ ಗಡಿಯನ್ನು ದಾಟಿ ನಿಂತ ಜನಪದ ಕವಿ. ದಾರ್ಶನಿಕ, ಸಮನ್ವಯಕಾರ, ಹರಿ–ಹರ–ಹಜರತ ತತ್ವಗಳ ತ್ರಿವೇಣಿ ಸಂಗಮವಾದ ಈತ ಉತ್ತರ ಕರ್ನಾಟಕದ ಜನಪ್ರಿಯ ಕವಿ, ಅನುಭಾವಿ, ಅವಧೂತ.

ಶರೀಫನ ಗೀತೆಗಳು ಮೇಲು ನೋಟಕ್ಕೆ ನಮ್ಮ ದೈನಂದಿನ ಬದುಕಿನ ಸಂಗತಿಗಳನ್ನು ನಿರೂಪಿಸುವಂತೆ ಕಾಣುತ್ತವೆ. ಆದರೆ ಅವುಗಳಿಗೆ ಬೇರೊಂದು ತಾತ್ವಿಕ ಅರ್ಥವೂ ಇರುತ್ತದೆ. ದಿನನಿತ್ಯದ ಸಂಗತಿಗಳು ಅವನ ಪದ್ಯಗಳಲ್ಲಿ ಆಧ್ಯಾತ್ಮದ ಮೆರುಗನ್ನು ಪಡೆದು ಪರಮಾರ್ಥ ದೃಷ್ಟಿಯ ರೂಪಕ ಪ್ರತಿಮೆಗಳಾಗಿ ಬಿಡುತ್ತವೆ.

ಹುಬ್ಬಳ್ಳಿಯಲ್ಲಿ ಹೊಸದಾಗಿ ಹತ್ತಿಗಿರಣಿಯು ಪ್ರಾರಂಭವಾದಾಗ ಅದರ ಉದ್ದನೆಯ ಹೊಗೆ ಕೊಳವೆ, ತಿರುಗುವ ಚಕ್ರ, ಹತ್ತಿಯನ್ನು ಹಿಂಜುವ ರೀತಿ– ಹೀಗೆ ಯಂತ್ರದ ಕಾರ್ಯಾಚರಣೆಯನ್ನು ಜನರು ಬೆರಗಾಗಿ ನೋಡಿದರು. ಮಾನವ ನಿರ್ಮಿತವಾದ ಈ ಯಂತ್ರಕ್ಕಿಂತ ಶರೀಫನಿಗೆ ದೈವ ನಿರ್ಮಿತವಾದ ಶರೀರ ಯಂತ್ರವೇ ಅದ್ಭುತವಾಗಿ



ಕಂಡಿತು. ಯಂತ್ರ ಬರಿಯ ಹೊಟ್ಟೆಯನ್ನು ನೇಯುತ್ತದೆ. ಆದರೆ ಪರಮಾತ್ಮ ನೇಯುವ ದೇಹವೆಂಬ ಬಟ್ಟೆಗೆ ಜೀವವಿದೆ. ಜ್ಞಾನವಿದೆ ಎಂದು ಕವಿ ಭಾವಿಸುತ್ತಾನೆ. ಹೊಸ ಆವಿಷ್ಕಾರಕ್ಕೆ ಸಮಕಾಲೀನ ಕವಿಯೊಬ್ಬ ಹೇಗೆ ಸ್ಪಂದಿಸಿದ ಎಂಬುದು ಇಲ್ಲಿ ಗಮನಾರ್ಹವಾದದ್ದು.

## ಶಬ್ದಾರ್ಥ ವಿವರಣೆ

ಪಲ್ಲವಿ: ಪರಾಕುಮಾಡು– ಹೊಗಳು; ಧರಣಿಪತಿ ಮಹಾರಾಣಿ ದೊರೆಗಳು– ರಾಜನಂತೆ ಆಳುವ ವಿಕ್ಟೋರಿಯಾ ರಾಣಿ ಎಂಬ ಚಕ್ರವರ್ತಿನಿ; ಚೋದ್ಯ–ಆಶ್ಚರ್ಯ; ಅರಿಯದಾಯಿತು– ತಿಳಿಯದೆ ಹೋಯಿತು.

೧. ಜಲ ಅಗ್ನಿ ವಾಯು ಒಂದಾಗಿ.... ಗಿರಣಿಯು ನೀರು, ಬೆಂಕಿ, ಗಾಳಿಗಳನ್ನು ಸ್ವೀಕರಿಸುತ್ತದೆ. ಅದರ ಹೊಗೆ ಕೊಳವೆ ಭೂಮಿ ಆಕಾಶಗಳಿಗೆ ಸಂಪರ್ಕ ಕಲ್ಪಿಸಿದಂತೆ ಕಾಣುತ್ತದೆ. ದೇಹವೂ ಕೂಡ ಪಂಚಭೂತಗಳಿಂದ ನಿರ್ಮಿತವಾಗಿದೆ. ದೇಹವೇ ಕಂಬ. ಆತ್ಮವೇ ಬಿಂಬ.

೨. ಹೊರಗೆ ಒಂಬತ್ತು ದಳದ ಚಕ್ರ. ಒಳಗೆ ಒಂಬತ್ತು ದಾರ ಹರಿದು ಬರುವ ಕೊಳವೆಗಳು. ಇದು ಯಂತ್ರದ ಸ್ವರೂಪ. ದೇಹವೆಂಬ ಯಂತ್ರಕ್ಕೆ ಹೊರಗೆ ನವದ್ವಾರಗಳು, ಒಳಗೆ ಷಟ್ಚಕ್ರಗಳು.

೩. ಆಲಿ–ಯಂತ್ರದಲ್ಲಿ ಹತ್ತಿ ತುಂಬುವ ಭಾಗ. ಅರಳಿ<ಅರಳೆ–ಬೀಜ ತೆಗೆದ ಹಂಜಿ–ಶುದ್ಧಗೊಳಿಸಿದ ಹತ್ತಿಯ ಸುರುಳಿ–ಹತ್ತಿಯನ್ನು ಯಂತ್ರವು ಹಿಂಜಿ ಹಂಜಿಯನ್ನು ಮಾಡುತ್ತದೆ; ಅನಂತರ ನೂಲಿನ ಉಂಡೆಯಾಗಿ ಹೊರಬರುತ್ತದೆ. ಕುಕ್ಕಡಿ–ನೂಲಿನ ಯಂತ್ರದ ಗಾಲಿಯನ್ನು ನಿಯಂತ್ರಿಸುವ ಸಾಧನವಾದ ಕೀಲು ಚಕ್ರದ ಮೇಲಿದೆ. ಹೀಗೆ ದೈಹಿಕ ಕ್ರಿಯೆಗಳನ್ನು ನಿಯಂತ್ರಿಸುವ ಜ್ಞಾನದ ಕೀಲು ನೆತ್ತಿಯಲ್ಲಿದೆ. ಇದೇ ಸುಷುಮ್ನ.

ಬಟ್ಟೆ ಗಿರಣಿಯ ಸೃಷ್ಟಿ; ದೇಹ ಬ್ರಹ್ಮ ನೆಯ್ದ ಬಟ್ಟೆ. ಇದರಲ್ಲಿ ಜ್ಞಾನವನ್ನೂ ಪ್ರಾಣವನ್ನೂ ಇರಿಸಿದ್ದಾನೆ. ದೇವರೇ ಒಬ್ಬ ನೇಕಾರ. ಅವನು ದೇಹಗಳೆಂಬ ಬಟ್ಟೆಯನ್ನು ಲೋಕ ಮೆಚ್ಚುವಂತೆ ನೇಯುತ್ತಾನೆ.

೪. ಪರಬೊಮ್ಮ< ಪರಬ್ರಹ್ಮ– ದೇವರು; ಪಟ್ಟ–ಬಟ್ಟೆ; ದೇವಾಂಗ–ನೇಕಾರ, ಹಚ್ಚಡ–ಹೊದೆಯುವ ಬಟ್ಟೆ.

## ೧. ಸಂದರ್ಭ ಸಹಿತ ವಿವರಿಸಿ

೧. ಚಲುವ ಮಧ್ಯದ ಕಂಬವೋ ಹೋಗಿ ಬಿಂಬವೋ
೨. ದಳಗಳೊಂಬತ್ತು ಸುಳಿವ ಸೂತ್ರದ ಹಾರದಲ್ಲಿ
೩. ಆಲಿಯೊಳಟ್ಟರಳಿ ಹಿಂಜಿ
೪. ದೇವಾಂಗ ಋಷಿಯಿಂದ ನೇಸಿ ಹಚ್ಚಡ ಹೊಚ್ಚಿತೋ

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಕರ್ನಾಟಕ ರಾಜ್ಯಕ್ಕೆ ಗಿರಣಿಯನ್ನು ತರಿಸಿದವರು ಯಾರು?
೨. ಗಿರಣಿಯ ಕಂಬ ಹೇಗೆ ಕಾಣುತ್ತದೆ?
೩. ಗಿರಣಿಯ ಚಕ್ರಕ್ಕೆ ಎಷ್ಟು ದಳಗಳಿವೆ?
೪. ಅರಳೆಯನ್ನು ಹಿಂಜಿದರೆ ಏನಾಗುತ್ತದೆ?
೫. ದೈಹಿಕ ಚಟುವಟಿಕೆಗಳನ್ನು ನಿಯಂತ್ರಿಸುವ ಕೀಲು ಯಾವುದು?
೬. ದೇವರು ನೇಯ್ದ ಬಟ್ಟೆ ಯಾವುದು?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ದೇಹ ಮತ್ತು ಗಿರಣಿ– ಇವುಗಳಲ್ಲಿರುವ ಸಮಾನಾಂಶಗಳು ಯಾವುವು?
೨. ಗಿರಣಿ, ಯಂತ್ರ, ಬಟ್ಟೆ– ಇವುಗಳಿಗೂ ದೇಹಕ್ಕೂ ಕವಿ ಹೇಗೆ ಸಂಬಂಧ ಕಲ್ಪಿಸಿದ್ದಾನೆ?
೩. ಶರೀಫರು ಹೇಳುವ ಅಚ್ಚರಿಯ ಸಂಗತಿ ಯಾವುದು?
೪. ಯಂತ್ರ ನೇಯುವ ಬಟ್ಟೆಗೂ ಬ್ರಹ್ಮ ನೇಯುವ ಬಟ್ಟೆಗೂ ಇರುವ ವ್ಯತ್ಯಾಸವೇನು?
೫. ದೇವರೇ ಒಬ್ಬ ನೇಕಾರ. ಹೇಗೆ?

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಮಾನವನ ಶರೀರವನ್ನು ಶರೀಫರು ಹತ್ತಿಯ ಗಿರಣಿಯೊಂದಿಗೆ ತೌಲನಿಕವಾಗಿ ಚರ್ಚಿಸಿರುವ ಬಗೆಯನ್ನು ವಿವರಿಸಿ.
೨. ಹತ್ತಿಯ ಗಿರಣಿಗಿಂತ ಮಾನವ ಶರೀರವೇ ಅದ್ಭುತ ಯಂತ್ರ ಹೇಗೆ?
೩. ಶಿಶುನಾಳ ಶರೀಫರ ತಂತ್ರಶಾಸ್ತ್ರದ ಜ್ಞಾನ ಈ ಪದ್ಯದಲ್ಲಿ ಕಂಡುಬರುವ ಬಗೆ ಹೇಗೆ?

***

# ೫. ಕುರುಡು ಕಾಂಚಾಣಾ

**ಅಂಬಿಕಾತನಯದತ್ತ**

ಕುರುಡು ಕಾಂಚಾಣಾ ಕುಣಿಯುತ್ತಲಿತ್ತು
ಕಾಲಿಗೆ ಬಿದ್ದವರ ತುಳಿಯುತಲಿತ್ತೋ
ಕುರುಡು ಕಾಂಚಾಣಾ

ಬಾಣಂತಿಯೆಲುಬ ಸಾ
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ

ಸಣ್ಣ ಕಂದಮ್ಮಗಳ
ಕಣ್ಣೀನ ಕವಡೀಯ
ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ

ಬಡವರ ಒಡಲಿನ
ಬಡ ಬಾನಲದಲ್ಲಿ
ಸುಡು ಸುಡು ಪಂಜು ಕೈಯೊಳಗಿತ್ತೋ

ಕಂಬನಿ ಕುಡಿಯುವ
ಹುಂಬ ಬಾಯಿಲೆ ಮೈ
ದುಂಬಿದಂತುಧೊ ಉಧೋ ಎನ್ನುತಲಿತ್ತೋ

ಕೂಲಿ ಕುಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ

ಗುಡಿಯೊಳಗೆ ಗಣಣ, ಮಾ
ಹಡಿಯೊಳಗ ತನನ, ಆಂ
ಗಡಿಯೊಳಗ ಝಣಝಣ ನುಡಿಗೂಡುತಿತ್ತೋ

ಹ್ಯಾಂಗಾರೆ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲಿ ಎತ್ತೋ

## ಕವಿ–ಕಾವ್ಯ ವಿಚಾರ

**ದ.ರಾ. ಬೇಂದ್ರೆ [೧೮೯೬–೧೯೮೧]**

ದ.ರಾ. ಬೇಂದ್ರೆ ಎಂಬ ಹೆಸರಿನ ಮೂಲಕ ಖ್ಯಾತರಾದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಕನ್ನಡ ನಾಡು ಕಂಡ ಶ್ರೇಷ್ಠ ಕವಿಗಳಲ್ಲಿ ಒಬ್ಬರು. ಅಂಬಿಕಾತನಯದತ್ತ ಇವರ ಕಾವ್ಯನಾಮ. ಧಾರವಾಡದಲ್ಲಿ ಗೆಳೆಯರ ಗುಂಪನ್ನು ಕಟ್ಟಿ ಸಾಹಿತ್ಯ ವಾತಾವರಣ ಬೆಳೆಯುವಂತೆ ಮಾಡಿದ್ದು ಅವರಿಗಿದ್ದ ಸಾಹಿತ್ಯ ಪ್ರೀತಿಯ ದ್ಯೋತಕ.

ಕೃಷ್ಣಕುಮಾರಿ, ಗರಿ, ಸಖೀಗೀತ, ಉಯ್ಯಾಲೆ, ನಾದಲೀಲೆ, ಗಂಗಾವತರಣ, ನಾಕುತಂತಿ ಮೊದಲಾದ ಇಪ್ಪತ್ತಕ್ಕೂ ಹೆಚ್ಚು ಕವನಸಂಕಲನಗಳನ್ನು, ಹುಚ್ಚಾಟ, ಹೊಸಸಂಸಾರ ಮತ್ತು ಇತರ ನಾಟಕಗಳು ಮೊದಲಾದ ನಾಟಕ ಕೃತಿಗಳನ್ನು ಬೇಂದ್ರೆ ರಚಿಸಿದ್ದಾರೆ. 'ಸಾಹಿತ್ಯದ ವಿರಾಟ್ ಸ್ವರೂಪ' ಬೇಂದ್ರೆಯವರ ವಿದ್ವತ್‌ಪ್ರತಿಭೆಯನ್ನು ಸಾರುವ ವಿಮರ್ಶಾಗ್ರಂಥ. ಇವಲ್ಲದೆ ಅರವಿಂದರ ಅನೇಕ ಕೃತಿಗಳನ್ನು, ಠಾಗೋರ್, ಕಬೀರ್ ಮೊದಲಾದ ಕವಿಗಳ ಕವಿತೆಗಳನ್ನು ಬೇಂದ್ರೆ ಕನ್ನಡಕ್ಕೆ ಅನುವಾದಿಸಿದ್ದಾರೆ. ೧೯೪೩ರಲ್ಲಿ ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ ಬೇಂದ್ರೆಯವರಿಗೆ ೧೯೬೮ರಲ್ಲಿ ಪದ್ಮಶ್ರೀ ಪ್ರಶಸ್ತಿಯೂ, ೧೯೭೩ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿಯೂ ಲಭಿಸಿದೆ.



## ಶಬ್ದಾರ್ಥ

ಕಾಂಚಾಣ– ಹಣ; ಸಾಬಾಣ– ಸಾಬೂನು; ಕವಡಿ– ಕವಡೆ, ಒಡಲು– ದೇಹ; ಬಡಬಾನಲ– ಕಿಚ್ಚು; ತೊಗಲು– ಚರ್ಮ.

## ೧. ಸಂದರ್ಭ ಸಹಿತ ವಿವರಿಸಿ

೧. ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ
೨. ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ
೩. ಗುಡಿಯೊಳಗೆ ಗಣಣ ಮಹಡಿಯೊಳಗೆ ತನನ
೪. ಅಂಗಾತ ಬಿತ್ತೋ, ಹೆಗಲಲಿ ಎತ್ತೋ

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಕುರುಡು ಕಾಂಚಾಣ ಯಾರನ್ನು ತುಳಿಯತ್ತಲಿತ್ತು?
೨. ಬಾಣಂತಿಯ ಎಲುಬು ಯಾವುದರ ಬಣ್ಣದ್ದಾಗಿದೆ?
೩. ಕಾಂಚಾಣದ ಕೊರಳೊಳಗಿದ್ದದ್ದು ಯಾವ ಜೋಮಾಲೆ?
೪. ಹುಂಬ ಬಾಯಿ ಏನನ್ನು ಕುಡಿಯುತ್ತಿತ್ತು?
೫. ಕಡೆಗೆ ಕುರುಡು ಕಾಂಚಾಣ ಕುಣಿಕುಣಿದು ಏನಾಯಿತು?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಬಾಣಂತಿ ಮತ್ತು ಸಣ್ಣ ಕಂದಮ್ಮಗಳನ್ನು ಕುರುಡ ಕಾಂಚಾಣ ಏನು ಮಾಡಿತ್ತು?
೨. ಬಡವರನ್ನು ಕುರುಡು ಕಾಂಚಾಣ ಶೋಷಿಸಿದ್ದು ಹೇಗೆ?
೩. ಕುರುಡು ಕಾಂಚಾಣ ಹೇಗೆ ಅಂತ್ಯವಾಯಿತು?

## ೩. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಶ್ರೀಮಂತರ ದಬ್ಬಾಳಿಕೆಯನ್ನು ಬೇಂದ್ರೆಯವರು 'ಕುರುಡು ಕಾಂಚಾಣಾ' ಪದ್ಯದಲ್ಲಿ ಚಿತ್ರಿಸಿರುವ ಬಗೆ ಹೇಗೆ?
೨. 'ಕುರುಡು ಕಾಂಚಾಣಾ' ಪದ್ಯದ ಸಾರಾಂಶವನ್ನು ಬರೆಯಿರಿ.

***

## ೬. ಬತ್ತಲಾರದ ಗಂಗೆ

### ಎಂ. ಗೋಪಾಲಕೃಷ್ಣ ಅಡಿಗ

ಬತ್ತಲಾರದ ಗಂಗೆಗೆಂಥ ಕುತ್ತಿದು, ನೋಡು;
ಅದೇ ಪಾತ್ರ, ಧಾಟಿ, ವಸ್ತುಗಳ ಪಾಳಿ
ಹೊಸ ನೀರು ಬಂದರೂ ಅದೇ ಪುರಾತನದಮಲು,
ರಂಗಮಂದಿರ ಅದೇ, ನಾಟಕವೂ ಅದೇ

ಹಿಮಾಲಯವೆ ಕರಗಿ ಕೆಳಗಿಳಿವ ವರ್ಷದ ತೊಡಕು,
ಅಮೃತಜಲ ಮೃತ್ತಿಕೆಗಳಸಮ ಜೋಡಿ
ನಿಂತು ಕೊಳೆಯುವ ಮಡುಗಳಲ್ಲಿ ಮಡಗಿಯೆ ಇದೆ
ಹಳೆಕೊಳೆಯ ದುರ್ನಾತ ಕೆಸರು ರಾಡಿ

ಗಂಗಾಳ ತುಂಬ ಗಂಜಿಯನ್ನಿಟ್ಟು ಕುಳಿತಿದ್ದಾಳೆ
ಗಂಗಜ್ಜಿ ಅಂಗಾಂಗ ಸುಕ್ಕಿ ಸೊರಗಿ
ಮುಟ್ಟಲಾರಳು ತೊಟ್ಟು, ಕಣ್ಣ ಮುಂದೆ ಕಟ್ಟಿದೆ ಅಲ್ಲಿ
ಕುರುಕ್ಷೇತ್ರಗಳ ರುಂಡ ರಕ್ತವೇಣಿ

ಕುರುಕ್ಷೇತ್ರ ಚಾಚುತ್ತಲಿದೆ ದೇಶದುದ್ದಕ್ಕೂ; ಪಾತ್ರಗಳೇನೊ
ಅವೇ; ಪಾತ್ರಧಾರಿಗಳು ಬೇರೆ ಬೇರೆ
ದುರ್ಯೋಧನನಿಗೆ ಯುಧಿಷ್ಠಿರ ವೇಷ ಶಕುನಿಯು
ಶ್ರೀಕೃಷ್ಣ ; ಪಾರ್ಥನ ವೇಷ ಉತ್ತರನಿಗೆ.

ಆಕಾಶಗಂಗೆಯಿಂದನಾಮತ್ತಾಗಿಲ್ಲಿ ಬಿದ್ದವರು.
ಈ ಕಾಶಕ್ಕೆ ಸಿಕ್ಕಿದರೂ ಕಾಸೆಗಟ್ಟಿ
ಕೊಳ್ಳಿದೆವ್ವಗಳಂತೆ ಮಿಂಚಿ ಮರೆಯಾದವರು,
ರಾಮಕೃಷ್ಣರು, ಬುದ್ಧ, ಮಹಾವೀರರು
ಕರ್ಪೂರನುಡಿ ಹೊತ್ತಿ ಉರಿದು ಹಿಂದೆಗರಿದರು

ಚಪ್ಪಾಳೆ ಬಿರುಗಾಳಿಯಲೆಗೆ ಸಿಕ್ಕಿ;
ಬದ್ಧರಾದರು ಪುಸ್ತಕಗಳಲ್ಲಿ, ಜಯಂತಿ ಭಜಂತ್ರಿಗಳಲ್ಲಿ
ಅಮೂರ್ತರಾಗಿಯು ಮೂರ್ತಿಯಾಗುಳಿದರು.

ಹೃದಯ ಹೃದಯಗಳಲ್ಲಿ ಹುದುಗಿದಂತರ್ಗಂಗೆ
ತಳಬಿರಿದು ಬಿರುಕು ಬಿಟ್ಟಿರುವ ಧೂಳು;
ದಡದ ಮೇಲಡರಿ ನಿಂತಿದ್ದ ವಿದ್ಯಾರಣ್ಯ
ಬೆಂಗಾಡಾಗಿ ತೋಳ ಭೇತಾಳದೂಳು;

ಬತ್ತಿಹೋಗಲಿ ಗಂಗೆಯೊಂದು ಸಲ ತಳಬಿರಿದು
ಕುರುಕ್ಷೇತ್ರ ಜಪಮಾಲೆ ನುಚ್ಚುನೂರು;
ಕತ್ತು ಕತ್ತರಿಸಲಿಕ್ಕಲ್ಲ ಆ ಇನ್ನೊಬ್ಬನಿರುವುದು, ಎರಡು
ನದಿಗಳೊಂದಾಗಿ ಮುಂದಕೆ ಸಾಗಲು.

ಗಂಗೆಯಿಲ್ಲದ ಕಾಲದಲ್ಲಿ ತಡೆದುಡುಕಿದ ಭಗೀರಥನ
ಸಂಕಲ್ಪ ಬಲದ ಅಸಂಖ್ಯಾತರಿಲ್ಲಿ
ಬಂದೆ ಬರುವರು; ದೇವಗಂಗೆಯ ನೇರ
ಹೃದಯದಂತರ್ಗಂಗೆ ತುಂಬಿ ಚೆಲ್ಲಿ,
ದಡದಲ್ಲಿ ಮತ್ತೆ ವಿದ್ಯಾರಣ್ಯ ಧರ್ಮಕ್ಷೇತ್ರ
ಚಿಗುರುವುವು ಚಿಗಿಯುವುವು ಮುಗಿಲ ಕಡೆಗೆ;
ಕನಸೆ? ಕಲ್ಪನೆಯೆ? ಇಲ್ಲವಾದರೇನಿದೆ ಇಲ್ಲಿ;
ಕಣ್ಣು ಕೀಳುವ ಸೂಜಿ, ಕೊಲುವ ಬಡಿಗೆ.

## ಕೃತಿ ಕರ್ತೃ ವಿಚಾರ

### ಎಂ. ಗೋಪಾಲ ಕೃಷ್ಣ ಅಡಿಗ [೧೯೧೮–೧೯೯೩]

ಎಂ. ಗೋಪಾಲ ಕೃಷ್ಣ ಅಡಿಗರು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊಗೇರಿಯಲ್ಲಿ ಹುಟ್ಟಿದರು. ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, 'ಸಿಮ್ಲಾದ ಸೆಂಟರ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್' ಸಂಸ್ಥೆಯಲ್ಲಿ ಸಂಶೋಧಕ ವಿದ್ವಾಂಸರಾಗಿ ಕಾರ್ಯನಿರ್ವಹಿಸಿದರು.

ನವೋದಯ ಪರಂಪರೆಯ ಜಾಡಿನಲ್ಲಿ ನಡೆದ ಕವಿ ಆ ಕಾಲದ ಆದೇಶ, ಆವೇಶ, ಉಪಮೆ, ರೂಪಕಗಳ ಶೈಲಿಯಲ್ಲಿ ಕಾವ್ಯರಚನೆ ಮಾಡಿದರು. ನಂತರ ನವ್ಯಕಾವ್ಯ ಪ್ರವರ್ತಕರಲ್ಲಿ ಒಬ್ಬರೆನಿಸಿದರು. ಭಾವತರಂಗ, ಕಟ್ಟುವೆವು ನಾವು, ನಡೆದು ಬಂದ ದಾರಿ, ಚಂಡಮದ್ದಳೆ, ಸುವರ್ಣ ಪುತ್ಥಳಿ ಮುಂತಾದ ಕವನ ಸಂಕಲನಗಳು; ಮಣ್ಣಿನ ವಾಸನೆ, ಕನ್ನಡದ ಅಭಿಮಾನ, ವಿಚಾರ ಪಥ ಮೊದಲಾದ ಲೇಖನ ಸಂಗ್ರಹಗಳು; ಆಕಾಶದೀಪ, ಅನಾಥ ಎಂಬ ಎರಡು ಕಾದಂಬರಿಗಳು ಮತ್ತು ಆಯ್ದ ಪ್ರಬಂಧಗಳು, ಕಾವ್ಯಜಗತ್ತು ಎಂಬ ಗದ್ಯಕೃತಿಗಳ ಮೂಲಕ ಅಡಿಗರು ಕನ್ನಡಿಗರ ಮನೆಮಾತಾಗಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಕುಮಾರನ್ ಆಶಾನ್ ಪ್ರಶಸ್ತಿ, ಕಬೀರ ಸಮ್ಮಾನ್, ಪಂಪಪ್ರಶಸ್ತಿ ಮುಂತಾದ ಗೌರವಗಳಿಗೆ ಇವರು ಭಾಜನರಾಗಿದ್ದಾರೆ.

ಪ್ರಸ್ತುತ ಕವನದಲ್ಲಿ ಹೊಸತನಕ್ಕೆ ಒಗ್ಗದೆ ರಾಡಿಯಾಗುತ್ತಿರುವ ಭಾರತದ ಪ್ರಾಚೀನ ಸಂಸ್ಕೃತಿಯ ಮತ್ತು ಅಧಃಪತನಕ್ಕೆ ಇಳಿಯುತ್ತಿರುವ ಸಮಾಜದ ಚಿತ್ರಣವಿದೆ.

## ಶಬ್ದಾರ್ಥ ವಿವರಣೆ

ಕುತ್ತು– ಅಪಾಯ, ಆಪತ್ತು; ಅಮಲು– ಮಾದಕತೆ, ಮತ್ತು; ಮೃತ್ತಿಕೆ– ಮಣ್ಣು; ಗಂಗಾಳ– ತಟ್ಟೆ; ಕಾಶ– ಬಂಧನ; ಕಾಸೆಗಟ್ಟು– ಕಚ್ಚೆಕಟ್ಟಿ ಸಿದ್ಧನಾಗು; ಭಜಂತ್ರಿ– ಓಲಗ, ಕೊಂಡಾಟ; ಊರು– ಕಿರಿಚು; ವಿದ್ಯಾರಣ್ಯ– ವಿದ್ಯಾರಣ್ಯರು ಮತ್ತು ವಿದ್ಯೆ ಅರಣ್ಯ ಎಂಬ ಅರ್ಥವೂ ಇದೆ. ವಿದ್ಯಾರಣ್ಯ ಕ್ಷೇತ್ರ ಇಂದು ಹಾಳು ಹಂಪೆಯಾಗಿದೆ ಎಂಬ ಸೂಚನೆಯೂ ಇದೆ; ಉಡುಕು– ಒತ್ತು, ಅದುಮು.

**ವಿದ್ಯಾರಣ್ಯ**

ಐತಿಹ್ಯಗಳ ಪ್ರಕಾರ ೧೪ನೆಯ ಶತಮಾನದಲ್ಲಿ ವಿಜಯನಗರ ಸ್ಥಾಪನೆಗೆ ಪ್ರೇರಣೆ ನೀಡಿದರೆಂದೂ, ಹಿಂದೂ ಧರ್ಮದ ಪುನರುದ್ಧಾರಕ್ಕೆ ಪ್ರೋತ್ಸಾಹಿಸಿದರೆಂದೂ ಹೇಳಲಾದ ಯತಿಗಳು. ಇವರ 'ವಿವರಣಪ್ರಮೇಯ ಸಂಗ್ರಹ' ಮಹತ್ವದ ಕೃತಿ. ಪಂಚದಶೀ, ಜೀವನ್ಮುಕ್ತಿ ವಿವೇಕ, ಅನುಭೂತಿ ಪ್ರಕಾಶ ಎಂಬ ಕೃತಿಗಳನ್ನೂ ಬರೆದಿದ್ದಾರೆ.

**ಭಗೀರಥ**

ಇಕ್ಷ್ವಾಕು ವಂಶದ ದಿಲೀಪನ ಮಗ. ಈತ ತನ್ನ ಅಜ್ಜಂದಿರಾದ ಅರವತ್ತು ಸಾವಿರ ಮಂದಿ ಸಗರನ ಮಕ್ಕಳಿಗೆ ಸದ್ಗತಿಯನ್ನು ಉಂಟುಮಾಡುವ ಮಹತ್ಕಾರ್ಯವನ್ನು ಕೈಗೊಳ್ಳುತ್ತಾನೆ. ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ, ಎಷ್ಟೇ ಅಡ್ಡಿ–ಆಚರಣೆಗಳು ಬಂದರೂ, ತನ್ನ ಪ್ರಯತ್ನವನ್ನು ಬಿಡದೆ ದೇವಲೋಕದಿಂದ ಭೂಲೋಕಕ್ಕೆ ಗಂಗೆಯನ್ನು ಹರಿದು ಬರುವಂತೆ ಮಾಡುತ್ತಾನೆ. ಇವನ ಈ ಪ್ರಯತ್ನವನ್ನು 'ಭಗೀರಥ ಪ್ರಯತ್ನ' ಎಂದೇ ಹೆಸರಿಸಿ ಕರೆಯುವುದು ವಾಡಿಕೆಯಾಗಿದೆ.



## ೧. ಸಂದರ್ಭ ಸಹಿತ ವಿವರಿಸಿ

೧. ರಂಗಮಂದಿರ ಅದೇ, ನಾಟಕವೂ ಅದೇ
೨. ಕುರುಕ್ಷೇತ್ರ ಚಾಚುತ್ತಲಿದೆ ದೇಶದುದ್ದಕ್ಕೂ
೩. ಅಮೂರ್ತರಾಗಿಯೂ ಮೂರ್ತಿಯಾಗುಳಿದರು
೪. ಬತ್ತಿ ಹೋಗಲಿ ಗಂಗೆಯೊಂದು ಸಲ ತಳಬಿರಿದು
೫. ಕಣ್ಣು ಕೀಳುವ ಸೂಜಿ, ಕೊಲುವ ಬಡಿಗೆ

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಗಂಗಜ್ಜಿ ಏನನ್ನು ಇಟ್ಟುಕೊಂಡು ಕುಳಿತಿದ್ದಾಳೆ?
೨. ಶಕುನಿ ಈಗ ಯಾವ ವೇಷ ಧರಿಸಿದ್ದಾನೆ?
೩. ಅಮೂರ್ತರಾಗಿಯೂ ಮೂರ್ತಿಯಾಗುಳಿದವರು ಯಾರು?
೪. ವಿದ್ಯಾರಣ್ಯ ಕ್ಷೇತ್ರ ಈಗ ಏನಾಗಿದೆ?
೫. ಕುರುಕ್ಷೇತ್ರ ಜಪಮಾಲೆ ಏನಾಗಬೇಕು?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಸಮಾಜವನ್ನು ರಂಗಮಂದಿರಕ್ಕೆ ಹೋಲಿಸಿರುವ ಔಚಿತ್ಯವನ್ನು ವಿವರಿಸಿ.
೨. ಕೊಳೆತ ಹಳೆಯ ಸಂಪ್ರದಾಯವನ್ನು ಕವಿ ಹೇಗೆ ವಿಡಂಬಿಸಿದ್ದಾರೆ?
೩. ಗಂಗಜ್ಜಿಯ ದುಃಸ್ಥಿತಿಯನ್ನು ಕವಿ ಹೇಗೆ ನಿರೂಪಿಸಿದ್ದಾರೆ?
೪. ಇವತ್ತಿನ ಕುರುಕ್ಷೇತ್ರ ಎಲ್ಲಿದೆ, ಹೇಗಿದೆ ಮತ್ತು ಅದರ ಪಾತ್ರಧಾರಿಗಳ ಸ್ಥಿತಿ ಏನಾಗಿದೆ?
೫. ರಾಮ–ಕೃಷ್ಣರಂತಹ ಮಹಾಪುರುಷರ ಸ್ಥಿತಿ ಈಗ ಏನಾಗಿದೆ ಎಂದು ಕವಿ ಹೇಳಿದ್ದಾರೆ? ವಿವರಿಸಿ.

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. 'ಬತ್ತಲಾರದ ಗಂಗೆ' ಪದ್ಯದಲ್ಲಿ ಆಧುನಿಕ ಸಮಾಜದಲ್ಲಿ ಮಾನವೀಯತೆಯ ಶಿಥಿಲಗೊಳ್ಳುತ್ತಿರುವ ಎರಡು ಸನ್ನಿವೇಶಗಳನ್ನು ಗುರುತಿಸಿ.
೨. ಕವಿಯ ಆಶಾವಾದವು 'ಬತ್ತಲಾರದ ಗಂಗೆ'ಯಲ್ಲಿ ಹೇಗೆ ವ್ಯಕ್ತವಾಗಿದೆ?
೩. ಹಳೆಯ ಸಂಪ್ರದಾಯ ಮತ್ತು ಆಧುನಿಕತೆ– ಇವೆರಡರ ಘರ್ಷಣೆಯನ್ನು ಅಡಿಗರು ಹೇಗೆ ಚಿತ್ರಿಸಿದ್ದಾರೆ?

***

## ೭. ಹೊಸ ಬಾಳಿಗೆ ಹೊರಟ ಮಗಳಿಗೆ

**ಚಂದ್ರಶೇಖರ ಕಂಬಾರ**

ಹೊಸ ಬಾಳಿಗೆ ಹೊರಟ ಮಗಳು
ಕಣ್ಣ ತುಂಬ ಕನಸು.
ಶುಭವಾಗಲಿ ಮಗಳೆ ನಿಮ್ಮ
ಕನಸಾಗಲಿ ನನಸು.

ನಿಮ್ಮ ಪ್ರೀತಿಯ ಮಹಾಪೂರದಲ್ಲಿ ತೇಲುತ್ತ
ಬಂದೆವಿಲ್ಲಿಯತನಕ, ಇನ್ನು ಮುಂದೆ ಸುರುವಾಗಬೇಕು
ನಿಮ್ಮ ಪ್ರಯಾಣ.

ನಾವು ಗಳಿಸಿದ್ದು ಅಲ್ಲಿಗಲ್ಲಿಗೆ
ಸಮ ಲೆಖ್ಖ–
ಅಷ್ಟೋ ಇಷ್ಟೋ ದಾರಿ ನಾವು ನಡೆದದ್ದಿದೆ

ದಾರಿ ಸಾಗದೆ ಬದಿಗೆ ಕುಂತದ್ದಿದೆ.
ಬಂಡೆಬೆಟ್ಟದ ಮ್ಯಾಲೆ ಹೆಪ್ಪುಗಟ್ಟಿದ ಮುಗಿಲು
ಸಿಡಿಲು ಹೊಂಚಿದ್ದೂ ಇದೆ ಆಚೆ ಬದಿಗೆ.

ಮಳೆಗಾಲದಲ್ಲಿ ಆಗೀಗ ಹ್ಯಾಗೋ ಆಗಿ
ಜಾರಿ ಬಿದ್ದದ್ದು ಇದೆ, ಮುಂದೆ ಹ್ಯಾಗೆಂದು.
ಮ್ಯಾಲೆ ಸುರಿಯೋ ಮುಗಿಲು, ಕೆಳಗೆ ಜಾರೋ ನೆಲ,
ದಾರಿ ಸಾಗಿಸೊ ಶಿವನೆ ಅಂದದ್ದಿದೆ.

ಆಗ ಅವತರಿಸಿದಿರಿ ನಮ್ಮ ತೋಟದಲೇನೆ
ಹಸಿರು ಹಾಡುಗಳಲ್ಲಿ ನಮ್ಮನದ್ದಿ.
ಸ್ವಚ್ಛ ಬೆಳ್ದಿಂಗಳನು ಸುತ್ತ ಸುರಿದಿರಿ ತಾಯಿ
ಹುಣ್ಣಿಮೆಯ ಕಡಲಾಗಿ ನಾವು ಉಕ್ಕಿ.

ನೋಡ ನೋಡುವ ಹಾಗೆ ಕಣ್ಣೆದುರಿನಲೆ ಬೆಳೆದು
ಚಿತ್ತದ ಚಮತ್ಕಾರವಾದೆ ಮಗಳೆ.
ಚಿಗುರು ಹೂವಾಗುವ ಪವಾಡ ಕಡಮೆಯದಲ್ಲ,
ಅದು ಕೂಡ ತಿಳಿದದ್ದು ನಿನ್ನಿಂದಲೆ.

ಗುರಿಯ ತುಲುಪಲು ಹೋಗಿ
ಇನ್ನೆಲ್ಲಿಗೋ ಮುಟ್ಟಿ
ಏನೇನೋ ಆದದ್ದು ಎಷ್ಟೋ ಇದೆ
ಸೋಲಿಂದ ಬಹಳಷ್ಟು ಕಲಿಯೋದಿದೆ.
ನಾವು ಬಿತ್ತಿದ್ದೆಷ್ಟೋ ಬೆಳೆಯಲಾಗಲೆ ಇಲ್ಲ
ನಿಮ್ಮಲ್ಲಿ ಅದು ಬೆಳೆದು ಫಲ ನೀಡಲಿ.

ನಾವು ಮಾಡಿದ ಬೆಳಕು ಸಾಲದೆ ಬಂದಲ್ಲಿ
ನೀವೂನು ಮಾಡ್ರಿ ತುಸು ಬೆಳಕು.
ಸುಡಬೇಕು ಪ್ರೀತಿಯಲಿ ಸುಟ್ಟು ಬೆಳಕಾಗುತ್ತ
'ನೊಗವೆ ನಾರಾಯಣಾ' ಅನ್ನಬೇಕು.

ಸೂರ್ಯ ತಿಳಿದಿರಬೇಕು ಬೆಳಗೊ ಕರ್ತವ್ಯವನು
ತಿಳಿಯದಿದ್ದರೆ ಅವನ ಗೊಡವೆ ಬೇಡ.

ಸೂರ್ಯ ಇರದಿದ್ದರೂ ಹಸಿರು ತಿಳಿದಿರಬೇಕು
ಬಿರಿದು ಹಣ್ಣಾಗುವ ಪವಾಡವನ್ನ.

ಕಾಲರಾಯನ ಗೇಹ ಈ ದೇಹ; ಕೊನೆಯಲ್ಲ–
ಲೋಕ ಎಷ್ಟೋ ಉಂಟು ಇದರ ಆಚೆ.
ಕನಸು ವಿರಮಿಸದಿರಲಿ ತುದಿಯ ತಲುಪುವ ತನಕ
ತುದಿಯೆಲ್ಲಿ, ಗೊತ್ತಲ್ಲ? ಕ್ಷಿತಿಜದಾಚೆ !

## ಕವಿ–ಕಾವ್ಯ ವಿಚಾರ

**ಚಂದ್ರಶೇಖರ ಕಂಬಾರ [೧೯೩೭]**

ತಮ್ಮ ವಿಶಿಷ್ಟ ಸಾಹಿತ್ಯ ರಚನೆಯ ಮೂಲಕ ಕನ್ನಡನಾಡಿನ ಗಮನ ಸೆಳೆದಿರುವ ಕಂಬಾರರು ದ.ರಾ. ಬೇಂದ್ರೆಯವರ ನಂತರ ಉತ್ತರ ಕರ್ನಾಟಕ ಭಾಗದ ಜನಪದ ಭಾಷೆಯ ಸೊಗಡನ್ನು ತಮ್ಮ ಕೃತಿಗಳ ಮೂಲಕ ಕನ್ನಡಿಗರಿಗೆ ಉಣಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಮದ್ರದಲ್ಲಿ ಪ್ರಾಧ್ಯಾಪಕರಾಗಿದ್ದ ಇವರು ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರಾಗಿ, ಕರ್ನಾಟಕ ನಾಟಕ ಅಕಾಡಮಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮೊಟ್ಟಮೊದಲ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ.

ಅಣ್ಣತಂಗಿ, ಕರಿಮಾಯಿ, ಜಿಕೆ ಮಾಸ್ತರ ಪ್ರಣಯ ಪ್ರಸಂಗ, ಶಿಖರ ಸೂರ್ಯ, ಸಿಂಗಾರವ್ವ ಮತ್ತು ಅರಮನೆ–ಇವರ ಕಾದಂಬರಿಗಳು. ಮಗಳು, ಹೇಳತೇನ ಕೇಳಾ, ತಕರಾರಿನವರು, ಬೆಳ್ಳಿಮೀನು, ಅಕ್ಕಕ್ಕು ಹಾಡುಗಳು – ಇವರ ಕವನ ಸಂಕಲನಗಳು. ಋಷ್ಯಶೃಂಗ, ಹರಕೆಯಕುರಿ, ಸಂಗ್ಯಾಬಾಳ್ಯ, ನಾರ್ಸಿಸಿಸ್, ಜೋಕುಮಾರಸ್ವಾಮಿ, ಪುಷ್ಪರಾಣಿ, ಸಿರಿಸಂಪಿಗೆ, ಜೈಸಿದನಾಯ್ಕ, ಬೆಂಬತ್ತಿದ ಕಣ್ಣು ಮುಂತಾದ ನಾಟಕಗಳನ್ನು ಬರೆದಿದ್ದಾರೆ. 'ಚಕೋರಿ' ಎಂಬ ಮಹಾ ಕಾವ್ಯವನ್ನೂ ರಚಿಸಿದ್ದಾರೆ. ಕರಿಮಾಯಿ, ಸಂಗೀತ, ಕಾಡು ಕುದುರೆ, ಸಿಂಗಾರೆವ್ವ ಮತ್ತು ಅರಮನೆ ಚಲನಚಿತ್ರಗಳಿಗೆ ಸಂಗೀತ ಸಂಯೋಜಿಸಿ, ನಿರ್ದೇಶಿಸಿರುವುದು ಇವರ ಸೃಜನಶೀಲತೆಯ ದ್ಯೋತಕ.

ನಾಡೋಜ, ಪದ್ಮಶ್ರೀ, ಕುಮಾರನ್ ಆಶನ್, ಠ್ಯಾಗೋರ್ ಹಾಗೂ ಕಬೀರ ಸಮ್ಮಾನ್ ಪ್ರಶಸ್ತಿ ಪಡೆದಿರುವ ಇವರು ತಮ್ಮ ಸಮಗ್ರ ಸಾಹಿತ್ಯ ರಚನೆಗಾಗಿ ೨೦೧೦ನೇ ಸಾಲಿನ ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿದ್ದಾರೆ. ಇವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಹೌದು.



## ಶಬ್ದಾರ್ಥ

ಮಹಾಪೂರ– ಪ್ರವಾಹ; ಮುಗಿಲು– ಮೋಡ; ಹೊಂಚು– ಕಾಯುವುದು; ಗೇಹ– ಮನೆ; ಕ್ಷಿತಿಜ– ಭೂಮಿ ಆಕಾಶಗಳು ಸಂಧಿಸುವ ಕಾಲ್ಪನಿಕ ರೇಖೆ; ಚಿತ್ತ– ಮನಸ್ಸು; ನೊಗ– ಎತ್ತಿಗೆ ಹೂಡುವ ನೇಗಿಲಿನ ಭಾಗ; ಗೊಡವೆ– ಚಿಂತೆ;

## ೧. ಸಂದರ್ಭ ಸಹಿತ ವಿವರಿಸಿ

೧. ನಾವುಗಳಿಸಿದ್ದು ಅಲ್ಲಿಗಲ್ಲಿಗೆ ಸಮ ಲೆಖ್ಖ.
೨. ಸ್ವಚ್ಛ ಬೆಳ್ದಿಂಗಳನು ಸುತ್ತ ಸುರಿದಿರಿ ತಾಯಿ.
೩. ಚಿಗುರು ಹೂವಾಗುವ ಪವಾಡ ಕಡಿಮೆಯದಲ್ಲ.
೪. ನೀವೂನೂ ಮಾಡ್ರಿ ತುಸು ಬೆಳಕು.
೫. ಲೋಕ ಎಷ್ಟೋ ಉಂಟು ಇದರ ಆಚೆ.

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಮಗಳ ಕಣ್ಣ ತುಂಬ ಏನಿದೆ?
೨. ಬಂಡೆ ಬೆಟ್ಟದ ಮೇಲೆ ಏನು ಹೆಪ್ಪುಗಟ್ಟಿದೆ?
೩. ಚಿತ್ತದ ಚಮತ್ಕಾರವಾದವಳು ಯಾರು?
೪. ಗುರಿಯ ತಲುಪಲು ಹೋದಾಗ ಏನಾಯಿತು?
೫. ಈ ದೇಹ ಯಾವ ಗೇಹ?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ತಮ್ಮ ಕಷ್ಟದ ಬದುಕು ಹೇಗಿತ್ತೆಂದು ಕವಿ ಹೇಳಿದ್ದಾರೆ?
೨. ಮಗಳು ಹುಟ್ಟಿ ಬೆಳೆದ ಚಮತ್ಕಾರವನ್ನು ಕವಿ ವಿವರಿಸಿರುವ ಬಗೆ ಹೇಗೆ?
೩. ತಮ್ಮ ಕನಸುಗಳು ನಿನ್ನಲ್ಲಿ ನನಸಾಗಲಿ ಎಂದು ಕವಿ ಹೇಳಲು ಕಾರಣವೇನು?

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಮಕ್ಕಳನ್ನು ಕುರಿತ ತಂದೆ ತಾಯಿಯರ ವಾತ್ಸಲ್ಯ, ಹೊಸ ಬಾಳಿಗೆ ಹೊರಟ ಮಗಳಿಗೆ ಪದ್ಯದಲ್ಲಿ ಹೇಗೆ ಚಿತ್ರಿತವಾಗಿದೆ?
೨. ಹೊಸ ಬಾಳಿಗೆ ಹೊರಟ ಮಗಳಿಗೆ ಕವಿ ನೀಡುವ ಸಂದೇಶವೇನು?
೩. 'ಹೊಸ ಬಾಳಿಗೆ ಹೊರಟ ಮಗಳಿಗೆ' ಪದ್ಯದ ಆಶಯವನ್ನು ನಿರೂಪಿಸಿ.

***

## 8. ಕತ್ತೆ ಮತ್ತು ಧರ್ಮ

**– ಸಿದ್ದಲಿಂಗಯ್ಯ**

ಮಧುಗಿರಿ ಪಟ್ಟಣಕ್ಕೆ ಸಿದ್ಧಯ್ಯನೆಂಬಗಸ
ಯಂಡರು ಮಕ್ಕಳಿಲ್ಲ ಏಕಾಕಿ । ಸಿದ್ದಯ್ಯ
ಕತ್ತೆಯು ಅವುನ ಒಡನಾಡಿ.

ಕತ್ತೆಯ ಮೈತೊಳೆದು ಮುದ್ದಾಡಿ ಸಿದ್ದಯ್ಯ
ಒಂದೆ ಗಂಗಳದಲ್ಲಿ ಉಣ್ಣೋನು । ಸಿದ್ದಯ್ಯ
ಕತ್ತೆಯ ಮಗ್ಗುಲಲ್ಲಿ ಮಲಗೋನು.

ಬಟ್ಟೆಯ ಹೇರಿಕೊಂಡು ಹೊಂಟಾರೆ ಬೀದಿಲಿ
ದೇವೇಂದ್ರನಾ ಕುದುರೆ ಸಮನಲ್ಲ । ರಾಜನ
ಪಟ್ಟದ ಆನೆಯು ಚಟ್ಟಂತು.

ಸಿದ್ದಯ್ನ ಸಾಕುಮಗಳು ಕತ್ತೆ ಅನ್ನೊ ಸುದ್ದಿ
ಊರ ಬಾಯಿಗೆ ಎಲೆ ಅಡಿಕೆ । ಸಿದ್ದಯ್ಯ
ಕತ್ತೆ ಬಿಟ್ಟಿರಲಾರ ಅರುಗಳಿಗೆ.

ಇಂಥ ಸಿದ್ದಯ್ಯನೀಗೆ ಬಂತಲ್ಲೊ ಕೇಡುಗಾಲ
ಬಟ್ಟೆಯ ಒಗಿವಾಗ ತಲೆಮ್ಯಾಲೆ । ಕಾಗೆ ನುಗ್ಗಿ
ಮನೆಯಲ್ಲಿ ಗವುಳಿ ಲೊಚಲೊಚ.

ಎದ್ದಾನು ಸಿದ್ದಯ್ಯ ಕತ್ತೇಯು ಏಳ್ಳಿಲ್ಲ
ಹೊಟ್ಟೆಯು ಊದಿ ಮೈಯೆಲ್ಲ । ತಣ್ಣಗಾಗಿ
ಶಿವ ತನ್ನ ಪಾದಕೆ ಕರುಕೊಂಡ.

ಊರಾಶೀಳಾದೀಲಿ ಕತ್ತೆಯ ಮಣ್ಮಾಡಿ
ಗಂಧದ ಕಡ್ಡಿಯ ಹಚ್ಚವನೆ । ಸಿದ್ದಯ್ಯ
ತೆಂಗಿನಕಾಯಿ ಒಡೆದವನೆ.

ಸಿದ್ದಯ್ನ ಗೋಳನು ಕೇಳೋರು ಯಾರಯ್ಯ
ಮನವೆಲ್ಲ ವಣುಗಿ ಮರುಳಾಗಿ । ಸಿದ್ದಯ್ಯ
ಹೊರಟನು ದುಕ್ಕದಿ ದೇಸಾಂತರ.

ಯಾಪಾರಕೊಂಟಿದ್ದ ದೂರಾದ ಜಯಶೆಟ್ಟಿ
ನೋಡಿದ ಸಿದ್ದಯ್ನ ಘನಪೂಜೆ । ಬಂದಿಲ್ಲಿ
ಕೈಮುಗದು ವಂಟನು ಯಾಪಾರಕೆ.

ಶೆಟ್ಟೀಗೆ ಆವತ್ತು ಪ್ಯಾಟೀಲಿ ಸೌಭಾಗ್ಯ
ಬೆಳ್ಳಿಯ ಅಳಕೊಂಡ ಬಳ್ಳಬಳ್ಳ । ನಮ್ಮ ಶೆಟ್ಟಿ
ಬಂಗಾರ ಬಾಚಿಕೊಂಡ ಚೀಲ ಚೀಲ.

ಮನಗೋಗೋ ದಾರೀಲಿ ಶೆಟ್ಟಿ ಗೋರಿಯ ಮುಂದೆ
ಕೈಮುಗಿದು ಬಿದ್ದು ನಮಸ್ಕಾರ । ಮಾಡಿಕೊಟ್ಟ
ದೇವರ ಕಂಬ ಅದಕೆಣ್ಣೆ.

ಊರೂರ ಸುದ್ದೀಲಿ ಜನಕೆ ಭಕ್ತಿಯು ಹುಟ್ಟಿ
ಸೇರಿತು ಪರುಸೆ ಗೋರಿ ದೇವ್ರ । ಹೆಸರೇಲಿ
ಗುಡಿಯೊಂದು ನಿಂತಿತಲ್ಲೊ ಮುಗಿಲುದ್ದ.

ಕೈ ಚಾಚಿ ಭಿಕ್ಷದೋರು ಮೈಚಾಚಿ ಸೂಳೇರು
ಭಕ್ತೀಲಿ ಕುಡದು ಕುಣಿಯೋರು । ಸೇರವ್ರೆ
ಬಿಳಿಟೋಪಿಯೋರ ಬೆಳಕೀಲಿ.

ಪೂಜೇಗೆ ವೈದಿಕರು– ದಾನಾಕೆ ಸಾವುಕಾರ್ರು
ಕತ್ತೆಗೋರಿಯ ಮೇಲೆ ಕೈಲಾಸ । ಹಬ್ಬಿತ್ತು
ರಾಜರಾಣೀಗೆ ಸುದ್ದಿ ಹೋಯ್ತು.

ರಾಜ ಸುಂಗಾರವಾದ ರಾಣಿ ಸುಂಗಾರವಾದ್ಲು
ಕತ್ತೆಯ ಪೂಜೆಗೆ ಕುದುರೇಯ । ಏರಿಕೊಂಡು
ಬಂದರು ಗೋರಿಯ ದೇವರಿಗೆ.

ದಾರಿ ದೇವರ ಕಂಡು ಧನ್ಯರಾಗಲು ಅಂದು
ರಾಜ ರಾಣಿಯ ಜೊತೆ ಪರಿವಾರ । ಹರಿದಿತ್ತು
ಕೂಡಿತು ಪರುಸೆ ಕಡಲಾಗಿ.

ಗೋರಿದೇವರ ಮಹಿಮೆ ಕೊಂಡಾಟ ನೆಡಿವಾಗ
ತಳ್ಳಾಟಹೊರಗೆ ಆಗಿತ್ತು । ಕತ್ತಿಡಿದು
ತಳವಾರ್ರು ಸಿದ್ದಯ್ನ ತಳ್ಳುತಾರೆ.

ದೇಸಾಂತ್ರ ಹೋಗಿದ್ದ ಸಿದ್ದಯ್ಯ ಕತ್ತೇಯ
ಹೂತಜಾಗವ ನೋಡೊ ಆಸೇಲಿ । ಬಂದವ್ನೆ
ಹುಡುಕುತ ನಿಂತವ್ನೆ ಹೂತಜಾಗ.

## ಕವಿ–ಕಾವ್ಯ ವಿಚಾರ

ಸಿದ್ಧಲಿಂಗಯ್ಯನವರು ಬಂಡಾಯ ಸಾಹಿತ್ಯ ಚಳವಳಿಯ ಮಹತ್ತ್ವದ ಕವಿಗಳಲ್ಲಿ ಒಬ್ಬರು; ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ವಿವಿಧ ಅಕಾಡಮಿಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಹೊಲೆಮಾದಿಗರ ಹಾಡು, ಸಾವಿರಾರು ನದಿಗಳು, ಕಪ್ಪುಕಾಡಿನ ಹಾಡು– ಎಂಬ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಪಂಚಮ, ನೆಲಸಮ, ಏಕಲವ್ಯ–ಇವು ನಾಟಕಗಳು. ಅವತಾರಗಳು, ಗ್ರಾಮದೇವತೆಗಳು, ಹಕ್ಕಿನೋಟ–ಇವು ಗದ್ಯಕೃತಿಗಳು. ಈ ಪದ್ಯವನ್ನು ಅವರ 'ಸಾವಿರಾರು ನದಿಗಳು' ಎಂಬ ಕವನ ಸಂಕಲನದಿಂದ ಆರಿಸಲಾಗಿದೆ.



## ಕಠಿಣಶಬ್ದಗಳ ಅರ್ಥ

ಪರುಸೆ– ಜಾತ್ರೆ; ಗವುಳಿ– ಹಲ್ಲಿ; ಯಾಪಾರ– ವ್ಯಾಪಾರ; ಗಂಗಾಳ– ಊಟದ ತಟ್ಟೆ; ಶೀಳಾದೀಲಿ– ಸೀಳುಹಾದಿಯಲ್ಲಿ; ಬಳ್ಳ– ಅಳೆಯುವ ಸಾಧನ.

## ೧. ಸಂದರ್ಭ ಸಹಿತ ವಿವರಿಸಿ

೧. ಕತ್ತೆ ಬಿಟ್ಟಿರಲಾರ ಆರುಗಳಿಗೆ.
೨. ಹೊರಟನು ದುಕ್ಕದಿ ದೇಸಾಂತರ.
೩. ಬಂಗಾರ ಚಾಚಿಕೊಂಡ ಚೀಲ ಚೀಲ.
೪. ಕತ್ತೆಗೋರಿಯ ಮೇಲೆ ಕೈಲಾಸ ಹಬ್ಬಿತು.
೫. ಹುಡುಕುತ್ತ ನಿಂತವ್ನೆ ಹೂತ ಜಾಗ

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಸಿದ್ದಯ್ಯ ಎಲ್ಲಿ ವಾಸವಾಗಿದ್ದ?
೨. ಸಿದ್ದಯ್ಯನ ಸಾಕುಮಗಳು ಯಾರು?
೩. ಸಿದ್ದಯ್ಯ ದೇಶಾಂತರ ಹೋಗಲು ಕಾರಣವೇನು?
೪. ಗೋರಿ ದೇವರ ಹೆಸರಿನಲ್ಲಿ ಏನು ನಿಂತಿತು?
೫. ರಾಜರಾಣಿ ಪರಿವಾರ ಏಕೆ ಬಂದಿತು?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಸಿದ್ದಯ್ಯ ತನ್ನ ಕತ್ತೆಯನ್ನು ಪ್ರೀತಿಸುತ್ತಿದ್ದ ಬಗೆಯನ್ನು ವಿವರಿಸಿ.
೨. ಜಯಸೆಟ್ಟಿ ಯಾರು? ಅವನು ಗೋರಿಗೆ ಕಂಬ, ಎಣ್ಣೆಗಳನ್ನು ನೀಡಲು ಕಾರಣವೇನು?
೩. ಗೋರಿಯ ಗುಡಿಗೆ ಯಾರ್‍ಯಾರು ಬಂದು ಏನೇನು ಮಾಡಿದರು?
೪. ರಾಜರಾಣಿ ಗೋರಿಯ ಗುಡಿಗೆ ಏಕೆ ಮತ್ತು ಹೇಗೆ ಬಂದರು?

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಜನರ ಕುರುಡು ಭಕ್ತಿಯನ್ನು 'ಕತ್ತೆ ಮತ್ತು ಧರ್ಮ' ಪಧ್ಯದಲ್ಲಿ ಸಿದ್ದಲಿಂಗಯ್ಯನವರು ಹೇಗೆ ವಿಡಂಬಿಸಿದ್ದಾರೆ? ವಿವರಿಸಿ.
೨. 'ಕತ್ತೆ ಮತ್ತು ಧರ್ಮ' ಪದ್ಯದ ಸಾರಾಂಶವನ್ನು ಬರೆಯಿರಿ.

***

# ೯. ಹೇ ಹುಲಿ!

**ಎಚ್.ಎಸ್. ಶಿವಪ್ರಕಾಶ್**

**[ಮೂಲ: ವಿಲಿಯಂ ಬ್ಲೇಕ್]**

ಹೇ ಹುಲಿ! ಹೇ ಹುಲಿ! ಝುಗಝುಗಾ ಉರಿ
ಕತ್ತಲ ಕಾಡಿನಲಿ !
ಎಂಥ ಸಾವಿರದ ಕಣ್ಣು ಕೈಯ್ಯಿ
ಮಾಡಿವೆ ಚೆಲುವು, ದಿಗಿಲಿನ ಜೋಡಿ?
ಎಂಥಾ ದೂರದ ಕಡಲು ಬಾನಿನಲಿ
ಹೊತ್ತಿತು ನಿನ್ನ ಕಣ್ಣಕೆಂಡದುರಿ?
ಅಲ್ಲಿಗೆ ರೆಕ್ಕೆ ಹೇಗೆ ಹಾರಿದವು?
ಕೈಗಳು ಹೇಗೆ ಕೆಂಡವ ಹಿಡಿದವು?

ಎಂಥ ತೋಳು ಎಂಥ ಕುಶಲತೆ
ನಿನ್ನ ಗುಂಡಿಗೆಯ ಖಂಡವ ತಿರುಚಿದೆ?
ನಿನ್ನೀ ಗುಂಡಿಗೆ ಢವಢವಗುಡಲು
ಯಾಕೀ ದಿಗಿಲು ಕೈಯ್ಯಿಗೆ ಕಾಲಿಗೆ?

ಎಂತಹಾ ಸುತ್ತಿ ಎಂತಹಾ ಸರಪಳಿ?
ನಿನ್ನ ಮೆದುಳಿತ್ತು ಯಾವ ಕುಲುಮೆಯಲಿ?
ಎಂಥ ಬಡಿಗಲ್ಲು, ಎಂತಹಾ ಬಿಗಿ
ಮಾರಕ ಭೀತಿಯ ಹಿಡಿಯಿತು ಕೈಲಿ?



ಚುಕ್ಕೆಗಳೆಲ್ಲಾ ಭರ್ಜಿಯ ಬಿಸುಟವು
ಬಾನ ಕಣ್ಣುಗಳ ಒದ್ದೆ ಮಾಡಿದವು
ಮುಗುಳ್ನಕ್ಕನೆ ಆತ. ನಿನ್ನನ್ನು ನೋಡಿ?
ನಿನ್ನ ಮಾಡಿದನೆ ಹುಲ್ಲೆಯ ಮಾಡಿ?

ಹೇ ಹುಲಿ! ಹೇ ಹುಲಿ! ಝುಗಝುಗಾ ಉರಿ
ಕತ್ತಲ ಕಾಡಿನಲಿ !
ಎಂಥ ಧೈರ್ಯ ಕಣ್ಣಿಗೆ ಕೈಯಿಗೆ
ಮಾಡಲು ಚಲುವು, ದಿಗಿಲಿನ ಜೋಡಿ?

## ಕವಿ–ಕಾವ್ಯ ವಿಚಾರ

**ವಿಲಿಯಂ ಬ್ಲೇಕ್** [೧೭೫೮–೧೮೨೭]

ಇಂಗ್ಲಿಷ್‌ನ ಪ್ರಸಿದ್ಧ ಕವಿ ಮತ್ತು ಚಿತ್ರಕಾರ. Songs of Innocence and of Experience, The Marriage of Heaven and Hell, The Four Zoas, Jerusalem ಮುಂತಾದ ಕೃತಿಗಳನ್ನು ರಚಿಸಿದ್ದಾನೆ.

**ಎಚ್.ಎಸ್. ಶಿವಪ್ರಕಾಶ್** [೧೯೫೪]

ಕನ್ನಡದ ಹೊಸತಲೆಮಾರಿನ ಪ್ರಮುಖ ಕವಿಗಳಲ್ಲಿ ಒಬ್ಬರು. ಜೈನ ವಿಶ್ವವಿದ್ಯಾಲಯದ ಹಾಗೂ ದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ 'ಆರ್ಟ್ಸ್ ಅಂಡ್ ಏಸ್ಥೆಟಿಕ್ಸ್ ಸ್ಕೂಲ್'ನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಅಮೆರಿಕ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಉಪನ್ಯಾಸವನ್ನು ನೀಡಿದ್ದಾರೆ. ಜರ್ಮನಿಯ ಬರ್ಲಿನ್‌ನಲ್ಲಿರುವ ರವೀಂದ್ರನಾಥ ಟ್ಯಾಗೋರ್ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಮಳೆಬಿದ್ದ ನೆಲದಲ್ಲಿ, ಅಣುಕ್ಷಣಚರಿತೆ, ಸೂರ್ಯಜಲ, ನವಿಲು ನಾಗರ, ಇವರ ಪ್ರಮುಖ ಕವನ ಸಂಕಲನಗಳು. ಮಹಾಚೈತ್ರ, ಮಂಟೆಸ್ವಾಮಿ ಪ್ರಸಂಗ, ಸುಲ್ತಾನ್ ಟಿಪ್ಪು, ಮಾದಾರಿ ಮಾದಯ್ಯ, ಸಿಲಪ್ಪದಿಗಾರಂ–ಪ್ರಸಿದ್ಧ ನಾಟಕಗಳು. ಮಾರನಾಯಕನ ದೃಷ್ಟಾಂತ, ಮಲ್ಲಮ್ಮನ ಮನೆಹೋಟ್ಲು, ಷೇಕ್ಸ್‌ಪಿಯರ್ ಮರೆತುಹೋದ ದೊಂಬರಾಕೆ ಅನುವಾದಿತ ಕೃತಿಗಳು. ಮೊದಲ ಕಟ್ಟಿನ ಗದ್ಯ ಮತ್ತು ರಂಗಭೂಮಿ ಇವರ ವಿಮರ್ಶೆಗಳು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಇವರಿಗೆ ಸಂದಿವೆ. ೨೦೧೨ರ ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿಯನ್ನು ಪಡೆದಿದ್ದಾರೆ.

### ಶಬ್ದಾರ್ಥ ವಿವರಣೆ

ದಿಗಿಲು – ಭಯ; ಬಾನು – ಆಕಾಶ; ಗುಂಡಿಗೆ – ಹೃದಯ; ಚಿಕ್ಕೆ – ನಕ್ಷತ್ರ; ಹುಲ್ಲೆ – ಜಿಂಕೆ.

### ೧. ಸಂದರ್ಭ ಸಹಿತ ವಿವರಿಸಿ

೧. ಎಂಥ ತೋಳು ಎಂಥ ಕುಶಲತೆ.

೨. ನಿನ್ನ ಮೆದುಳಿತ್ತು ಯಾವ ಕುಲುಮೆಯಲಿ.

೩. ಮುಗುಳ್ನಕ್ಕನೇ ಆತ ನಿನ್ನನು ನೋಡಿ?

### ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಹುಲಿಯಲ್ಲಿ ಯಾವುದರ ಜೋಡಿ ಇದೆ?

೨. ಕೈಗಳು ಏನನ್ನು ಹಿಡಿದವು?

೩. ಚಿಕ್ಕೆಗಳು ಏನನ್ನು ಬಿಸುಟವು?

೪. ಹುಲಿಯನ್ನು ನೋಡಿ 'ಆತ' ಏನು ಮಾಡಿದ?

೫. ಹುಲಿಯನ್ನು ಮಾಡಿದ ಆತ ನಂತರ ಮತ್ತೇನು ಮಾಡಿದನೆಂದು ಕವಿ ಹೇಳಿದ್ದಾರೆ?

### ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಕವಿಯು ಹುಲಿಯನ್ನು 'ಚೆಲುವು ದಿಗಿಲಿನ ಜೋಡಿ' ಎಂದು ಕರೆದಿರುವುದೇಕೆ?

೨. ಪದ್ಯದಲ್ಲಿ ಹುಲಿಯು ಚಿತ್ರಿತವಾಗಿರುವ ಬಗೆ ಹೇಗೆ?

೩. ಹುಲಿಯನ್ನು ಮಾಡಿದ ಆತ ಮುಗುಳ್ನಕ್ಕಿದ್ದು ಏಕೆ?

### ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. 'ಹೇ ಹುಲಿ' ಪದ್ಯದ ಸಾರಾಂಶವನ್ನು ಬರೆಯಿರಿ.

೨. ಸೃಷ್ಟಿಯ ವೈಚಿತ್ರ್ಯವನ್ನು 'ಹೇ ಹುಲಿ' ಪದ್ಯ ಹೇಗೆ ಬಿಂಬಿಸಿದೆ? ಚರ್ಚಿಸಿ.

***

## ೧೦. ಧರ್ಮೋ ಜಯತಿ ನಾಧರ್ಮಃ

**ದುರ್ಗಸಿಂಹ**

ಮಧುರೆ ಎಂಬುದು ನಗರಂ. ಅಂತಾ ನಗರದೊಳಗೆ ಧರ್ಮಬುದ್ಧಿಯುಂ ದುಷ್ಟಬುದ್ಧಿಯುಂ ಎಂಬರ್ ಈರ್ವರ್ ವಣಿಕ್‌ಪುತ್ರರ್ ಪದುವಿನೊಳ್ ಪರದು ಹೋಗಿ ಪಿರಿದಪ್ಪ ಪೊನ್ನ ಪಡೆದು ಮಗುಳ್ದು ಬಂದು ನಿಜಜನ್ಮ ಭೂಮಿಯಪ್ಪ ಮಧುರಾಪುರದ ಬಹಿರ್ ಉದ್ಯಾನವನದೊಳಗೆ ಬೀಡಂಬಿಟ್ಟು ಅರ್ಧರಾತ್ರಿಯೊಳ್ ಧರ್ಮಬುದ್ಧಿ ದುರ್ಬುದ್ಧಿಯಪ್ಪ ದುಷ್ಟಬುದ್ಧಿಯಂ ಕರೆದು, ಪೊನ್ನ ಪಚ್ಚು ಕೊಳ್ವಂ ಎನೆ; ದುಷ್ಟಬುದ್ಧಿಯು ಆಗಲ್‌ಬಗೆದು ಇಂತೆಂದಂ: ನಾವು ಈ ಪೊನ್ನಂ ಪಚ್ಚುಕೊಂಡು ಮನೆಯೊಳೆ ಸ್ವೇಚ್ಛೆಯಿಂದ ಇರ್ಪವರಲ್ಲಂ. ಮತ್ತಂ ಪರದು ಪೋಗಲ್ ವೇಳ್ಕುಂ. ಅದು ಕಾರಣದಿಂ ನಿನಗಂ, ಎನಗಂ ಬೀಯಕ್ಕೆ ತಕ್ಕನಿತು ಪೊನ್ನಂ ಕೊಂಡು ಮಿಕ್ಕ ಪೊನ್ನನ್ ಎಲ್ಲಮನ್ ಇಲ್ಲಿಯೆ ಮಡಂಗುವೆಮ್ ಎನೆ. ಧರ್ಮಬುದ್ಧಿಯು ಆ ಪಾಪಕರ್ಮನಂ ತನ್ನ ಮನದನ್ನನ್ ಎಂದೆ ಬಗೆದುಂ ಅದರ್ಕೆ ಒಡಂಬಟ್ಟು ಬಂದು ಮಹಾ ವಟವಿಟಪಿಯ ಕೆಲದೊಳ್ ಪೊನ್ನಂ ಪೂಳ್ದು ಮರುದಿವಸಮ್ ಈರ್ವರುಂ ಪೊಳಲಂ ಹೊಕ್ಕು ಸುಖಂಗಳನ್ ಅನುಭವಿಸುತಿರ್ದು ದುಷ್ಟಬುದ್ಧಿ ಧರ್ಮಬುದ್ಧಿಯಂ ವಂಚಿಸಿ ಹೋಗಿ ಪೊನ್ನನ್ ಎಲ್ಲಮಂ ಕೊಂಡು ಕುಳಿಯಂ ಮುನ್ನಿನಂತೆ ಪೂಳ್ದು ಕೆಲವಾನು ದಿವಸಕ್ಕೆ ತಾನೆ ಧರ್ಮಬುದ್ಧಿಯಲ್ಲಿಗೆ ವಂದು "ಬೀಯಕ್ಕೆ ಪೊನ್ನಿಲ್ಲಂ, ಇನ್ನುಂ, ಕಿರಿದು ಪೊನ್ನಂ ತೆಗೆದುಕೊಳ್ವಂ ಬನ್ನಿಂ" ಎಂದು ಒಡಂಗೊಂಡು ಹೋಗಿ ಪೂಳ್ದ ಎಡೆಯೊಳ್ ಪೊನ್ನಂ ಕಾಣದೆ ಇನು ಉಸಿರದಿರ್ದೊಡೆ ಅನ್ಯತಂ ತನ್ನ ಮೇಲೆ ವರ್ಪುದು ಎಂದು "ಪೊನ್ನನ್ ಎಲ್ಲಮಂ ನೀನೆ ಕೊಂಡೆಯ್" ಎಂಬುದುಂ

ಅತಿ ಕುಟಿಲ ಮನಂ ಧನಲು<br>
ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ<br>
ಮತಿಗೆಟ್ಟು "ತಸ್ಕರಸ್ಯಾ–<br>
ನೃತಂಬಲಂ" ಎನಿಪ ವಾಕ್ಯಮಂ ನೆನೆಯುತ್ತುಂ.

ಅಂತು ದುಷ್ಟಬುದ್ಧಿ ಮುನ್ನಮೆ– "ಹಾ! ಹಾ! ಕೆಟ್ಟೆನು" ಎಂದು ಬಾಯಂ ಬಸಿರಂ ಪೊಯ್ದುಕೊಂಡು, ಪುಯ್ಲಿಟ್ಟು ಧರ್ಮಬುದ್ಧಿಯ ಮೇಲೆ ಕಳವನಿಟ್ಟು ಕಾಪು ಅರಿದು ಕಾತರಿಸಿ ನುಡಿಯೆ; ಧರ್ಮಬುದ್ಧಿ ತತ್‌ಕೂರ್ಮೆಗೆ ಕಿಡಲ್ ನುಡಿದು "ನೀಂ ಎಲೆ ಬಾಯಾರ್ದು ಪೋಗಲ್ ಪಡೆಯೆ ವಿಚಾರಗೆಯ್ವೆಂ" ಎಂದು; ಧರ್ಮಾಧಿಕರಣರಲ್ಲಿಗೆ ಬಂದು ಈರ್ವರುಂ ತತ್‌ಪ್ರಪಂಚಂ ಎಲ್ಲಮಂ ಸ–ವಿಸ್ತರಂ ನುಡಿದು ಕಡೆಯೊಳ್ ದುಷ್ಟಬುದ್ಧಿಯುಂ ಇಂತೆಂದಂ. ಪೊನ್ನನೆಲ್ಲಮನ್ ಈತನೆ ಕಳೆದುಕೊಂಡುದರ್ಕೆ ಸಾಕ್ಷಿಯುಂ ಉಂಟೆನೆ ಸಭಾಸದರ್ ಸಾಕ್ಷಿಯಂ ಪೇಳಿಂ–ಎನೆ; ಮಡುಗುವಾಗಳ್ ಈತನುಮ್ ಆನುಮ್ ಅಲ್ಲದೆ ಮನುಷ್ಯರ್ ಪೆರರ್ ಇಲ್ಲ. ತತ್ ಸನ್ನಿಧಾನ ಸ್ಥಿತಮಪ್ಪ ವಟವೃಕ್ಷಮೇ ಸಾಕ್ಷಿಯೆಂಬುದುಂ, ಧರ್ಮಾಧಿಕರಣರ್ ವಿಸ್ಮಯಂಬಟ್ಟು. ಈತನ ಮಾತು ಅಶ್ರುತ ಪೂರ್ವಂ. ಚೋದ್ಯಮಂ ನೋಡುವಂ ಎಂದು ಧರ್ಮ ಬುದ್ಧಿಯಂ ಕರೆದು "ನೀನ್ ಈ ಸಾಕ್ಷಿಯಂ ಕೈಕೊಳ್ವುದುಂ" ಎಂದೊಡೆ ಆತಂ ವೃಕ್ಷಂಸಾಕ್ಷಿಯೆಂದು ಮುನ್ನಂ ಪೇಳ್ದರುಂ ಕೇಳ್ದರುಂ ಇಲ್ಲಂ. ಮನುಷ್ಯರ ಸುಕೃತ ದುಷ್ಕೃತಂಗಳಂ ದೈವಂಗಳೆ ಅರಿಗುಂ. ಅದರಿಂದ ಈ ಸಾಕ್ಷಿಯುಂ ಉಚಿತಂ. ಮನುಷ್ಯಂ ಮೊದಲಾಗಿ ನುಡಿವವುದರಿದು ಎಂದೊಡೆ ಮರನಂ ನುಡಿವುದು ಪರಮ ಗಹನಂ. ಈ ಸಾಕ್ಷಿಯಂ ಕೈಕೊಳ್ವುದು ಎನೆ– ಧರ್ಮಬುದ್ಧಿ ಕರವೊಳ್ಳಿತ್ತು ಕೈಕೊಂಡೆನ್ ಎನೆ; ಧರ್ಮಾಧಿಕರಣದವರ್ ಇಂದು ಪೊಳ್ತು ಪೋದುದು. ನಾಳೆ ಪೋಗಿ ಕೇಳ್ವೆಮೆನೆ–ತಮ್ಮ ತಮ್ಮ ಮನೆಗೆಲ್ಲರುಂ ಪೋದರ್.

ಅನ್ನೆಗಂ ದುಷ್ಟಬುದ್ಧಿಯುಂ ತನ್ನ ಮನೆಗೆ ಬಂದು ತಮ್ಮ ಅಯ್ಯನ ಕೈಯಂ ಪಿಡಿದು ಕಟ್ಟೇಕಾಂತಕ್ಕುಯ್ದು ತದ್ ವೃತ್ತಾಂತಮೆಲ್ಲಮಂ ತಿಳಿಯೆ ಪೇಳ್ದು– ನಿಮ್ಮೊಂದು ವಚನ ಮಾತ್ರದಿಂ ನಮ್ಮ ಪರಿಗ್ರಹಮಂ ಎಲ್ಲ ಪಲವು ಕಾಲ ಪಸಿಯದುಂಡು ಬಾಳ್ವಂತೆ ಅರ್ಥಂ ಸಾರ್ದಪ್ಪುದು. ನೀವು ಆ ಮರದ ಪೊಳಲೊಳ್ ಅಡಂಗಿರ್ದು ಧರ್ಮಬುದ್ಧಿಯೆ ಪೊನ್ನಂ ಕೊಂಡು ಒಯ್ದನೆಂದು ನುಡಿಯಿಂ ಎಂದು ತನ್ನ ತಂದೆಯನ್ ಒಡಂಬಡುತಿರ್ದನ್. ಆದಿತ್ಯನ್ ಅಪರ ಗಿರಿಯನೆಯ್ದುವುದುಂ. ಅಂತು ಕವಿದ ಕಳ್ತಲೆಯೊಳ್ ದುಷ್ಟಬುದ್ಧಿ ತನ್ನ ತಂದೆಯಂ ಕೊಂದಲ್ಲದೆ ಮಾಣೆನೆಂದು ಬಯ್ವಂತೆ ಒಯ್ದು ಬಳಾರಿಯ ಮನೆಯಂ ಪರಕೆಯ ಕುರಿಯಂ ಪುಗಿಸುವಂತೆ ವಟವಿಟಪಿಕೋಟರಕುಟೀರ ಅಂತರಮಂ ಪುಗಿಸಿ ಬವರಮಂ ಗೆಲ್ದೆನೆಂದು ರಾಗಿಸಿ ಮನೆಗೆ ವಂದು ನಿದ್ರಾಸಕ್ತನಾದಂ.

ಆದಿತ್ಯೋದಯಂ ಆಗಲ್ ಧರ್ಮಬುದ್ಧಿ ದೇವಗುರು ದ್ವಿಜ ಪೂಜೆಗಳಂ ಮಾಡುತ್ತುಂ ತಡೆಯೆ ದುಷ್ಟಬುದ್ಧಿ ಮುಖಮಂ ತೊಳೆಯದೆ ಬಂದು ಧರ್ಮಾಧಿಕರಣರ್‌ಗೆ ಇಂತೆಂದಂ; ಪ್ರತ್ಯರ್ಥಿ ಬಂದನಿಲ್ಲ, ಪಿರಿದು ಪೊಳ್ತು ಪೋದುದು. ಎನಗೆ ಕರ್ತವ್ಯಮ್ ಆವುದೆಂದು ನುಡಿಯುತಿರ್ಪ ಅನ್ನೆಗಂ ಧರ್ಮಬುದ್ಧಿಯ ಬರವಂ ಕಂಡು ಕ್ಷಣದೊಳ್ ಧರ್ಮಾಧಿಕರಣರ್ "ನಡೆಯಿಂ ನಿಮ್ಮ ಈರ್ವರ ಬವರಮಂ ತಿರ್ದುವೆಂ" ಎಂದು ವಟವೃಕ್ಷದ ಸಮೀಪಕ್ಕೆ ವಂದು ಅಷ್ಟ ವಿಧಾರ್ಚನೆಯಿಂದ ಅರ್ಚಿಸಿ ತದನಂತರಂ ಈರ್ವರುಮಂ ನುಡಿಸಿ ಬಳಿಕ್ಕ ಆ ಮರನನ್ ಇಂತೆಂದರ್; "ಸಾಕ್ಷಿಯಾಗಿ ತಪ್ಪಿ ನುಡಿವರ್ಗೆ ಪಾಪಮ್ ಸಂಭವಿಸುವುದು. ನೀನಪ್ಪೊಡೆ ಯಕ್ಷಾದಿ ದಿವ್ಯ ದೇವತಾ ಆವಾಸಮುಂ, ಸೇವ್ಯಮುಂ ಅಪ್ಪ ವೃಕ್ಷಂ; ಆದ ಕಾರಣದಿಂದ ನಿನ್ನಂ ಸಾಕ್ಷಿ ಮಾಡಿ ಕೇಳ್ದಪೆವು. ನೀಂ ತಪ್ಪದೆ ನುಡಿ"ಯೆಂದು ಧರ್ಮಾಧಿಕರಣರ್ ಧರ್ಮ ಶ್ರವಣಂ ಗೆಯ್ದು ಉಸಿರದಿರ್ಪುದುಂ. ಪೊಳಲೊಳ್ ಅಡಗಿರ್ದ ದುಷ್ಟ ಬುದ್ಧಿಯ ತಂದೆ ಪ್ರೇಮಮತಿ ಮತಿಗೆಟ್ಟು ಧರ್ಮಗತಿಯಂ ಬಿಟ್ಟು 'ಧರ್ಮಬುದ್ಧಿಯೆ ಧನಮಂ ತೆಗೆದುಕೊಂಡನು' ಎಂದು ನುಡಿವುದುಂ. ನೆರವಿಯುಂ ಧರ್ಮಾಧಿಕರಣಮುಂ ಚೋದ್ಯಂಬಟ್ಟಿರೆ ಧರ್ಮಬುದ್ಧಿ–

'ಧರ್ಮೋಜಯತಿ ನಾಧರ್ಮಃ ಇತ್ಯಮೋಘಕೃತಂ ವಚಃ' ಎಂಬ ಈ ವಾಕ್ಯಂ ತಪ್ಪಲ್ ಅರಿಯದೆ ಅಪ್ಪುದರಿಂದ ಎನಗಂ ಇದು ಚೋದ್ಯಮ್. ಇದು ದೈವಮಲ್ಲಕ್ಕುಂ. ಅಂತಪ್ಪೊಡೆ ಸತ್ಯಮನೇಕೆ ನುಡಿಯದು? ಇದು ಏನಾನುಂ ಒಂದು ಕೃತ್ರಿಮಂ ಎಂದು ಆ ಮರನಂ ಬಲವಂದು ನೋಡಿ ಪಿರಿದಪ್ಪ ಪೊಳಲುಮನ್, ಅಲ್ಲಿಯೆ ಮನುಷ್ಯ ಸಂಚಾರಮಾಗಿರ್ದುದುಮಂ ಕಂಡು ನಿಶ್ಚೈಸಿ ಧರ್ಮಬುದ್ಧಿ ಧರ್ಮಾಧಿಕರಣರ್‌ಗೆ ಇಂತೆಂದಂ; "ಹುಸಿಯದ ಬೇಹಾರಿಯೇ ಇಲ್ಲ. ನಾಂ ಬೇಹಾರಿ ಅಪ್ಪುದರಿಂದ ಎಮ್ಮ ಜಾತಿಧರ್ಮಕ್ಕೆ ಧರ್ಮಬುದ್ಧಿಯು ಧರ್ಮಬುದ್ಧಿಯಾಗಿ ಧನಮಂ ಬಂಚಿಸಿಕೊಂಡು ಎನ್ನ ಮನೆಗೆ ಒಯ್ಯಲ್ ವಂದೆಂ. ಅನ್ನೆಗಂ ನೇಸರ್ ಮೂಡಿದೊಡೆ ಒಯ್ಯಲಿಂಬಿಲ್ಲದೆ ಮರದ ಪೊಳಲೊಳಗಿಟ್ಟು ಬಂದು ಮರುದಿವಸಂ ಪೊಗಿ ನೋಳ್ಪನ್ನೆಗಂ ಆ ಪೊನ್ನನೊಂದು ಪನ್ನಗಂ ಸುತ್ತಿಪಟ್ಟಿರ್ದೊಡೆ ಕೊಳಲಂಜಿ ಪೋದೆಂ; ನೀಮುಂ ಇಲ್ಲಿರ್ದು ಅಂತೆ ನೋಡುತ್ತುಮಿರಿ. ಪೊಳಲೊಳಗೆ ಪೊಗೆಯವಿಕ್ಕಿ, ಪಾವಂ ಪೊರಮಡಿಸಿ ಕಳ್ದುಕೊಂಡ ಒಡವೆಯಂ ಕುಡುವೆನ್" ಎಂದು ಧರ್ಮಬುದ್ಧಿ ಪುಲ್ಲಂ, ಪುಳ್ಳಿಯಂ ತರಿಸಿ ಆ ಪೊಳಲೊಳಗಡಿಸಿ ತುಂಬಿ ದುಷ್ಟಬುದ್ಧಿಯ ಮನೆಯೊಳ್ ಕಿಚ್ಚನಿಕ್ಕುವಂತೆ ಕಿಚ್ಚನಿಕ್ಕಲ್ ಒಡನೆ ಪೊಗೆಸುತ್ತಿ ಉರಿಯಟ್ಟಲ್ ಪ್ರೇಮಮತಿ ಧೃತಿಗೆಟ್ಟು ಪುಯ್ಯಲಿಟ್ಟು ಪೊಳಲೊಳಗಿಂದಂ ಸುರುಳ್ದು ಉರುಳ್ದು ಕಂಠಗತ ಪ್ರಾಣನಾಗಿರ್ಪುದುಂ ಧರ್ಮಾಧಿಕರಣರ್ ಕಂಡು ದುಷ್ಟಬುದ್ಧಿಯ ತಂದೆಯಪ್ಪುದು ಸಂದೆಯಂ ಇಲ್ಲ ಎಂದು ಅರಿದು– "ಈ ಪಾಪಕರ್ಮನಪ್ಪ ದುಷ್ಟ ಪುತ್ರನಿಂ ದುರ್ಮರಣಂ ಸಮನಿಸಿದುದು" ಎಂದು ನುಡಿವುದುಂ; ಪ್ರೇಮಮತಿ ಇಂತೆಂದು; "ಇನಿತು ಅನ್ಯಾಯಮನ್ ನಾನೆಂ ಮಾಡಿದೆನ್, ಎನ್ನ ಮಗನ ಮೇಲೆ ದೋಷಮ್ ಆವುದುಂ ಇಲ್ಲ" ಎಂದು ಲೋಕಾಂತರಿತನಾದಂ.

## ಲೇಖಕರ ಪರಿಚಯ

**ದುರ್ಗಸಿಂಹ**

ಕನ್ನಡ ಪಂಚತಂತ್ರದ ಕರ್ತೃ.ಈತನು ಚಾಲುಕ್ಯ ರಾಜರಲ್ಲಿ ಬಹು ಪ್ರಸಿದ್ಧನಾದ 'ಸತ್ಯಾಶ್ರಯ ಕುಲತಿಲಕ'ನೆಂಬ ಬಿರುದಾಂಕಿತನಾಗಿ ಕ್ರಿ.ಶ. ೧೦೧೫ರಿಂದ ೧೦೪೨ರ ವರೆಗೆ ಆಳಿದ ಜಗದೇಕಮಲ್ಲ ಅಥವಾ ೧ನೆಯ ಜಯಸಿಂಹನಲ್ಲಿ ಸಂಧಿ ವಿಗ್ರಹಿಯಾಗಿದ್ದನು. ಕಿಸುಕಾಡಿನ ಸಯ್ಯಡಿಯು ಈತನ ಸ್ಥಳವಾಗಿರಬಹುದು. ಸಂಸ್ಕೃತ ಕವಿ ವಸುಭಾಗ ಭಟ್ಟನಿಂದ ರಚಿತವಾದ 'ಸಂಸ್ಕೃತ ಪಂಚತಂತ್ರ' ತನ್ನ ಕೃತಿಗೆ ಮೂಲವೆಂದು ಹೇಳಿಕೊಂಡಿದ್ದಾನೆ. ಈ ಸಂಸ್ಕೃತ ಪಂಚತಂತ್ರವು ಕ್ರಿ.ಶಕದ ಆದಿಯಲ್ಲಿ ರಚಿತವಾಗಿದ್ದು ನೈತಿಕತೆ, ರಾಜನೀತಿ ಹಾಗೂ ವ್ಯವಹಾರ ನೀತಿಗಳನ್ನು ಬೋಧಿಸುತ್ತವೆ. ಆದುದರಿಂದಲೇ ಇದು ಕ್ರಿ.ಶ. ಸುಮಾರು ಐದನೆಯ ಶತಮಾನದಿಂದಲೇ ಪ್ರಪಂಚದ ಹಲವಾರು ಭಾಷೆಗಳಿಗೆ ಅನುವಾದಗೊಂಡು ಬಹು ಜನಪ್ರಿಯವಾಗಿದೆ.

ಪ್ರಸ್ತುತ ಗದ್ಯಭಾಗವನ್ನು ಸರಳೀಕರಿಸಿ ನೀಡಲಾಗಿದೆ.

## ಶಬ್ದಾರ್ಥ ವಿವರಣೆ

ಈರ್ವರ್ – ಇಬ್ಬರು; ವಣಿಕ್‌ಪುತ್ರರ್ – ವ್ಯಾಪಾರಿಗಳ ಮಕ್ಕಳು; ಪಡುವಿನೊಳ್– ಪರದು – ವ್ಯಾಪಾರ; ಪೊನ್ನು – ಬಂಗಾರ, ಹಣ; ಮಗಳ್ದು – ಇಡು; ಮನದನ್ನ– ಸ್ನೇಹಿತರು; ಒಡಂಬಡು – ಒಪ್ಪು; ಮಹಾವಟವಿಟಪಿ – ದೊಡ್ಡ ಆಲದಮರ; ಕೆಲ– ಕೆಳಗೆ; ಕುಳಿ – ಹಳ್ಳ; ಉಸಿರು – ಮಾತಾಡು; ಅನೃತ – ಸುಳ್ಳು, ಅಪವಾದ; ಲುಬ್ಧತೆ– ಅತಿಯಾಸೆ; ಮತಿ – ಬುದ್ಧಿ; ತಸ್ಕರ – ಕಳ್ಳ; ಬಸಿರು – ಹೊಟ್ಟೆ; ಪುಯ್ಯಿಲಿಡು – ಕೂಗಾಡು; ತತ್ಪಪಂಚ – ಎಲ್ಲ ವಿಷಯ; ಅಶ್ರುತಪೂರ್ವ – ಹಿಂದೆ ಕೇಳಿಲ್ಲದ; ಪೊಳ್ತು – ಪೊತ್ತು; ಅಯ್ಯ – ತಂದೆ; ಕಟ್ಟೇಕಾಂತ – ಯಾರೂ ಇಲ್ಲದ ಸ್ಥಳ; ಪರಿಗ್ರಹ – ಕಷ್ಟ; ನೆರವಿ – ಗುಂಪು; ಚೋದ್ಯ – ಆಶ್ಚರ್ಯ; ಕೃತ್ರಿಮ – ಮೋಸ; ಬೇಹಾರಿ – ವ್ಯಾಪಾರಿ; ನೇಸರ – ಸೂರ್ಯ; ಪನ್ನಗ – ಹಾವು; ಪುಳ್ಳಿ – ಕಡ್ಡಿ; ಲೋಕಾಂತರಿತನಾಗು – ನಿಧನನಾಗು.

## ೧. ಸಂದರ್ಭ ಸಹಿತ ವಿವರಿಸಿ.

೧. ಮತ್ತಂ ಪರದು ಪೋಗಲ್ ವೇಳ್ಕುಂ.

೨. ಕಿರಿದು ಪೊನ್ನಂ ತೆಗೆದುಕೊಳ್ವಂ ಬನ್ನಿ

೩. ತತ್ ಸನ್ನಿಧಾನಸ್ಥಿತಮಪ್ಪ ವಟವೃಕ್ಷವೇ ಸಾಕ್ಷಿ.



೪. ಇಂದು ಪೊಳ್ತು ಪೋದುದು

೫. ಧರ್ಮ ಬುದ್ಧಿಯೇ ಧನಮಂ ತೆಗೆದುಕೊಂಡನು.

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ದುಷ್ಟಬುದ್ಧಿ ಮತ್ತು ಧರ್ಮಬುದ್ಧಿ ಎಂಬುವವರು ಯಾರು?

೨. ದುಷ್ಟಬುದ್ಧಿ, ಧರ್ಮಬುದ್ಧಿಯರು ಧನವನ್ನು ಹೇಗೆ ಸಂಪಾದಿಸಿದರು?

೩. ದುಷ್ಟಬುದ್ಧಿಯು ಯಾರ ಮೇಲೆ ಕಳ್ಳತನವನ್ನು ಆರೋಪಿಸಿದನು?

೪. ದುಷ್ಟಬುದ್ಧಿ ಧರ್ಮಾಧಿಕರಣದವರಿಗೆ ತನ್ನ ಕಡೆಯ ಸಾಕ್ಷಿ ಯಾರೆಂದು ತಿಳಿಸಿದನು?

೫. ಪ್ರೇಮಮತಿ ಯಾರು?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ದುಷ್ಟಬುದ್ಧಿ, ಧರ್ಮಬುದ್ಧಿಯರು ಹಣವನ್ನು ಪೊಟರೆಯಲ್ಲಿಡಲು ಕಾರಣವೇನು?

೨. ದುಷ್ಟಬುದ್ಧಿಯ ಸುಳ್ಳನ್ನು ಮುಚ್ಚಿಹಾಕಲು ಹೇಗೆ ವರ್ತಿಸಿದನು?

೩. ದುಷ್ಟಬುದ್ಧಿಯು ಸಾಕ್ಷ್ಯವನ್ನು ನುಡಿಯಲು ತನ್ನ ತಂದೆಯನ್ನು ಹೇಗೆ ಒಪ್ಪಿಸಿದನು?

೪. ಧರ್ಮಾಧಿಕರಣದವರು ವೃಕ್ಷವನ್ನು ಏನೆಂದು ಕೇಳಿದರು?

೫. ಸುಳ್ಳು ಸಾಕ್ಷ್ಯವನ್ನು ನುಡಿದ ಸಾಕ್ಷಿಯ ಬಗ್ಗೆ ಧರ್ಮಬುದ್ಧಿಯು ಏನೆಂದು ಯೋಚಿಸಿದನು?

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ದುಷ್ಟಬುದ್ಧಿ, ಧರ್ಮಬುದ್ಧಿ, ಪ್ರೇಮಮತಿ– ಎಂಬ ಈ ಹೆಸರುಗಳೇ ಅವರ ಗುಣಧರ್ಮವನ್ನು ತಿಳಿಸುತ್ತವೆ – ವಿಚಾರ ಮಾಡಿ.

೨. 'ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು' – ಈ ಗಾದೆಯನ್ನು ಪ್ರಸ್ತುತ ಕಥೆಯ ಹಿನ್ನೆಲೆಯಲ್ಲಿ ವಿವರಿಸಿ.

೩. ಸನ್ನಡತೆ ಮತ್ತು ದುರ್ನಡತೆಗಳಿಗೆ ಅವರವರ ಆಚಾರ ಅನಾಚಾರಗಳೇ ಕಾರಣವಾಗುತ್ತವೆ ಎಂಬುದು ದುಷ್ಟಬುದ್ಧಿ, ಧರ್ಮಬುದ್ಧಿಯರ ನಡವಳಿಕೆಯಿಂದ ಹೇಗೆ ತಿಳಿಯುತ್ತದೆ?

***

# ೧೧. ಕದಳಿ ಹೊಕ್ಕು ಬಂದೆ

– ರಹಮತ್ ತರೀಕೆರೆ

## ೧

ಕರ್ನಾಟಕ ಸಂಸ್ಕೃತಿಯ ಚರ್ಚೆಯಲ್ಲಿ ಕಲ್ಯಾಣ ಹಂಪಿ ತಿರುಪತಿ ಕಾಶಿ ಕೊಲ್ಲಾಪುರ ಶ್ರೀಶೈಲ ಮುಂತಾದ ಕ್ಷೇತ್ರಗಳ ಪ್ರಸ್ತಾಪ ಮತ್ತೆಮತ್ತೆ ಬರುತ್ತದೆ. ಅವುಗಳಲ್ಲಿ 'ಶ್ರೀಪರ್ವತ'ವೆಂದು ಹೆಸರಾಗಿರುವ ಶ್ರೀಶೈಲಕ್ಕೆ, ಅದರಲ್ಲೂ ಅಲ್ಲಿನ ಕದಳಿ ಗುಹೆಗೆ ಹೋಗಬೇಕೆಂದು ನನಗೆ ಆಸೆಯಿತ್ತು.

ಶ್ರೀಶೈಲವು ಮೊದಲಿನಿಂದಲೂ ಯೋಗಸಾಧಕರನ್ನು ಕೈಬೀಸಿ ಕರೆಯುವ ತಾಣ; ಶಾಕ್ತ, ನಾಥ, ಭೈರವ, ಬೌದ್ಧ ತಾಂತ್ರಿಕ ಪಂಥಗಳಿಗೆ ನೆಲೆಮನೆ. ಅದರ ಭೌಗೋಳಿಕ ದುರ್ಗಮತೆಯು ರಹಸ್ಯ ತಾಂತ್ರಿಕ ಪಂಥಗಳಿಗೆ ಈಗಲೂ ಹೇಳಿಮಾಡಿಸಿದಂತಿದೆ. ಬೌದ್ಧದಾರ್ಶನಿಕ ನಾಗಾರ್ಜುನ ಇಲ್ಲಿದ್ದನು. ಅಲ್ಲಮಪ್ರಭುವನ್ನು ನಾಥಯೋಗಿ ಗೋರಖನಾಥನು ಇಲ್ಲಿ ಮುಖಾಮುಖಿ ಮಾಡಿದನೆಂಬ ಕತೆಯಿದೆ. ಶಂಕರಾಚಾರ್ಯ ಮತ್ತು ಉನ್ಮತ್ತ ಭೈರವನ ಮುಖಾಮುಖಿ ನಡೆದಿದ್ದೂ ಇಲ್ಲಿಯೇ. ನಾಥಪಂಥದ ಮತ್ತೊಬ್ಬ ಯೋಗಿಯಾದ ಮಚ್ಛೇಂದ್ರನಾಥನು ಇಲ್ಲಿ ನಾರಿಯರ ಜತೆ ಕೌಳಪಂಥೀಯ ಸಾಧನೆ ಮಾಡಿದನೆಂದು ಹೇಳಲಾಗುತ್ತದೆ. ಭಾರತದ ಯೋಗಿಗಳು ಚಿಂತಕರು ಸಾಧಕರು ಜೀವನದಲ್ಲಿ ಒಮ್ಮೆಯಾದರೂ ಹೋಗಿ ತಮ್ಮ ಎದುರಾಳಿಗಳ ಮುಖಾಮುಖಿಮಾಡಿ ವಾದ ಕೊಡುವಂತಹ ಕದನಭೂಮಿಯ ಹಾಗೆ ಶ್ರೀಶೈಲವಿತ್ತೆಂದು ತೋರುವುದು.

ನನ್ನ ದಮಿಸಲಾಗದ ಕುತೂಹಲಕ್ಕೆ ಕೊನೆ ಸಿಕ್ಕಿತೊ ಎಂಬಂತೆ, ಒಂದು ದಿನ ತಟ್ಟನೆ ಎದ್ದು ಹೊಸಪೇಟೆಯಿಂದ ಬಳ್ಳಾರಿ ಆದೋನಿ ಕರ್ನೂಲು ಮಾರ್ಗವಾಗಿ ಶ್ರೀಶೈಲಕ್ಕೆ ಹೊರಟೆ. ಬಸ್ಸು ತಿರುವುಗಳಲ್ಲಿ ಏದುಸಿರು ಬಿಡುತ್ತ ಹೋಗುತ್ತದೆ. ಪಾದಯಾತ್ರಿಗಳ ಹಾದಿ ಬೇರೆಯೇ ಇದೆ. ಅದಿನ್ನೆಷ್ಟು ಕಠಿಣವಾಗಿದೆಯೊ? ಜೀವನದಲ್ಲೊಮ್ಮೆ ಅದರೊಳಗೂ ಹೋಗಿ ಬರಬೇಕು. ದಾರಿಯುದ್ದಕ್ಕೂ ಕನ್ನಡ ಹೆಸರಿನ ಊರುಗಳು; ಪಾದಯಾತ್ರಿಗಳು ತಂಗಲು ಛತ್ರಗಳು; ಅರವಟ್ಟಿಗೆಗಳು.



ಮಲೆನಾಡಿಗನಾದ ನಾನು ಶ್ರೀಶೈಲದ ಕಾಡನ್ನು ಮೊದಲಿಗೆ ಕಂಡು ಚಕಿತನಾದೆ. ನಡುಭಾರತದಲ್ಲಿ ಎದುರಾಗುವ ವಿಂಧ್ಯಪರ್ವತದ ಕಾಡನ್ನಾಗಲಿ, ರಾಜಸ್ಥಾನದ ಅರಾವಳಿ ಕಾಡನ್ನಾಗಲಿ, ಹಿಮಾಲಯದ ಅಡವಿಯನ್ನಾಗಲಿ ಕಂಡವರಿಗೆ, ನಮ್ಮ ಆಗುಂಬೆ ಕುದುರೆಮುಖ ಕೊಡಚಾದ್ರಿಗಳ ಕಾಡು, ಎಷ್ಟು ದಟ್ಟ ಮತ್ತು ವಿಶಿಷ್ಟ ಎಂದು ಹೊಳೆಯುತ್ತದೆ. ಶ್ರೀಶೈಲದ ಕಾಡು ಗಿಡ್ಡಮರಗಳಿಂದ ಕೂಡಿದ್ದು ಅಷ್ಟು ದಟ್ಟವಲ್ಲ. ಬಹುಶಃ ಕಲ್ಲುನೆಲ ಹಾಗೂ ಕಡಿಮೆ ಮಳೆಯ ಕಾರಣ, ಮರಗಳು ಎತ್ತರ ಬೆಳೆದಂತಿಲ್ಲ. ಇದು ನಮ್ಮ ಬಿಳಿಗಿರಿರಂಗನ ಬೆಟ್ಟದ ಕಾಡನ್ನು ಹೋಲುತ್ತದೆ. ಬಸ್ಸು ಸುತ್ತಿಸುತ್ತಿ ಒಂದು ದೊಡ್ಡಬೆಟ್ಟದ ತುದಿಗೆ ಹತ್ತಿತು. ಅಲ್ಲಿಂದ ದೂರದ ತಗ್ಗಿನಲ್ಲಿ, ಬಿಸಿಲಿಗೆ ಹಾಲಹಳ್ಳದಂತೆ ಬೆಳ್ಳಗೆ ಬೆಳಗುವ ಕೃಷ್ಣಾನದಿಯ ದಡದಲ್ಲಿ, ಶ್ರೀಶೈಲ ದೃಗ್ಗೋಚರವಾಯಿತು. ತಿರುಪತಿ, ಮಾದೇಶ್ವರ ಬೆಟ್ಟಗಳಂತೆ ಇದು ಸಹ ಸುತ್ತ ಕಾವಲು ನಿಂತ ಬೆಟ್ಟಗಳ ನಡುವಣ ಒಂದು ಕಣಿವೆ ಕ್ಷೇತ್ರ.

ಊರ ತಲುಪಿದವನೇ ಒಂದು ಛತ್ರದಲ್ಲಿ ವಸತಿ ಮಾಡಿದೆ. ಅಲ್ಲಿ ಆಯಾ ಜಾತಿಸಮುದಾಯಕ್ಕೆ ಒಂದರಂತೆ ಛತ್ರಗಳಿವೆ. ಕರ್ನಾಟಕದ ಅನೇಕ ಮಠಗಳ ಛತ್ರಗಳೂ ಇವೆ. ಶ್ರೀಶೈಲದಲ್ಲಿ ಬೇಕಾದಷ್ಟು ತೆಲುಗು ಮರಾಠಿಗರ ಪ್ರವೇಶವಿದೆಯಾದರೂ, ಕನ್ನಡಿಗರ ಹಿಡಿತವಿನ್ನೂ ಇದೆ. ಗುಡಿಯ ಅರ್ಚಕರು ಕನ್ನಡಿಗರು. ಗುಡಿಯ ಆವರಣದಲ್ಲಿ ಪಂಚಪೀಠಗಳಿಗೆ ಸೇರಿದ ಪಂಡಿತಾರಾಧ್ಯರ ಕನ್ನಡ ಮಠವಿದೆ. ಶ್ರೀಶೈಲರ ಹೆಚ್ಚಿನ ಭಕ್ತರು ಸಹ ಕನ್ನಡಿಗರು ಎಂದು ಅನಿಸಿತು.

ಮಲ್ಲಿಕಾರ್ಜುನ ಗುಡಿಯನ್ನು ನೋಡಲಾರಂಭಿಸಿದೆ. ಭಾರತದ ೧೨ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ದೊಡ್ಡಗುಡಿ. ಪ್ರಾಕಾರದ ಸುತ್ತೇ ಒಂದು ಮೈಲಿಯಷ್ಟಿದೆ. ಒಟ್ಟು ಗುಡಿಯ ವ್ಯವಸ್ಥೆ ನೋಡಿದರೆ, ಕಾಲಕಾಲಕ್ಕೆ ದೊಡ್ಡದೊಡ್ಡ ರಾಜ್ಯಗಳು ನೆರವು ಕೊಟ್ಟು ಇದನ್ನು ಸಂಭಾಳಿಸಿರಬೇಕು ಎನಿಸುತ್ತದೆ. ನನ್ನನ್ನು ಸೆಳೆದಿದ್ದು ಗುಡಿಯ ಗೋಡೆಗೆ ಲಗತ್ತಿಸಿದ ಶಿಲಾಫಲಕಗಳ ಮೇಲೆ ಕೆತ್ತಲಾದ ಉಬ್ಬುಚಿತ್ರಗಳು. ಹಂಪಿಯ ಮಂಟಪ ಮತ್ತು ಗುಡಿಗಳ ಕಂಬಗಳಲ್ಲೂ ಉಬ್ಬುಶಿಲ್ಪಗಳಿವೆ. ಆದರೆ ಶ್ರೀಶೈಲದ ಉಬ್ಬುಚಿತ್ರಗಳು ಆದಿಮ ಶೈವ ಸಂಪ್ರದಾಯವನ್ನು ಸೂಚಿಸುವಂತಹವು; ಗತಕಾಲದ ಸಂಪುಟವೊಂದರ ತೆರೆದಿಟ್ಟ ಹಾಳೆ ಓದುತ್ತಿರುವ ಅನುಭವ ಕೊಡುವಂತಹವು. ಶೂಲಕಂಬಕ್ಕೇರಿಯೊ ತಲೆ ಕತ್ತರಿಸಿಕೊಂಡೊ ಪ್ರಾಣತ್ಯಾಗ ಮಾಡಿದ ವೀರರ ಶಿಲ್ಪಗಳು; ಮಿಗಗಳನ್ನು ಬೇಟೆಯಾಡುತ್ತಿರುವ ಜನರು; ಸಸ್ಯಾಹಾರಿ ಪ್ರಾಣಿಗಳ ಮೇಲೆ ಹುಲಿ ಮಾಡುತ್ತಿರುವ ಆಕ್ರಮಣ; ವಿವಿಧ ಯುದ್ಧ ಭಂಗಿಗಳಲ್ಲಿ ಕಾದುತ್ತಿರುವ ಸೈನಿಕರು; ಹಾವಾಡಿಸುವ ಹಾವಾಡಿಗ; ಮೈಎಲುಬು ಕಾಣುವಂತೆ ಬಡಕಲಾದ ದೇಹವುಳ್ಳ ಯೋಗಿನಿ; ಒಡೆಯನ ಕಾಲಿಂದ ಮುಳ್ಳು ತೆಗೆಯುವ ಸೇವಕರು; ಆನೆಯೊಂದು ಮರವನ್ನು

ಅಲ್ಲಾಡಿಸುವಾಗ ಕಿರಿಚುತ್ತಿರುವ ಕೋತಿ; ನೃತ್ಯ ಮತ್ತು ವಾದ್ಯಕಾರರ ಮೇಳಗಳು– ಒಟ್ಟಿನಲ್ಲಿ ಇಡೀ ಗೋಡೆಯು ಶ್ರೀಶೈಲ ಪರಿಸರದ ವಿಶ್ವಕೋಶದಂತಿತ್ತು.

ಶ್ರೀಶೈಲದಲ್ಲಿದ್ದ ಅಸಂಖ್ಯಾತ ನರಬಲಿ ಮತ್ತು ಪ್ರಾಣಿಬಲಿ ಶಿಲ್ಪಗಳನ್ನು ನೋಡಿ ಗದಗದ ಹುಟ್ಟಿತು. ಇವು ಇಲ್ಲಿ ಒಂದು ಕಾಲಕ್ಕಿದ್ದ ಶೈವಧರ್ಮದ ಸಂಕೇತಗಳು. ಕುರಿಯನ್ನು ಲಿಂಗದ ಮುಂದೆ ಕಡಿಯುತ್ತಿರುವ ಶಿಲ್ಪ; ತಮ್ಮ ತಲೆಯನ್ನು ಲಿಂಗದ ಮುಂದೆ ಕತ್ತರಿಸಿಕೊಂಡಿರುವ ವೀರನ ಶಿಲ್ಪ; ಶೂಲಕಂಭಕ್ಕೇರಿದ ವೀರರ ಶಿಲ್ಪ; ಮೇಲಿಂದ ನಟ್ಟಬಾಣಗಳ ಮೇಲೆ ಬಿದ್ದಿರುವ ವೀರನ ಶಿಲ್ಪ. ಇಷ್ಟದೈವವನ್ನು ಒಲಿಸಲು ಎಷ್ಟೊಂದು ಬಗೆಯಲ್ಲಿ ಮನುಷ್ಯ ಜೀವ ಸಮರ್ಪಣೆಯಾಗಿದೆ.

ನಿಸ್ಸಂಶಯವಾಗಿ ಶ್ರೀಶೈಲವು ಶರಣಪೂರ್ವ ಕಾಲದಲ್ಲಿ ಮತ್ತು ನಂತರದಲ್ಲೂ ಕೂಡ ಅತಿಮಾರ್ಗಿ ಶೈವಧರ್ಮದ ಪಂಥಗಳಿದ್ದ ಜಾಗವಾಗಿತ್ತು. ಕಲ್ಯಾಣದ ಶರಣರು ಈ ಶೈವಪಂಥಗಳನ್ನು ಕಟುವಾಗಿ ಟೀಕೆ ಮಾಡಿದರು. ಎಂತಲೇ ಅವರಿಗೆ ಶ್ರೀಶೈಲವು ಮುಖ್ಯವಾಗಲಿಲ್ಲ. ಆದರೂ ಅಕ್ಕ ಮತ್ತು ಅಲ್ಲಮರು ಶ್ರೀಶೈಲಕ್ಕೇ ಯಾಕೆ ಬಂದರು? ಅವರು ಶ್ರೀಶೈಲಕ್ಕೆ ಬಂದರೂ ಗುಡಿಗಾಗಿಯಲ್ಲ. ಗುಹೇಶ್ವರನಿರುವ ನಿಸರ್ಗನಿರ್ಮಿತ ಕದಳಿಯ ಗುಹೆಗೆ. ಕಾರಣ, ಶ್ರೀಶೈಲವು ಅತಿಮಾರ್ಗಿ ಪಂಥಗಳಿದ್ದ ತಾಣ ಮಾತ್ರವಾಗಿರಲಿಲ್ಲ. ದರ್ಶನದಲ್ಲೂ ವಿದ್ವತ್ತಿನಲ್ಲೂ ಯೋಗದಲ್ಲೂ ದೊಡ್ಡ ಸಾಧನೆ ಮಾಡಿದ ದಾರ್ಶನಿಕರಿಂದಲೂ ಯೋಗಿಗಳಿಂದಲೂ ವಿದ್ವಾಂಸರಿಂದಲೂ ಜಿಜ್ಞಾಸುಗಳಿಂದಲೂ ಕೂಡಿದ ಜ್ಞಾನಕೇಂದ್ರವೂ ಆಗಿತ್ತು.

ಲೋಕಾರ್ಥ–ಪರಮಾರ್ಥ, ರಾಗ–ವಿರಾಗಗಳ ಅತ್ಯಂತಿಕ ಸಂಘರ್ಷದ ಬಿಂದುವಿನಂತಿರುವ ಕದಳಿ ಗುಹೆಯನ್ನು ನೋಡಲು ಮಾರನೆಯ ದಿನ ಹೋಗಬೇಕೆಂದು ನಿರ್ಧರಿಸಿದೆ. ಇದಕ್ಕಾಗಿ ದೋಣಿಯನ್ನು ಗೊತ್ತುಪಡಿಸಬೇಕಿತ್ತು. ದೋಣಿಗಳು ಹೊರಡುವ ಪಾತಾಳಗಂಗೆ ಎಂಬ ನದೀತೀರಕ್ಕೆ ಹೋದೆ. ಶ್ರೀಶೈಲಕ್ಕೆ ಬಂದ ಭಕ್ತರು ಕೃಷ್ಣೆಯ ನೀರನ್ನು ಸ್ಪರ್ಶಿಸುವ ಜಾಗವೇ ಪಾತಾಳಗಂಗೆ. ಆಳವಾದ ಕಣಿವೆಯಲ್ಲಿರುವ ಹೊಳೆಯನ್ನು ಕಡಿದಾದ ಬೆಟ್ಟದ ಬೆನ್ನಿಂದ ಅರ್ಧ ಮೈಲಿಯಷ್ಟು ಆಳಕ್ಕಿಳಿದು ಮುಟ್ಟಬೇಕು. ನಲ್ಲಮಲೈ ಕಾಡಿನಲ್ಲಿ ಬೆಟ್ಟಗಳ ಇಕ್ಕಟ್ಟಿನಲ್ಲಿ ಜಾಗ ಮಾಡಿಕೊಂಡು ಕೃಷ್ಣೆ ಹರಿಯುತ್ತಾಳೆ. ಆ ಇಕ್ಕಟ್ಟಿನ ಒಂದು ತುದಿಗೆ ಕಟ್ಟೆ ಕಟ್ಟಿರುವ ಕಾರಣ, ಬೆಟ್ಟಗಳನ್ನು ಕುತ್ತಿಗೆತನ ಮುಳುಗಿಸಿ ಹಿನ್ನೀರು ಮಡುಗಟ್ಟಿದೆ– ಗೇರುಸೊಪ್ಪೆಯಲ್ಲಿ ಶರಾವತಿಯಲ್ಲಿ ನಿಂತಂತೆ. ಈ ಹಿನ್ನೀರಲ್ಲಿ ಕದಳಿ ಮತ್ತು ಅಕ್ಕನ ಗುಹೆಗಳಿಗೆ ಪಾತಾಳಗಂಗೆಯಿಂದ ಸುಮಾರು ೮–೧೦ ಕಿ.ಮೀ. ದೂರ ಹೊಳೆಯೊಳಗೇ ಸಾಗಬೇಕು. ಹೊಳೆಯಾಚೆ ಒಂದು ದಡದಲ್ಲಿಳಿದು ಎಡಕ್ಕೆ ಹೊರಳಿದರೆ, ಕದಳಿ ಗುಹೆಯ ಹಾದಿ. ಬಲಕ್ಕೆ ಹೊರಳಿದರೆ ದಂಡೆಗೆ ಹತ್ತಿಕೊಂಡು ಅಕ್ಕನ ಗುಹೆ. ಆದರೆ ಕದಳಿ ಗುಹೆಗೆ ಮಾತ್ರ ಎರಡು ಮೂರು ಬೆಟ್ಟಗಳನ್ನು ಹತ್ತಿಳಿದು



ಮೂರು ಕಿ.ಮಿ. ದಟ್ಟಕಾಡಿನಲ್ಲಿ ನಡೆಯಬೇಕು.

ಸಂಜೆಯಾಗಿತ್ತು. ಪಾತಾಳಗಂಗೆಗೆ ಹೋದಾಗ, ಕದಳಿಗೆ ಹೋಗುವುದು ಎಂತಹ ಕಷ್ಟದ ಮತ್ತು ಅಪಾಯಕಾರಿ ಯತ್ನ ಎಂದು ಗೊತ್ತಾಯಿತು. ದೋಣಿಕಾರರು ಬಿಲ್‌ಕುಲ್ ನಿರಾಕರಿಸಿದರು. ನಾನು ಯಾವ ಕಾರಣಕ್ಕೆ ಅತ್ಯಾಸೆಯಿಂದ ಬಂದೆನೊ, ಅದುವೇ ಕೈತಪ್ಪಿ ಹೋಗುವಂತೆ ತೋರಿ ದುಗುಡವಾಯಿತು. ಜಾತ್ರೆ ಟೈಮು ಬಿಟ್ಟರೆ, ಕದಳಿ ಗವಿಗೂ ಅಕ್ಕನ ಗವಿಗೂ ಯಾತ್ರಿಕರು ಹೋಗುವುದು ಕಡಿಮೆ. ಒಬ್ಬಿಬ್ಬರು ಯಾತ್ರಿಕರು ಸಿಕ್ಕರೆ ಅಂಬಿಗರಿಗೆ ಗಿಟ್ಟುವುದಿಲ್ಲ. ಹೋಗಿ ಬರುತ್ತಾ ೧೨ ಮೈಲಿ ಹುಟ್ಟು ತೋಡಿ ಸುಸ್ತಾಗುತ್ತದೆ. ಇದಲ್ಲದೆ ಯಾತ್ರಿಕರ ಜತೆ ಕಾಡಲ್ಲಿ ಮಾರ್ಗದರ್ಶಕನಾಗಿ ಬೇರೆ ನಡೆಯಬೇಕು. ಗುಹೆಯ ಹಾದಿ ಗೊತ್ತಿರುವ ಪ್ರವಾಸಿಗರಾದರೆ, ಅವರು ಮರಳಿ ಬರುವ ತನಕ ಹೊಳೆಯ ಹೆಣ ಕಾಯಬೇಕು. ಒಟ್ಟಿನಲ್ಲಿ ಅಂಬಿಗರು ಬರುವ ಉತ್ಸಾಹ ತೋರದೆ ನಾನಾ ನೆವ ಹೇಳತೊಡಗಿದರು. ಹೆಚ್ಚು ಬಾಡಿಗೆ ವಸೂಲಿ ಮಾಡಲು ಈ ನಟನೆ ಎಂದು ನನಗೆ ಶಂಕೆ ಬಂತು.

ಆದರೆ ಶ್ರೀಶೈಲಕ್ಕೆ ಬಂದು ಕದಳಿ ನೋಡದೆ ಹೋಗುವುದು ಹೇಗೆ? ನನ್ನ ಕಂಗಾಲುಮುಖ ಕಂಡು ಒಬ್ಬ ಅಂಬಿಗ ಬರಲು ಕರುಣೆಯಿಂದ ಒಪ್ಪಿಕೊಂಡ. ಆತನ ಹೆಸರು ಶಿವು; ಕಟ್ಟುಮಸ್ತಾದ ತರುಣ. ಚೌಕಾಸಿ ಮಾಡಿ ೧೫೦ ರೂಪಾಯಿಗೆ ಒಪ್ಪಿಸಿ ಬಂದು ಛತ್ರದಲ್ಲಿ ಮಲಗಿದೆ. ರಾತ್ರಿಯಿಡೀ ನಿದ್ದೆಯಿಲ್ಲ. ಬರೀ ಹಳವಂಡಗಳು.

ಬೆಳಗಿನ ಜಾವ ಎದ್ದು ಹೊತ್ತು ಹುಟ್ಟುವ ಮುನ್ನ ಪಾತಾಳಗಂಗೆಗೆ ಬಂದು ದೋಣಿಗಾಗಿ ಕಾಯತೊಡಗಿದೆ. ಶಿವು ಬುತ್ತಿಯ ಗಂಟನ್ನೂ ಹುಟ್ಟನ್ನೂ ಹಿಡಿದು ದೂರದಲ್ಲಿ ಬರುವುದು ಕಂಡಿತು. ಕೈಲಿ ಸಣ್ಣದೊಂದು ಕೈಗತ್ತಿಯೂ ಬೀಡಿ ಬೆಂಕಿಪೊಟ್ಟಣಗಳ ಸಣ್ಣದೊಂದು ಪೆಂಡಿಯೂ ಇತ್ತು. ಯಾಕೆಂದು ತಿಳಿಯಲಿಲ್ಲ. ಬಂದವನೇ ದಡದ ಮೇಲೆ ದಬ್ಬುಹಾಕಿದ್ದ ಹರಿಗೋಲನ್ನು ಮಗುಚಿ ನೀರಿಗಿಳಿಸಿದ. ಬಾಂಡಲಿಯಂತಹ ಬಿದಿರಪುಟ್ಟಿಗೆ ಚರ್ಮ ಹೊದೆಸಿ, ಕೆಳಗೆ ಡಾಂಬರನ್ನು ಬಳಿದು ತಯಾರು ಮಾಡಿದ ಹರಿಗೋಲದು. ಅದಕ್ಕೆ ರೊಟ್ಟಿ ಚುಂಚಕದಂತಹ ಮರದ ಹುಟ್ಟು. 'ಗುಹೇಶ್ವರಾ! ಮರಳಿ ಪಾತಾಳಗಂಗೆಗೆ ತಲುಪಿಸಪ್ಪಾ' ಎಂದು ಪ್ರಾರ್ಥಿಸಿ ಕುಳಿತುಕೊಂಡೆ. ಚಳ್‌ಚಳಕ್ ಹುಟ್ಟು ಬೀಳತೊಡಗಿತು. ಹರಿಗೋಲು ಚಲಿಸಲಾರಂಭಿಸಿತು. ಪಾತಾಳಗಂಗೆ ದೂರವಾಗುತ್ತ ದಡದ ಜನರೂ ಚುಕ್ಕಿಯಂತೆ ಚಿಕ್ಕವರಾಗಿ ಕಡೆಗೆ ಕಾಣದಂತಾದರು.

ಬರಬರುತ್ತಾ ನೀರು ಪರಿಚಿತವಾಗಿ ನೆಲದಂತೆ ಭರವಸೆ ತರತೊಡಗಿತು. ಅಂಬಿಗನ ತೆಲುಗನ್ನಡ ಅರ್ಥವಾಗದಿದ್ದರೂ ಆಪ್ತವಾಗತೊಡಗಿತು. ಅವನ ಸಂಸಾರದ ಬಗ್ಗೆ ವಿಚಾರಿಸುತ್ತ ಕುಳಿತೆ. ಅವನ ಮಾತು ನನಗೆ, ನನ್ನ ಮಾತು ಅವನಿಗೆ ಬೆಡಗಿನ ವಚನ. ಕೆಳಗೆ ತಂಪಾದ ಜಲ. ಮೇಲೆ ಸುಡುವ ರಣರಣ ಬಿಸಿಲು. ಬದಿಗೆ ನೆಟ್ಟಗೋಡೆಯಂತೆ

ಬೆಟ್ಟಗಳು, ಅವುಗಳ ನೆತ್ತಿಯ ಮೇಲಿನ ಗಿಡ್ಡನೆ ಗಿಡಗಳು, ಅಲ್ಲಲ್ಲಿ ನೀರಲ್ಲಿ ನೆಟ್ಟ ಬಲಿಕಂಬಗಳಂತೆ ನಿಂತ ಒಣಮರಗಳು, ಅವುಗಳ ಮೇಲೆ ಮೀನಬೇಟೆಗೆ ಕೂತಿರುವ ಹದ್ದುಗಳು, ಬೆಟ್ಟಗಳ ಮೇಲೆ ಮೋಡ ರಚಿಸಿದ ನೆರಳಿನ ಚಿತ್ರಗಳು– ಗಮನಿಸುತ್ತ ಕುಳಿತೆ. ತರುಣನಾದರೂ ಶಿವು ನಿರಂತರ ನೀರು ಮೊಗೆಮೊಗೆದು ಬೆವರುತ್ತಿದ್ದರು. ಅವನು ಅಲ್ಲಲ್ಲಿ ದಡದಲ್ಲಿ ಬೀಡುಬಿಟ್ಟ ಬೆಸ್ತರಿಗೆ ಬೀಡಿ ಬೆಂಕಿಪೊಟ್ಟಣ ಸರಬರಾಜು ಮಾಡುತ್ತ, ಆ ಕುಟುಂಬದವರ ಜತೆ ಮಾತಾಡುತ್ತ, ವಿಶೇಷವಾಗಿ ಮತ್ಸ್ಯಗಂಧಿಯರ ಜತೆ ನಗುತ್ತ, ತನ್ನ ಜೇಬಲ್ಲಿದ್ದ ಏನನ್ನೊ ಅವರಿಗೆ ಕೊಡುತ್ತ, ಹೊತ್ತುಕಳೆದು ಬರುತ್ತಿದ್ದನು.

ಎಷ್ಟೋ ದೂರ ಚಲಿಸಿದ ಮೇಲೆ ಹೊಳೆಯು ಎಲ್ ಆಕಾರದಲ್ಲಿ ದಕ್ಷಿಣಕ್ಕೆ ತಿರುಗಿರುವ ಒಂದು ಕಡೆ ಶಿವು ಹರಿಗೋಲನ್ನು ದಡಕ್ಕೆ ತಂದನು. ದಡದಲ್ಲಿ ಹರಿಗೋಲನ್ನಿಟ್ಟು, ಹುಟ್ಟನ್ನು ದೂರದ ಗಿಡದಲ್ಲಿ ಅಡಗಿಸಿದನು. ಇಬ್ಬರೂ ಬುತ್ತಿ ಬಿಚ್ಚಿ ತಿಂದೆವು. ಬಳಿಕ ಪಶ್ಚಿಮ ದಿಕ್ಕಿನ ಬೆಟ್ಟಗಳನ್ನು ತೋರಿಸಿ ಇದರಲ್ಲಿ ಮೂರುಮೈಲಿ ಹೋಗಬೇಕು ಏಳಿ ಎಂದನು. ಅದೊಂದು ಊರು ಮನೆ ಜನರಿಲ್ಲದ ಅಭಯಾರಣ್ಯ. ಅಭಯ ಪ್ರಾಣಿಗಳಿಗೆ; ಭಯ ನಮಗೆ. ಎಷ್ಟೋ ಬೆಟ್ಟಗಳನ್ನು ಹತ್ತಿ ಇಳಿದೆವು. ಗಾಳಿಯೂ ಆಡುತ್ತಿರಲಿಲ್ಲ. ಒಂದು ಗಂಟೆಯ ಚಾರಣದ ಬಳಿಕ ಇದ್ದಕ್ಕಿದ್ದಂತೆ ಮಟ್ಟಸವಾದ ನೆಲದ ಮೇಲೆ ಬೆಳೆದ ಕಾಡು ಬಂತು. ಅದನ್ನು ದಾಟಿದ ಬಳಿಕ ಒಂದು ಝರಿ ಬಂತು. ಆ ಝರಿಯು ಒಂದು ಬಂಡೆಗಲ್ಲಿನಿಂದ ಕೆಳಗೆ ಒಂದು ಚಿಕ್ಕ ಪ್ರಪಾತಕ್ಕೆ ಭೋರೆಂದು ಧುಮುಕುತ್ತಿತ್ತು. ಅಲ್ಲಿಂದ ಕೆಳಕ್ಕೆ ಹೋದರೆ ಕದಳಿಯ ಗುಹೆ. ಆಸುಪಾಸಿನಲ್ಲಿ ಯಾವುದೇ ಬಗೆಯ ಸ್ಮಾರಕಗಳಾಗಲಿ ಗುಡಿಯಾಗಲಿ ಇಲ್ಲ. ಬರೀ ಕಾಡು. ನಿಜವಾಗಿಯೂ ಅಲ್ಲಮನ ಬಯಲು ತತ್ವಕ್ಕೆ ಸರಿಯಾದ ತಾಣ.

## ೨

ಕಣಿವೆಯ ಬಲ ಮಗ್ಗುಲಿಂದ ಇಳಿದು ಗುಹೆಯೊಳಗೆ ಹೊಕ್ಕೆವು. ಆಆಆ... ಎಂದು ನೀರಾನೆ ಬಾಯಿತೆಗೆದಂತೆ, ೨೦೦ ಅಡಿಯಷ್ಟು ಉದ್ದದ, ೩೦ ಅಡಿ ಅಗಲದ ಗುಹೆ. ಗುಹೆಯ ದಡದಲ್ಲಿ ಕಡಿದಾದ ಕೊಳ್ಳ. ಕೊಳ್ಳದ ಒಂದು ಜಾರಿನಲ್ಲಿ ಕಾಡುಬಾಳೆಯ ಗಿಡ. ಮರದಿಂದ ಮರಕ್ಕೆ ಬಲೆಯನ್ನು ಕಟ್ಟಿಕೊಂಡು ಕಾಯುತ್ತಿರುವ ಹೆಜ್ಜೇಡಗಳು. ಗುಹೆಯ ನೆಲ ಥಂಡಿ. ಅಡಿಗೆಗೊ ಪ್ರಾಣಿಗಳನ್ನು ದೂರವಿಡುವುದಕ್ಕೊ ಬೆಂಕಿಹಾಕಿ ಗವಿಯ ಮಾಡೆಲ್ಲ ಕಪ್ಪಾಗಿದೆ. ಹುಲ್ಲೆಯೂ ಹುಲಿಯೂ ಕೂಡಿ ಮೇಯುವುದ ಕಂಡೆ ಎಂದು ಅಲ್ಲಮ ಯಾವರ್ಥದಲ್ಲಿ ಹೇಳಿದನೊ, ಇದಂತೂ ಹುಲಿ ಹುಲ್ಲೆಗಳು ಕೂಡುವ ಜಾಗವೇ. ಅದರಲ್ಲೂ ಸರ್ಪಗಳು ಬಂದು ಕುಂಡಲಿನೀ ಭಂಗಿಯಲ್ಲಿ ಮಲಗಲು ಪ್ರಶಸ್ತವಾದ ಜಾಗ. ನಿರ್ಭಾವುಕನಾಗಿ ಧ್ಯಾನಕ್ಕೆ ಕೂತೆ. ಹಕ್ಕಿಯ ಕಚಿಪಿಚಿ ಮತ್ತು ಸಣ್ಣಗೆ



ನೀರು ಧುಮುಕುವ ಸದ್ದು ಬಿಟ್ಟರೆ ಬೇರೆ ದನಿಯಿಲ್ಲ. ಆದರೆ ಬೆನ್ನಹುರಿಯಲ್ಲಿ ಹರಿಯುವ ಅವ್ಯಕ್ತ ಭಯದಿಂದ ಏಕಾಗ್ರತೆ ಸಾಧ್ಯವಾಗಲಿಲ್ಲ. ಅಲ್ಲಮ ಅಕ್ಕರ ವಚನಗಳನ್ನು ನೆನೆದೆ. ಅವು ಮನಸ್ಸಿನೊಳಗೆ ಇಳಿದು ಅರಳಲಿಲ್ಲ. ಕಂಗೆಡಿಸುವ ನೀರವತೆ. ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ! ಎಷ್ಟೊಂದು ದೂರದಿಂದ ಬಂದೆ. ಕದಳಿಯ ಗುಹೆಯಲ್ಲಿ ಧ್ಯಾನ ಸಾಧ್ಯವಾಗುತ್ತಿಲ್ಲ.

ಎದ್ದು ಗವಿಯನ್ನು ನೋಡುತ್ತ ಅದರುದ್ದಕ್ಕೂ ಹೋದೆ. ಗವಿಯ ತುದಿಯಲ್ಲಿ ಮಣ್ಣಿನ ಮೋಟುಗೋಡೆಗಳನ್ನು ಎಬ್ಬಿಸಿ ಮಾಡಿದ ಒಂದು ಪುಟ್ಟ ಅಂಕಣವಿತ್ತು. ಮೆಟ್ಟಿಲುಹತ್ತಿ ಅದರೊಳಗೆ ಹೋದೆ. ಎದೆ ಧಸಕ್ಕೆಂದಿತು. ಒಬ್ಬ ತರುಣ ಸಾಧು, ತನ್ನೆದುರು ಫಳಫಳ ಹೊಳೆಯುವ ತ್ರಿಶೂಲ ಇಟ್ಟುಕೊಂಡು ಕಣ್ಣುಮುಚ್ಚಿ ಕೂತಿದ್ದನು. ನನ್ನ ಹೆಜ್ಜೆ ಸಪ್ಪಳ ಕೇಳಿ ಕಣ್ತೆಗೆದು ಗೋಣುಹಾಕಿ ಬಾ ಒಳಗೆ ಎಂದನು. ನಮಸ್ಕಾರ ಮಾಡಿ, ನನ್ನಲ್ಲಿದ್ದ ಬಾಳೆಹಣ್ಣಲ್ಲಿ ಒಂದು ಚಿಪ್ಪನ್ನು ತೆಗೆದುಕೊಟ್ಟೆ. ಇಸಿದುಕೊಂಡ. ಎಷ್ಟು ವರ್ಷದಿಂದ ಇಲ್ಲಿದ್ದೀರಿ ಎಂದೆ. ಅದನ್ನು ಕಟ್ಟಿಕೊಂಡು ನಿನಗೇನು ಎಂದ. ಸುಮ್ಮನೆ ಕೂತೆವು. ಉಸಿರನ್ನು ಕಟ್ಟಿಸುವ ನೀರವ ಮೌನ.

## ೩

ಶಿವು ಹೋಗೋಣವೆಂದು ಕಣ್ಸನ್ನೆ ಮಾಡಿದ. ಸಾಧುವಿಗೆ ನಮಸ್ಕಾರ ಮಾಡಿ, ಗುಹೆಯ ಹೊರಗೆ ಬಂದೆ. ಕೊಂಚ ನಿರಾಳವೆನಿಸಿತು. ಹೊಳೆದಡಕ್ಕೆ ಹೋಗಬೇಕಾದರೆ ಮತ್ತೆ ಮೂರುಮೈಲಿ ಕಾಡೊಳಗೆ ನಡೆಯಬೇಕು. ಅಲ್ಲಿಂದ ಮತ್ತೆ ೮ ಕಿ.ಮೀ. ನೀರೊಳಗೆ ಹೋಗಬೇಕು. ಝರಿಯನ್ನು ದಾಟಿ ಕಾಡನ್ನು ಹಾಯತೊಡಗಿದೆವು. ಕೊನೆಯ ಬೆಟ್ಟದ ತುದಿಯಿಂದ ಡೊಂಕಬಂಕವಾಗಿ ಹರಿದಿರುವ ಹೊಳೆ ಕಂಡಿತು. ದಡಕ್ಕೆ ಬಂದು ಹರಿಗೋಲು ಹಾಕಿ ಹಿಂಪಯಣ ಆರಂಭವಾಯಿತು.

ನನಗೆ ಕದಳಿ ಗುಹೆಯನ್ನು ಕಂಡು ನಿರಾಶೆಯಾಗಿತ್ತು. ವಚನ ಸಾಹಿತ್ಯ ಓದಿ ಕಟ್ಟಿಕೊಂಡಿದ್ದ ನನ್ನ ಕಲ್ಪನೆಯ ಗುಹೆಯೇ ಚೆನ್ನಾಗಿತ್ತು. ಸುಂದರವಾಗಿತ್ತು. ಅದನ್ನು ನಾನು ಕಂಡ ವಾಸ್ತವದ ಗುಹೆಯು ಗುದ್ದಿ ಕೆಡವಿಬಿಟ್ಟಿತು. ಅರ್ಥದಾರಿ ಆಗಿರಲಿಲ್ಲ. ಸಂಜೆಯಾಗತೊಡಗಿತು. ನಾವು ತಗ್ಗಿನಲ್ಲಿ ಇರುವುದರಿಂದಲೂ ಬೆಟ್ಟಗಳು ಗೋಡೆಯಂತೆ ಅಡ್ಡವಾಗಿರುವುದರಿಂದಲೂ ಬೇಗನೆ ಕತ್ತಲು ಕವಿಯಿತು. ನೀರು ಕಪ್ಪಗಾಯಿತು. ಮೆಲ್ಲನೆ ಚಂದ್ರ ಮೂಡಿದನು. ಶ್ರೀಶೈಲದ ರಸಸಿದ್ಧರು ಹರಿಸಿದ ಪಾದರಸದಂತೆ ನೀರು ಅಲೆಗಳ ಹೊಳಪಿನಲ್ಲಿ ಹೊಳೆಯತೊಡಗಿತು. ಆಕಾಶ ನಕ್ಷತ್ರ ಖಚಿತವಾಗತೊಡಗಿತು. ನಾನು ದಣಿವಿನಿಂದ ಮುಖಮೇಲೆ ಮಾಡಿ ಹರಿಗೋಲ ತಳದಲ್ಲಿ ಬಿದ್ದುಕೊಂಡೆ. ಅತ್ತಲಿತ್ತ ಉಯ್ಯಾಲಾಡುವ ದೋಣಿಯ ಸಮೇತ ಆಕಾಶವೂ ತೂಗಾಡತೊಡಗಿತು. ಹುಟ್ಟಿನೊಂದಿಗೆ ಶಿವು ಹುಟ್ಟಿಸುತ್ತಿದ್ದ ಚಳ್ ಚಳಕ್ ನಾದವು ಕಿವಿಯನ್ನು ತುಂಬತೊಡಗಿತು.

ಕಂಡ ಕದಳಿ ಗುಹೆಗಿಂತಲೂ ಗುಹೆಗಾಗಿ ಮಾಡಿದ ಜಲಯಾನವೇ ಬಯಲ ಅನುಭವ ಕೊಡತೊಡಗಿತು. ಕದಳಿ ಗುಹೆಯಲ್ಲಿ ಸಾಧ್ಯವಾಗದ ಏಕಗ್ರತೆ ಹರಿಗೋಲಲ್ಲಿ ನೀರನಡುವೆ ಸಾಧ್ಯವಾಗತೊಡಗಿತು. ದಣಿದ ದೇಹಕ್ಕೆ ದೋಣಿಯ ಓಲಾಟ ಸೇರಿ ಸಮಾಧಿಗೆ ಸಂದವರಂತೆ ಕಣ್ಮುಚ್ಚಿದೆ. ಎಲ್ಲಿಯ ಬಳ್ಳಿಗಾವೆ ಮತ್ತು ಉಡುತಡಿ? ಎಲ್ಲಿಯ ಕದಳಿ ಗುಹೆ? ಎತ್ತಣಿಂದೆತ್ತ ಸಂಬಂಧ? ಎಷ್ಟೊಂದು ದೂರದಿಂದ ಅಕ್ಕ 'ಚಿಲಿಮಿಲಿಯೆಂದೋದುವ ಗಿಳಿಗಳಿರಾ ನೀವು ಕಾಣಿರೇ ನೀವು ಕಾಣಿರೇ' ಎಂದು ಕೇಳಿಕೊಂಡು ಇಲ್ಲಿಯ ತನಕ ಬಂದಳಲ್ಲಾ! ಒಂದೇ ಸೀಮೆಯಿಂದ ಬಂದ ಅಲ್ಲಮ ಮತ್ತು ಅಕ್ಕ, ತಮ್ಮ ಅನುಭವಗಳನ್ನು ಕದಳಿಯ ಗುಹೆಯಲ್ಲಿ ಹೇಗೆ ಹಂಚಿಕೊಂಡರೊ? ಈ ಹೊಳೆದಡದಲ್ಲಿ ಈ ಅಡವಿಯಲ್ಲಿ ಹೇಗೆ ಅಲೆದಾಡಿದರೊ? ಅಥವಾ ಅವರು ಪರಸ್ಪರ ಭೇಟಿಯಾದರೊ ಇಲ್ಲವೊ? ಶತಮಾನಗಳ ಹಿಂದಕ್ಕೆ ಚಲಿಸಿ ಮನಸ್ಸು ಕಲ್ಪಿಸಿಕೊಳ್ಳತೊಡಗಿತು.

ಹರಿಗೋಲು ಪಾತಾಳಗಂಗೆ ಮುಟ್ಟುವ ಹೊತ್ತಿಗೆ ಊಟದ ಹೊತ್ತು ಮೀರಿತ್ತು. ಶಿವುಗೆ ಮಾತಾಡಿದ ಬಾಡಿಗೆಯ ಮೇಲೆ ನೂರು ರೂಪಾಯಿ ಖುಶಿಗೆ ಕೊಟ್ಟು, ನಿನ್ನೆ ಚೌಕಾಸಿ ಮಾಡಿದ ಅಪರಾಧ ತಿದ್ದಿಕೊಂಡೆ. 'ಮಾರಾಯ, ಜೀವನದ ದೊಡ್ಡ ಆಸೆಯನ್ನು ಈಡೇರಿಸಿದೆ' ಎಂದು ಅಪ್ಪಿಕೊಂಡೆ. 'ಅಯ್ಯಾ ಸಂಸಾರ ಸಾಗರದಲ್ಲಿ ಈಸಾಡುವ ನನ್ನಂತಹ ಮೀನುಗಳನ್ನು ವಿರಕ್ತಿಯ ಬಲೆಯಲ್ಲಿ ಸಿಕ್ಕಿಸುವ ಜಾಲದಂತಿರುವ ಕದಳಿಯ ಗುಹೆಯನಾರೂ ಹೋಗಬಾರದಯ್ಯಾ' ಎಂದು ನಿಟ್ಟುಸಿರು ಬಿಡುತ್ತ, ನನ್ನ ಮಾರಣಾಂತಿಕ ಹಸಿವನ್ನು ಹಿಂಗಿಸಲು ಹಪಹಪಿಯಿಂದ ಛತ್ರದತ್ತ ಧಾವಿಸಿದೆ. ನನಗೆ ಅಲ್ಲಮ ಅಕ್ಕರು ಮರೆತುಹೋಗಿ, ದೂರದ ಊರಲ್ಲಿರುವ ಮಡದಿ, ಮಕ್ಕಳು ತೀವ್ರವಾಗಿ ನೆನಪಾಗತೊಡಗಿದರು.

## ಲೇಖಕರ ಪರಿಚಯ

**ರಹಮತ್ ತರೀಕೆರೆ [೧೯೫೯]**

ಕನ್ನಡದ ಪ್ರಸಿದ್ಧ ಸಂಸ್ಕೃತಿ ಚಿಂತಕರು ಮತ್ತು ವೈಚಾರಿಕ ಬರಹಗಾರರು. ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು. ಕರ್ನಾಟಕದ ಸೂಫಿಗಳು, ಕರ್ನಾಟಕದ ನಾಥಪಂಥ, ಕರ್ನಾಟಕದ ಮೊಹರಂ, ಗೇರ ಮರಡಿ ಕತೆಗಳು ಮುಂತಾದ ಸಂಶೋಧನ ಕೃತಿಗಳು; ಪ್ರತಿಸಂಸ್ಕೃತಿ, ಕತ್ತಿಯಂಚಿನ ದಾರಿ, ಚಿಂತನೆಯ ಪಾಡು ಮೊದಲಾದ ವಿಮರ್ಶನ ಗ್ರಂಥಗಳು; ನಡೆದಷ್ಟೂ ನಾಡು, ಕದಳಿ ಹೊಕ್ಕು ಬಂದೆ – ಪ್ರವಾಸ ಕೃತಿಗಳು ಮತ್ತು ಮರದೊಳಗಿನ ಕಿಚ್ಚು, ಸಾಂಸ್ಕೃತಿಕ ಅಧ್ಯಯನ, ಧರ್ಮ ಪರೀಕ್ಷೆ ಮುಂತಾದ ಚಿಂತನಪರ ಕೃತಿಗಳಿಂದ ಪ್ರಸಿದ್ಧರಾಗಿದ್ದಾರೆ.



"ಕದಳಿ ಹೊಕ್ಕು ಬಂದೆ" ಎಂಬ ಅವರ ವಿಸ್ತೃತವಾದ ಲೇಖನದ ಸಂಕಲಿತ ರೂಪ ಇಲ್ಲಿದೆ.

## ಶಬ್ದಾರ್ಥ ವಿವರಣೆ

ತಾಣ–ಸ್ಥಳ; ಮುಖಾಮುಖಿ–ಭೇಟಿ, ದಮಿಸು–ನಿಯಂತ್ರಿಸು; ಅರವಟ್ಟಿಗೆ–ಪ್ರವಾಸಿಗಳ ಬಳಕೆಗಾಗಿ ನೀರು, ಮಜ್ಜಿಗೆ, ಪಾನಕ ಮುಂತಾದವುಗಳನ್ನು ನೀಡುವ ಸ್ಥಳ; ದೃಗ್ಗೋಚರ–ಕಣ್ಣಿಗೆ ಕಾಣು; ಪ್ರಕಾರ–ಕಾಂಪೌಂಡ್; ಸಂಭಾಳಿಸು–ಆಡಳಿತ ನಡೆಸು, ವ್ಯವಸ್ಥೆ ಮಾಡು; ಲಗತ್ತಿಸು–ಅಂಟಿಸು, ಜೋಡಿಸು; ಆದಿಮ–ಪ್ರಾಚೀನ; ಗದಗದ–ನಡುಕ; ರಾಗ–ಪ್ರೀತಿ; ವಿರಾಗ–ವೈರಾಗ್ಯ; ದುಗುಡ–ಬೇಸರ, ದುಃಖ; ಹಳವಂಡ–ಕನವರಿಕೆ; ಪೆಂಡಿ–ಕಟ್ಟು; ದಬ್ಬುಹಾಕು–ಬೋರಲು ಮಾಡು; ಬೆಡಗಿನ ವಚನ–ಗೂಢಾರ್ಥದ ಮಾತು; ಚರಣ–ನಡಿಗೆ.

## ೧. ಸಂದರ್ಭ ಸಹಿತ ವಿವರಿಸಿ.

೧. ಗತಕಾಲದ ಸಂಪುಟವೊಂದರ ತೆರೆದಿಟ್ಟ ಹಾಳೆ ಓದುತ್ತಿರುವ ಅನುಭವ.

೨. ಇಷ್ಟದೈವವನ್ನು ಒಲಿಸಲು ಎಷ್ಟೊಂದು ಬಗೆಯಲ್ಲಿ ಮನುಷ್ಯಜೀವ ಸಮರ್ಪಣೆಯಾಗಿದೆ.

೩. ಗುಹೇಶ್ವರಾ ! ಮರಳಿ ಪಾತಾಳಗಂಗೆಗೆ ತಲುಪಿಸಪ್ಪಾ.

೪. ಅಭಯ ಪ್ರಾಣಿಗಳಿಗೆ, ಭಯ ನಮಗೆ.

೫. ಎಷ್ಟು ವರ್ಷದಿಂದ ಇಲ್ಲಿದ್ದೀರಿ?

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಲೇಖಕರಿಗೆ ಎಲ್ಲಿಗೆ ಹೋಗಬೇಕೆಂದು ಆಸೆಯಿತ್ತು ?

೨. ಶ್ರೀ ಶೈಲದ ಕಾಡು ನಮ್ಮ ಯಾವ ಕಾಡನ್ನು ಹೋಲುತ್ತದೆ ?

೩. ಮಲ್ಲಿಕಾರ್ಜುನ ಗುಡಿಯ ಅರ್ಚಕರು ಯಾವ ಭಾಷಿಕರು ?

೪. ಲೇಖಕರಿಗೆ ಏನನ್ನು ನೋಡಿ ಗದಗದ ಹುಟ್ಟಿತು ?

೫. ಶ್ರೀಶೈಲದ ಪಾತಾಳಗಂಗೆಯಲ್ಲಿ ಯಾವ ನದಿಯು ಹರಿಯುತ್ತದೆ ?

### ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಯಾವ ಯಾವ ಯೋಗ ಸಾಧಕರ ಮುಖಾಮುಖಿ ಶ್ರೀಶೈಲ ಕ್ಷೇತ್ರದಲ್ಲಿ ನಡೆದಿತ್ತು ?

೨. ಶ್ರೀಶೈಲದ ಭೌಗೋಳಿಕ ಪರಿಸರ ಹೇಗಿದೆ ?

೩. ಶ್ರೀಶೈಲ ಕೇವಲ ಅತಿಮಾರ್ಗಿಗಳ ತಾಣ ಮಾತ್ರವಲ್ಲ ಎಂದು ಲೇಖಕರು ಭಾವಿಸಲು ಕಾರಣವೇನು ?

೪. ಕದಳಿ ಗವಿಗೆ ಹೋಗಲು ಅಂಬಿಗರು ನಿರಾಕರಿಸಿದ್ದೇಕೆ ?

೫. ಕದಳಿ ಗವಿಯಲ್ಲಿ ಲೇಖಕರು ತರುಣ ಸಾಧುವನ್ನು ಭೇಟಿ ಮಾಡಿದ ಪ್ರಸಂಗವನ್ನು ವಿವರಿಸಿ.

### ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಶ್ರೀಶೈಲದ ಉಬ್ಬುಶಿಲ್ಪಗಳ ಬಗ್ಗೆ ಲೇಖಕರು ನೀಡುವ ವಿವರಗಳನ್ನು ಸಂಗ್ರಹಿಸಿ ಬರೆಯಿರಿ.

೨. ಶ್ರೀಶೈಲದ ಸಾಂಸ್ಕೃತಿಕ ಹಿನ್ನೆಲೆಯ ಬಗೆಗೆ ಲೇಖಕರು ನೀಡಿರುವ ವಿವರಗಳನ್ನು ಸಂಗ್ರಹಿಸಿ ಬರೆಯಿರಿ.

೩. ಲೇಖಕರ ಕದಳಿ ಗುಹೆಯ ಪ್ರವಾಸಾನುಭವವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

***

# ೧೨. ಮೊಸರು ಅವಲಕ್ಕಿ

**ಸುನಂದಾ ಬೆಳಗಾಂವಕರ**

ಛಟ್ ಎಂದು ಸೀನಿದೆ. ಮೈಯನ್ನು ಹಿಂದಕ್ಕೂ ಮುಂದಕ್ಕೂ ದೂಡುತ್ತ ಹಣ್ಣು ಮೆಣಸಿನಕಾಯಿಯ ರಂಜಕ ಅರೆಯುತ್ತಿದ್ದ ತಾಯಿ ಅಂದರು.

“ಇನ್ನೊಂದು ಸೀನು. ಒಂಟಿ ಸೀತಿಯಲ್ಲ” ಅವರ ಮಾತು ಮುಗಿಯುತ್ತಿದ್ದಂತೆ– ಛಟ್ ಪಟ್ ಛಟ್ ಪಟ್ ಒಂದರ ಮೇಲೊಂದು ಸೀನಿದೆ.

“ನಿನ್ನೆ ಇಡೀ ಮಳಿಯೊಳಗೆ ತೋಯ್ಸಿಗೊಂಡು ಬಂದಿ. ನೆಗಡಿ ಆಗೇದ” ಎಂದು ತಮ್ಮಷ್ಟಕ್ಕೆ ತಾವೇ ನುಡಿದುಕೊಳ್ಳುತ್ತ, ರಂಜಕ ಅರೆಯುವುದನ್ನು ನಿಲ್ಲಿಸಿ, ಕೈ ತೊಳೆದು, ಒಂದು ಮುಷ್ಟಿ ಒಣ ಅವಲಕ್ಕಿ ತಂದರು.

“ಈ ಒಣ ಅವಲಕ್ಕಿ ಮುಕ್ಕು. ಥಂಡಿ ತಲೀ ಬಿಟ್ಟು ಕೆಳಗ ಇಳಿತದ” ಅಂದರು.

ಈ ಒಣ ಅವಲಕ್ಕಿಗೂ ಥಂಡಿಗೂ ಏನು ಸಂಬಂಧ! ಯಾವ ವೈದ್ಯಶಾಸ್ತ್ರದಲ್ಲಿ ಅವಲಕ್ಕಿ ಥಂಡಿಗೆ ಔಷಧಿ ಎಂದು ಬರೆದಿದ್ದಾರೆ ಎಂದೆನಿಸಿತು.

ಆದರೆ ತಾಯಿಯಿತ್ತ ವಿಷವೂ ಅಮೃತ. ಈ ಒಣ ಅವಲಕ್ಕಿ ರಾಮಬಾಣ ಏಕಾಗಬಾರದು?

ಸಾಗರಶಾಯಿಯಾದ ಶ್ರೀಕೃಷ್ಣ ಪರಮಾತ್ಮನಿಗೂ ಶೀತವಾಗಿತ್ತೇ? ಅಂತಲೇ ಗೆಳೆಯ ಸುಧಾಮನನ್ನು ನೆನಸಿರಬೇಕು. ಅತ್ತಿಗೆ ಕಳಿಸಿದ ಒಣ ಅವಲಕ್ಕಿಯನ್ನೇ ಮುಕ್ಕಿ ‘ಶ್ರೀ ಕೃಷ್ಣಾರ್ಪಣಮಸ್ತು’ ಅಂದುಬಿಟ್ಟ.

ನಾನು ಒಣ ಅವಲಕ್ಕಿಯನ್ನ ಒಂದು ಮುಕ್ಕು ಮುಕ್ಕಿದೆ. ತಂಗಿ ಅಂದಳು “ಅವ್ವಾ ಈ ಒಣ ಅವಲಕ್ಕಿಗೆ ಮೊಸರು ಹಾಕಲ್ಲ.”

“ಹೌದು ಮೊಸರು ಅವಲಕ್ಕಿ ಚಟ್ನಿ ಪುಡಿ” ಎಂದೆ. ತಾಯಿ ನಕ್ಕರು.

“ಏನ ವಿಚಾರ ನಮ್ಮವ್ವಾ. ನೆಗಡಿ ಆಗೇದ ಅಂತ ಒಣ ಅವಲಕ್ಕಿ ಕೊಟ್ಟರ ಮೊಸರ ಹಾಕಿಸಿಗೋತೀದಿ.”

ತಾಯಿ ಮೊಸರವಲಕ್ಕಿಯನ್ನೇ ಕಲಸಿ ತಂದರು. ಎಂಥ ಹಿರಿ ಜೀವ! ಸಮಾಧಾನದ ಮೂರ್ತಿ. ಸಿಟ್ಟಿಗೆದ್ದು ಗೊತ್ತಿಲ್ಲ.

ಮೊಸರವಲಕ್ಕಿ ಚಟ್ನಿಪುಡಿ ಹಾಕಿ ಕೊಟ್ಟರು. ಮೊಸರವಲಕ್ಕಿ ಬಾಯಿಗೆ ಹಾಕಿಕೊಂಡೆ. ತಾಯ ಕೈಯ ಮೊಸರವಲಕ್ಕಿ ಏನು ರುಚಿ!

ಮನಸ್ಸು ಪುಕ್ಕ ಪುಕ್ಕವಾಗಿ ಬಿಚ್ಚಿ ಹಕ್ಕಿಯಾಗಿ ಎಲ್ಲೆಲ್ಲೋ ಹಾರಿತು.

* * *

ಮೊಸರವಲಕ್ಕಿ ಅಂದರೆ ಮೊಸರು ಅವಲಕ್ಕಿ. ಅವಲಕ್ಕಿ ಮೊಸರಲ್ಲ. ಮೊಸರವಲಕ್ಕಿಯ ರುಚಿ ಅವಲಕ್ಕಿಯ ಮೊಸರಿಗೆ ಬರದು. ಮೊಸರು, ಕೆನೆಕೆನೆಯಾಗಿ ಗಟ್ಟಿ ಇರಬೇಕು. ಗಡಿಗೆ ಮೊಸರಿದ್ದರಂತೂ ಬಲು ಸೊಗಸು. ಆ ಮೊಸರಿಗೆ ಅವಲಕ್ಕಿ ಉಪ್ಪು ಬೆರಸಿ, ಜೊತೆಗಿಷ್ಟು ಚಟ್ನಿಪುಡಿ ಇದ್ದರಾಯಿತು, ಪಂಚಪಕ್ವಾನ್ನ ಉಂಡದ್ದಕ್ಕಿಂತ ಹೆಚ್ಚು ತೃಪ್ತಿ.

ಚೈತ್ರ ಪೂರ್ಣಿಮೆಯ ರಾತ್ರಿ ನದಿ ತೀರದಲ್ಲಿ ಮೊಸರವಲಕ್ಕಿ ತಿಂದವರಿಗೆ ಅದರ ರುಚಿ ಗೊತ್ತು. ಮನೆಯಲ್ಲಿ ಹಬ್ಬದ ದಿನ ಊಟ ಹೊತ್ತಾದಾಗಲೆಲ್ಲ ಮೊಸರವಲಕ್ಕಿ ಕಲಸಿ ಕೊಟ್ಟರೆ ಅಥವಾ ಹಚ್ಚಿದ ಅವಲಕ್ಕಿಗೆ ಮೊಸರು ಹಾಕಿದರೆ ಆಗುವ ಸಂಭ್ರಮ ವರ್ಣನಾತೀತ. ಶ್ರೀಕೃಷ್ಣ ಜನ್ಮಾಷ್ಟಮಿ, ಚೈತ್ರ ಮಾಸದ ಗೌರಿಯನ್ನು ಕಳಿಸುವ ದಿನ ಆ ಮೊಸರವಲಕ್ಕಿ ರುಚಿಸಿದ ರಸಸ್ಮೃತಿ ನಾನು ಈ ದಿನದವರೆಗೂ ಮರೆತಿಲ್ಲ.

ನನ್ನ ತಾಯಿ ತೌರುಮನೆಗೆ ಹೋದಾಗಲೆಲ್ಲ ಅವಳ ಸೋದರತ್ತೆಯರು ಕಲಸುತ್ತಿದ್ದ ಮೊಸರವಲಕ್ಕಿ ನೆನಪಾಗುತ್ತದೆ. ಆ ವಿಧವೆ ಮಡಿ ಹೆಂಗಸರು ರಾತ್ರಿ ಫಲಹಾರ ಮಾಡುವುದನ್ನೇ ಕಾಯುತ್ತ ಕುಳಿತಿರಬೇಕು. ಅವರು ಮಡಿ ಉಟ್ಟುಕೊಳ್ಳುವುದೇ ತಡ ನಿದ್ರೆ ತುಂಬಿದ ಕಣ್ಣುಗಳನ್ನು ಬೆಳ್ಳಿಯ ಬಟ್ಟಲದಂತೆ ತೆಗೆದು ಕಳ್ಳ ಬೆಕ್ಕಿನಂತೆ ಅಡಿಗೆ ಮನೆ ಸೇರಬೇಕು. ಅವರನ್ನು ನೆನಸಿದಾಗೊಮ್ಮೆ "ಹಿಟ್ಟು ಅವಲಕ್ಕಿಗಳ ಮೂಲಕ್ಕೆ ಹುಟ್ಟಿದಳೋ" ಎಂಬ ಬೇಂದ್ರೆಯವರ ಮಾತು ಮರ್ಮಕ್ಕೆ ಹತ್ತಬೇಕು.

ಅವರಿಬ್ಬರ ಜೀವನ ಕಥೆ ತುಂಬಾ ವಿಷಾದಕರ. ಬಾಲ ವಿಧವೆಯರು. ಸಣ್ಣತ್ಯಾ ದೊಡ್ಡತ್ಯಾ ಇಬ್ಬರೂ ಮೊಸರವಲಕ್ಕಿ ನಮ್ಮ ಕೈಗೆ ಹಾಕಬೇಕು. ಅದರ ರುಚಿ ನಾಲಿಗೆಯ ಮೇಲೆ ಇನ್ನೂ ಉಳಿದಿದೆ. ಅವರಿಬ್ಬರ ಜೀವನವೂ ಅವಲಕ್ಕಿಯಂತೆಯೇ. ಕೆಸರಿನೊಳಗೆ ಬೆಳೆದು, ಕಾಲಕೆಳಗೆ ತುಳದು, ಕುಟ್ಟಿ ಕುಟ್ಟಿ ಬಿಳಿಯ ಪರಿಯಾಗಿ ನಿಂತ ಅವಲಕ್ಕಿ.

ಆ ಮೊಸರವಲಕ್ಕಿ ಆಸೆಗೆ ನಾನೂ ಅವರಂತೆ ಆದಾಗ ನಿತ್ಯ ಮೊಸರವಲಕ್ಕಿ ತಿನ್ನಬಹುದಲ್ಲ ಎಂಬ ವಿಚಾರ ಮೂಡುತ್ತಿತ್ತು. ಆ ಮುಗ್ಧ ಮನಸ್ಸಿನ ಆಸೆ ಈಗ ನೆನದಾಗ ಎದೆ ಬಿರಿಯುತ್ತದೆ. ಯಾವ ಸೌಭಾಗ್ಯಕ್ಕೆ ಆ ಮೊಸರವಲಕ್ಕಿ!

* * *



ತಾಯಿ ಕಲಸಿದ ಮೊಸರವಲಕ್ಕಿಗೆ ಅದೇ ರುಚಿ. ಮೊಸರವಲಕ್ಕಿ ಕಲಸುವ ಕಲೆ ರಕ್ತಗತವಾಗಿ ಬಂದಿರಬೇಕು. ಕೈಯಲ್ಲಿದ್ದ ಮೊಸರವಲಕ್ಕಿ ಬಾಯಿಗೆ ಹಾಕಿದೆ. ತಾಯಿ ಕೇಳಿದರು "ಹುಳಿ ಆತೇನ? ಹಾಲು ಬೇಕೇನ?"

"ಬ್ಯಾಡಾ, ರುಚಿ ಆಗೇದ."

ತಾಯಿ ಮತ್ತೆ ರಂಜಕ ಅರೆಯಲು ಕುಳಿತರು. ನಿಂಬೇಹಣ್ಣಿನ ರಸ ಅರ್ಧಮರ್ಧ ನುರಿತ ಮೆಣಸಿನಕಾಯಿಗಳನ್ನು ಕಟ್ಟಿಗೆಯ ಚಮಚೆಯಿಂದ ಸರಿಸುತ್ತಿದ್ದರು. ಪಟ್ ಪಟ್ ಎಂದು ಸಪ್ಪಳ ಮಾಡುತ್ತ ಮೆಣಸಿನ ಕಾಯಿಗಳು ಒರಳಿನಲ್ಲಿ ನುಣ್ಣಗಾಗುತ್ತಿದ್ದವು. ಖಾರವಾಸನೆ ಆ ಕೋಣೆಯಲ್ಲೆಲ್ಲಾ ಹರಡಿತ್ತು. ಇದ್ದಿಲು ಒಲೆಯ ತನುಗೆಂಡದ ಮೇಲೆ ಹಾಲು ಕಾಯುತ್ತಿತ್ತು. ದೇವರ ಮುಂದಿನ ನಂದಾದೀಪದ ಎಣ್ಣೆ ಸೋರಿ ಗೋಡೆಯನ್ನೆಲ್ಲ ಜಿಡ್ಡಾಗಿಸಿತ್ತು. ಈ ದೇವರ ಪೂಜೆಗೆ ಬರುವ ಆಚಾರ್ಯರಿಗೆ ಸ್ವಚ್ಛತೆಯ ಅರಿವೇ ಇಲ್ಲ. ಸಾಲಿಗ್ರಾಮದ ನೆತ್ತಿಗಿಷ್ಟು ನೀರು ಹೊಯ್ದು, ಗಂಧವನ್ನಿಷ್ಟು ತೇಯ್ದು ಯಾರ ಮನೆಯ ಪಂಚಾಯಿತಿಯನ್ನೆಲ್ಲ ಹೇಳುತ್ತ, ಮಂತ್ರ ಮರೆತು ದಕ್ಷಿಣೆ ಗಿಟ್ಟಿಸಿ ಹೋಗುವ ಆಚಾರ್ಯರ ಬಗ್ಗೆ ಕೋಪ ಬಂದಿತ್ತು.

ತಮ್ಮ, ಗೆಳೆಯನೊಂದಿಗೆ ಬಂದ. ನಾವು ಮೊಸರವಲಕ್ಕಿ ತಿನ್ನುವುದನ್ನು ನೋಡಿ.

"ಅವ್ವಾ ನನಗೆ" ಎಂದು ಕೈ ಮುಂದೆ ಮಾಡಿದ.

ಆತನ ಮುಂದೆ ಚಾಚಿದ ಕೈ ನೋಡಿ ತಾಯಿ "ಪ್ಲೇಟ ತಗೋ ಹಾಕ್ತೀನಿ" ಅಂದರು. ಅವರ ಕಣ್ಣಲ್ಲಿ ನೀರಿತ್ತು.

"ಯಾಕ ಏನಾತು?" ನಾನು ಪ್ರಶ್ನಿಸಿದೆ

"ಏನಿಲ್ಲ" ಖಾರದ ಕೈ ತೊಳೆದು ಸೆರಗಿನಿಂದ ಕಣ್ಣೀರನೊರಸಿಕೊಂಡರು.

"ಕಣ್ಣಾಗ ಮೆಣಸಿನಕಾಯಿ ಸಿಡಿತೇನು?"

"ಸುಮ್ಮನಿರು" ಸನ್ನೆ ಮಾಡಿದರು.

ತಮ್ಮನಿಗೂ ಆತನ ಗೆಳಯನಿಗೂ ಮೊಸರವಲಕ್ಕಿ ಕೊಟ್ಟು ಅವರು ತಮ್ಮ ಕೋಣೆಗೆ ಹೋಗುವುದನ್ನೇ ಕಾಯುತ್ತಿದ್ದ ತಾಯಿ ಹೇಳಿದರು.

"ಅವನ ಕೈ ನೋಡಿದರ ಏನೆಲ್ಲ ನೆನಪಾಗ್ತದ" ಅವರ ನೆನಪಿನ ಕೊಂಡಿ ಕಳಚಿತ್ತು. ತಂದೆಯವರ ಕೈಯನ್ನೇ ಹೋಲುವ ತಮ್ಮನ ಕೈ ತಾಯಿವರಿಗೆ ದುಃಖ ತರುತ್ತದೆ.

ತಂದೆಯವರಿಗೆ ಮೊಸರವಲಕ್ಕಿ ಬಲು ಪ್ರೀತಿ. ತಾಯಿ ಮೊಸರವಲಕ್ಕಿ ಕಲಸುವುದೇ ತಡ ಅವರು ಕೈಯೊಡ್ಡಿ ಮೊಸರವಲಕ್ಕಿ ತುತ್ತು ಹಾಕಿಸಿಕೊಂಡು ತಿನ್ನುವದು. ಪ್ಲೇಟ ಚಮಚೆಯಲ್ಲಿ ಅವರಿಗೆ ಅದು ರುಚಿಸುತ್ತಿರಲಿಲ್ಲ.

ಕೈ ನೆಕ್ಕುತ್ತ, ಬೆರಳು ಚೀಪುತ್ತ ಸುರ್ರೆಂದು ಸಪ್ಪಳ ಮಾಡುತ್ತ, ಅಡ್ಡಾಡುತ್ತ ಮೊಸರವಲಕ್ಕಿ ತಿನ್ನುತ್ತಲೇ ಇರಬೇಕು.

"ಕೈ ಚೀಪಿಗೋಳೋ, ಹಾಲು ಮೊಸರು ಸೋರತದ. ಯಾರದಾದ್ರು ಕಣ್ಣಿ ಹತ್ಯಾವೋ" ಎಂದು ಅಜ್ಜಿಯ ಜೀವ ಏನೆಲ್ಲ ಆಡುತ್ತಿರಬೇಕು. ಆ ತಾಯ ಮಾತಿನ ಪರಿವೆಯಿಲ್ಲದೇ ಅವರು ಮೊಸರವಲಕ್ಕಿ ತಿನ್ನುತ್ತಿರಬೇಕು.

ನನ್ನ ಕಕ್ಕಂದಿರಿಬ್ಬರಿಗೂ ಮೊಸರವಲಕ್ಕಿ ಪ್ರೀತಿ. ಅಣ್ಣತಮ್ಮಂದಿರು ಚಿಕ್ಕವರಿರುವಾಗ ತಾಯಿ ಮೊಸರವಲಕ್ಕಿ ಕೊಡುತ್ತಿರಲಿಲ್ಲ. ಆಗ ಈ ಮೂವರೂ ಒಬ್ಬರಿಗೆ ಒಬ್ಬರು ಹೇಳಿಕೊಳ್ಳುತ್ತಿದ್ದರಂತೆ "ಅವ್ವ ಸತ್ತರ ಮೊಸರವಲಕ್ಕಿ ಸಿಗ್ತದೆ" ಎಂದು. ಆ ಮಾತನ್ನು ಎಂದು. ಆ ಮಾತನ್ನು ದೊಡ್ಡವರಾದ ಮೇಲೆ ನೆನಸಿ ನಗುತ್ತ ಮೊಸರವಲಕ್ಕಿ ಮಹಿಮೆ ಹೇಳುತ್ತಿದ್ದರು.

ಒಮ್ಮೊಮ್ಮೆ ತಂದೆಯವರೇ ಸ್ಪೆಶಲ್ ಮೊಸರವಲಕ್ಕಿ ತಯಾರಿಸಬೇಕು. ಹಸಿಮೆಣಸಿನಕಾಯಿ, ಕೊತ್ತಂಬರಿ, ಉಳ್ಳಾಗಡ್ಡಿ ಸಣ್ಣಗೆ ಹೆಚ್ಚಿ ಬೆರಸಬೇಕು. ಮೇಲೆ ತುಪ್ಪದ ಒಗ್ಗರಣೆ. ಒಗ್ಗರಣೆಯಾದದ್ದು ಅವರಿಗೆ ತಿಳಿಯದು. ತಮ್ಮ ತಾಯಿಯನ್ನು ಕೇಳಬೇಕು. ನಂತರ "ನೀವು ಹೆಂಗಸೂರಿಗೆ ಹ್ಯಾಂಗ ರುಚಿ ಮಾಡಬೇಕು ಅನ್ನೋದು ಗೊತ್ತಿಲ್ಲ. ನಿಮಗೆ ವೈರಾಯಿಟಿ ಇಲ್ಲ. ನಾ ಹ್ಯಾಂಗ ರುಚಿ ಮಾಡೇನಿ" ಎಂದು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಳ್ಳುತ್ತ ಎಲ್ಲರ ಕೈಗೂ ಮೊಸರವಲಕ್ಕಿ ತುತ್ತು ಹಾಕಬೇಕು. ಮೆಣಸಿನಕಾಯಿಯನ್ನು ಕಟ್ಟನೇ ಕಡಿದು ನಾವು 'ಹಾ' ಎಂದು ಚೀರಿಕೊಂಡು, ಬಾಯಲ್ಲಿಯ ತುತ್ತನ್ನು ಥೂ ಎಂದು ಉಗುಳಿ ನೀರು ಕುಡಿಯಲು ಓಡಿದಾಗ "ಹೇಡಿಗಳು ಮೆಣಸಿನಕಾಯಿ ತಿನ್ನಲಿಕ್ಕೆ ಆಗೋದಿಲ್ಲ" ಎಂದು ಬೈಯ್ಯಬೇಕು.

ತಂದೆಯವರು ಈಗಿಲ್ಲ. ಮೊಸರವಲಕ್ಕಿಯ ಮೇಲಿದ್ದ ಅವರ ಪ್ರೀತಿ ನಮಗೆಲ್ಲ ಅವರ ಮಧುರ ಸ್ಮೃತಿ.

ಕೂತಲ್ಲಿಂದ ಕಿಡಿಕಿಯಾಚೆ ಕಣ್ಣಾಡಿತು. ಮೂರು ದಿನದಿಂದ ಕಣ್ಣು ಮುಚ್ಚಿ ಧೋ ಎಂದು ಸುರಿಯುತ್ತಿದ್ದ ಮಳೆ ನಿಂತಿದ್ದರೂ ಮೋಡಗಳು ಹನಿಯೊಡೆಯಲು ಕಟ್ಟಿಕೊಂಡು ನಿಂತಿದ್ದವು. ಬಕುಲದ ಗಿಡದಿಂದ ಹೂಗಳು ನೆಲಕ್ಕೆಲ್ಲಾ ಸುರಿದಿದ್ದವು. ನುಗ್ಗಿಯಕಾಯಿ ತುಂಬಾ ಬಿಟ್ಟಿದ್ದವು. ನಾಳೆ ಗುರುಪಾದನಿಗೆ ಹೇಳಿ ನುಗ್ಗಿಕಾಯಿ ತೆಗೆಯಿಸಬೇಕು. ತಂದೆಯವರಿದ್ದಾಗ ಈ ಮನೆಗೆ ಯಾವ ವೈಭವ! ಏನು ದರಬಾರ! ಸಂಜೆ ಅಂಗಳದ ತುಂಬೆಲ್ಲ ಅವರ ಮಿತ್ರ ಮಂಡಳಿ, ಒಲೆಯ ಮೇಲಿನ ಚಹದ ಪಾತ್ರೆ ಕೆಳಗಿಳಿಯುತ್ತಿರಲಿಲ್ಲ. ಎಷ್ಟೊಂದು ಜನ ನಿತ್ಯ ಊಟಕ್ಕೆ! ಎಷ್ಟು ಬಡ ವಿದ್ಯಾರ್ಥಿಗಳು ಮನೆಯಲ್ಲಿ! ಆ ದಿನ ನಾನು ನನ್ನ ಸಹಪಾಠಿಗಳನ್ನೂ, ಪ್ರಾಧ್ಯಾಪಕರನ್ನೂ ಕರೆದುಕೊಂಡು ರಾತ್ರಿ ಮನೆಗೆ ಬಂದಾಗ, ತಂದೆ ಪಿಕ್‌ನಿಕ್‌ನಿಂದ ದಣಿದ ಅವರಿಗೆಲ್ಲ ಮೊಸರವಲಕ್ಕಿ ಮಾಡಿಸಿಕೊಟ್ಟು



ಅದರದ ಸ್ವಾಗತ ಮಾಡಿದ ನೆನಪು ಬಂದು ಮೊಸರವಲಕ್ಕಿಯ ತುತ್ತು ಗಂಟಲದಲ್ಲಿ ಸಿಕ್ಕಿತು ನಾನು ಬಿಕ್ಕಿದೆ.

"ಅಲ್ಲ, ಮೊಸರವಲಕ್ಕಿ ತಿನ್ನು, ಏನ ನೆನಪಾತು? ಅಳತೀ ಯಾಕ? ಹಿಂದಿನದೆಲ್ಲಾ ಕನಸು ಮರೆತುಬಿಡಬೇಕು" ಎಂದು ತಾಯಿ ಹೇಳಿದರು.

ಹೊರಗೆ ಗುಡುಗುವ ಶಬ್ದ. ಮನಸ್ಸು ಕದಡಿತ್ತು. ತಾಯಿ ರಂಜಕ ಅರೆಯುವುದನ್ನು ಮುಗಿಸಿದ್ದರು. ಒಲೆಯ ಮೇಲಿಟ್ಟ ಹಾಲು ಕಾದು ಉಕ್ಕು ಬಂದಿತ್ತು. ತಾಯಿ ತುದಿಬಟ್ಟೆನಿಂದ ಹಾಲಿನ ಪಾತ್ರೆ ಕೆಳಗಿಳಿಸಿ ಪಕ್ಕದಲ್ಲಿದ್ದ ಕಬ್ಬಿಣ ಸೌಟಿನ ಹಿಂಬದಿಯಿಂದ ಕೆಂಡ ಕೆದರಿ, ಆಡಿಸಿ, ಬೂದಿ ಕೆಳಗಿಳಿಸಿದರು. ಒಲೆಯಲ್ಲಿ ಮತ್ತೆ ಇದ್ದಿಲು ತುಂಬಿ ಕಡೆದು ತೆಗೆದಿಟ್ಟ ಬೆಣ್ಣೆ ಕಾಯಿಸಲು ಒಲೆಯ ಮೇಲಿಟ್ಟರು.

ನಾನು ಮೊಸರವಲಕ್ಕಿ ತುತ್ತು ಮತ್ತೆ ಬಾಯಿಗೆ ಹಾಕಿದೆ. ಕಣ್ಣಲ್ಲಿ ನೀರಿತ್ತು. ಕೆಚ್ಚಲ ಗುದ್ದಿ ಹಾಲು ಕುಡಿಯುತ್ತಿದ್ದರೂ, ಆ ನೋವನ್ನು ಸಹಿಸಿಕೊಂಡು, ಕರುವಿನ ಮೈ ನೆಕ್ಕಿ ಮೂಸಿ ಮೂಸಿ ನೋಡಿ ಪ್ರೀತಿಸುವ ಆಕಳದಂತೆ ತಾಯಿ ಬೆನ್ನಮೇಲೆ ಕೈಯಾಡಿಸಿ ಹೇಳಿದರು. "ಸಮಾಧಾನ ಮಾಡಕೋ. ಮೊಸರವಲಕ್ಕಿ ತಿನ್ನು, ಬೆರತ ಹೋಗತದ" ಅಂದರು.

ತಲೆ ಬುಗುರಿಯಾಗಿ ಸುತ್ತಿತ್ತು.

*   *   *

ಆ ದಿನ.

ಮಟ ಮಟ ಮಧ್ಯಾಹ್ನ. ಬಿಸಿಲಿನ ತಾಪಕ್ಕೆ ಮೆಲುಕಾಡಿಸುವದನ್ನು ಬಿಟ್ಟು ಗಿಡದ ನೆರಳಿಗೆ ಮಲಗಿದ ಎಮ್ಮೆಗಳು. ಗಾಳಿಯ ಸುಳಿವಿಲ್ಲದೇ ದಂಡನಾಯಕರ ಆಜ್ಞೆಯನ್ನು ಕಾಯುತ್ತ ನಿಂತ ಸೈನಿಕರಂತೆ ಅಲುಗಾಡದೇ ನಿಂತ ಗಿಡಗಳು. ಭರ್ ಭರ್ ಒಂದರಮೇಲೊಂದು ಓಡುತ್ತಿದ್ದ ಬಸ್ಸುಗಳು. ನನ್ನ ನೆರಳನ್ನೇ ನಾನು ತುಳಿಯುತ್ತ ಕಾಲೇಜಿನ ಪಾಠ ಮುಗಿಸಿ ಮನೆಗೆ ಹೊರಟಿದ್ದೆ.

ಹುಬ್ಬಳ್ಳಿಯ ಅಶೋಕ ನಗರದಲ್ಲಿ ನಮ್ಮ ಮನೆ. ವಿದ್ಯಾನಗರ ಕಾಲೇಜಿನಲ್ಲಿ ನಾನು ಪ್ರಾಧ್ಯಾಪಿಕೆ. ಕರ್ನಾಟಕದ ಮೆಡಿಕಲ್ ಕಾಲೇಜಿನ ಹತ್ತಿರ ಬಂದಾಗ, ಧಾರವಾಡ ಬಸ್ಸಿಗೆ ಬಂದ ಮಾವನವರು ಅಲ್ಲಿಯೇ ಇಳಿದು, ಮೆಡಿಕಲ್ ಕಾಲೇಜಿನ ಕ್ಯಾಂಪಸ್ಸಿನಲ್ಲಿ ಹಾದು ಮನೆಗೆ ಹೊರಟಿದ್ದರು.

ಶುಭ್ರ ಧೋತರ, ತಲೆಗೊಂದು ಕರಿ ಟೊಪ್ಪಿಗೆ, ಅರ್ಧ ಬಿಳಿ ಶರ್ಟಿನ ಮೇಲೆ ಉಲನ್ ಕೋಟು, ಕಾಲಲ್ಲಿ ಚರ್ಮದ ಚಪ್ಪಲಿ, ಉದ್ದ ಕೋಲು ದೇಹದ ಮಾವನವರ ನಡಿಗೆ ದೂರದಿಂದಲೇ ಗುರುತಿಸಿದೆ.

"ಮಾಮಾ" ಎಂದು ಕೂಗಿದೆ. ತಿರುಗಿ ನೋಡಿ ನಿಂತರು. ಧಾವಿಸಿ ಹೋಗಿ ಅವರನ್ನು ಕೂಡಿದೆ.

"ಈಗ ಕಾಲೇಜಿನಿಂದ ಬಂದೇನವ್ವಾ. ನೀ ಭೆಟ್ಟಿಯಾದ್ದು ಛಲೋ ಆತು. ಇಲ್ಲಾಂದ್ರ ನೀ ಬರೋತನಕ ಬಾಗಲದಾಗ ಕೂಡಬೇಕಾಗತಿತ್ತು."

"ಎಂಥಾ ಬಿಸಿಲಾಗ ಬಂದ್ರಿ. ಆಟೋರಿಕ್ಷಾ ತಗೊಂಡು ಮನಿಗೆ ಹೋಗೋಣೇನು?"

"ಬ್ಯಾಡವ್ವಾ, ಆ ಹಂದಿಮೂತಿ ರಿಕ್ಷಾದಾಗ ಕೂಡೂದಕ್ಕಿಂತ ದೇವರ ಕೊಟ್ಟ ನಮ್ಮ ಕಾಲ ಛಲೋ."

ಮಾವನವರಿಗೆ ರಿಕ್ಷಾ ಅಂದರೆ ಬಲು ವಿರೋಧ. ಹೊಟ್ಟೆಯಲ್ಲಿಯ ಕರುಳನ್ನೇ ಬಾಯಿಗೆ ತರಿಸುವ ಆ ರಿಕ್ಷಾಗಳ ಓಟ ಅವರಿಗೆ ಎಳ್ಳಷ್ಟೂ ಹಿಡಿಸುತ್ತಿರಲಿಲ್ಲ.

"ಈ ರಿಕ್ಷಾದಾಗ ಕೂತ್ರ ದಿನತುಂಬಿದ ಗರ್ಭಿಣಿ ಹೆಂಗಸೂರಿಗೆ ಸುಸೂತ್ರ ಪ್ರಸವ" ಎಂದು ನಕ್ಕು ನಗಿಸಿದರು.

"ನೀವು ಈಗ ಬೆಳಗಾಂವಿಯಿಂದ ಬಂದ್ರೇನು?" ಎಂದು ಪ್ರಶ್ನಿಸಿದೆ.

"ಇಲ್ಲ. ಮುಂಜಾನೆ ಧಾರವಾಡಕ್ಕೆ ಬಂದಿದ್ದೆ. ಅಲ್ಲೇ ಊಟಾ ಮಾಡಿ ಹೊಂಟೆ" ಅಂದರು.

ಮಾವನವರೊಡನೆ ನಡೆಯುವದು ಬಲು ಕಠಿಣ. ಅವರ ಒಂದು ಹೆಜ್ಜೆಗೆ ನನ್ನ ಐದು ಹೆಜ್ಜೆ ಬೀಳುತ್ತಿದ್ದವು. ಇಂಥ ವಯಸ್ಸಿನಲ್ಲೂ ಎಷ್ಟು ಹುರುಪಿನ ತೀವ್ರ ನಡಿಗೆಯೆನಿಸಿತು.

"ಯಾಕವ್ವ ದಮ್ಮ ಹತ್ತೇನು? ನನ್ನ ಜೋಡಿ ನಡಿಯೂದಂದ್ರ..." ಎಂದು ಆ ಮಾತು ಅರ್ಧಕ್ಕೆ ನಿಲ್ಲಿಸಿದರು.

"ಊರಿಗೆ ಹೋಗಬೇಕಾಗಿತ್ತನವ್ವಾ. ಎಲ್ಲೂ ಟಾಂಗಾ ಸಿಗಲಿಲ್ಲ. ನಮ್ಮ ಮನ್ಯಾಗ ಇವರೂ ನಾನೂ ಕೂಡೇ ಹೊರಟೇವಿ. ನಾ ಸ್ಟೇಶನ್ನಕ್ಕೆ ಮುಟ್ಟಿ ಚಹಾ ಕುಡದು ಇನ್ನೂ ಯಾಕ ಇವರ ಬಂದಿಲ್ಲಾಂತ ಹುಡುಕಿ ಹೊರಟರ ಅರ್ಧಾ ರಸ್ತೆಕ್ಕ ಸಿಕ್ಕರು. ಅವರದು ಆಮೆ ನಡಿಗೆ" ಎಂದು ಹೆಂಡತಿಯನ್ನು ನೆನಸಿ ನಕ್ಕರು.

ಅತ್ತೆ ಮಾವನವರಲ್ಲಿ ಎಲ್ಲದರಲ್ಲೂ ವ್ಯತ್ಯಾಸ. ಆದರೆ ಅವರಿಬ್ಬರಲ್ಲಿದ್ದ ಪ್ರೀತಿ ನಮಗೆಲ್ಲ ಆದರ್ಶ.

ಅತ್ತೆ ನಿಧಾನ. ಮಾವ ತ್ವರಿತ. ಅತ್ತೆಯವರದು ಮುತ್ತಿನಂತೆ ಹೊಳೆಯುವ ಕೆಂಪು ಬಣ್ಣ. ಮಾವನವರದು ಸಾಲಿಗ್ರಾಮ ಮಿಂಚು. ಅತ್ತೆ ಚೆಲುವೆ, ಕೊಲ್ಹಾಪುರ ಮಹಾಲಕ್ಷ್ಮಿಯ ರೂಪ. ಅದೇ ಗಿಡ್ಡ ಮಾಟ ಮೈಕಟ್ಟು. ಮಾವನವರು ಉದ್ದ ನೀಳ ದೇಹ. ನೀಟವಾದ ಮೂಗು. ತೇಜಪುಂಜಿತ ಕಣ್ಣುಗಳು. ಗದುಗಿನ ವೀರ ನಾರಾಯಣನನ್ನು ನೋಡಿದಂತೆ.

ಒಂದು ದಿನ ನನ್ನ ಯಜಮಾನರು ತಾಯಿಗೆ ಕೇಳಿದರಂತೆ "ಅವ್ವಾ ನೀಯೆಷ್ಟು



ಕೆಂಪು ಇದ್ದೀ ಮಾಮಾ ಕಪ್ಪು ಇದ್ದಾರ. ಹ್ಯಾಂಗ ಲಗ್ನ ಮಾಡಿಕೊಂಡಿ?" ಎಂದು.

ಅದಕ್ಕೆ ಅತ್ತೆಯವರು ಮಗನ ತುಂಟ ಮಾತಿಗೆ "ಕರೇ ಕಸ್ತೂರಿ ವರಹಕ್ಕೆ ಸೇರು" ಎಂದು ಉತ್ತರಿಸಿದರಂತೆ.

ಅಷ್ಟೊಂದು ಪತಿಯ ಬಗ್ಗೆ ಆದರ, ಪ್ರೀತಿಯಿದ್ದ ಅತ್ತೆಯವರು ಮಾವನವರ ಮಾತನ್ನು ಜೀವನದಲ್ಲಿ ಎಂದೂ ತೆಗೆದು ಹಾಕಲಿಲ್ಲ. ಮಾವನವರಿಗೆ ಪ್ರಿಯವಾದ ಒಂದು ವಿಷಯ ಇಸ್ಪೀಟು ಆಟ. ಅದಕ್ಕಾಗಿ ಅವರಿಬ್ಬರಲ್ಲಿ ವೈಮನಸ್ಸಾಗಿ ಮನಸ್ತಾಪವಾದಾಗ ಅದನ್ನು ಅವರು ಎಂದಿಗೂ ಮುಂದುವರಿಸಲಿಲ್ಲ. ಮಾವನವರು ಅಳಿಯ ದೇವರನ್ನೇ ಕರೆದುಕೊಂಡು ಆಡಲು ಹೋಗಿ ಬಿಡುತ್ತಿದ್ದರು. ಮನೆಯಲ್ಲಿ ಹೆಂಡತಿಯೆದುರಿಗೆ ಎಂದೂ ಆಡಲಿಲ್ಲ. ಹೆದರಿಕೆ ಅಲ್ಲ. ಹೆಂಡತಿಗೆ ಅವರು ಕೊಡುತ್ತಿದ್ದ ಮರ್ಯಾದೆ.

ಮನೆ ಮುಟ್ಟಿ ಚಹಾ ಕುಡಿದೆವು. ಆ ಮಾತು ಈ ಮಾತು ಆಡುವದರಲ್ಲಿ ಸಂಜೆಯಾಗಿತ್ತು. ಮಗನ ದಾರಿ ಕಾಯುತ್ತ, ಮನೆಯೆದುರಿನ ಕಟ್ಟೆಯ ಮೇಲೆ ಕುಳಿತ ಅವರಿಗೆ ನಾನು ಕೇಳಿದೆ,

"ಮಾಮಾ ಮೊಸರವಲಕ್ಕಿ ಕಲಸಿ ಕೊಡಲೇನು?"

"ವ್ಹಾ ಭೇಶ್ ಕಲಸವ್ವಾ."

ತುಪ್ಪದ ಒಗ್ಗರಣೆ ಹಾಕಿ ಕೆನೆಮೊಸರಿನಲ್ಲಿ ಅವಲಕ್ಕಿ ಕಲಸಿದೆ. ಸಂಡಿಗೆ ಕುಂಬಳ ಕಾಯಿಸಂಡಿಗೆ, ಅವಲಕ್ಕಿ ಹಪ್ಪಳ ಕರಿದೆ. ಅವರಿಗೆ ಬಲು ಖುಶಿಯಾಯಿತು.

ಅದೇ ಮೊದಲ ಸಲ ನಾನವರಿಗಾಗಿ ತಿಂಡಿ ತಯಾರಿಸಿ ಕೊಟ್ಟದ್ದು. ಮೊಸರವಲಕ್ಕಿ ಬಾಯಿಗೆ ಹಾಕಿದ ಅವರು "ಏನ ಅಪರೂಪ ಆಗೇದವ್ವಾ" ಎಂದರು.

ತಿಂದು ಮುಗಿಸಿದ ಮೇಲೆ "ಭಾಳ ಆರಾಮ ಮಾಡಿಸಿದೆವ್ವಾ. ಹೊಟ್ಟೆ ಶಾಂತ ಆತು. ಅನ್ನದಾತಾ ಸುಖೀಭವ" ಎಂದು ತೇಗಿದರು.

ಆ ತುತ್ತು ಮೊಸರವಲಕ್ಕಿಯಿಂದ ತೃಪ್ತಿಪಟ್ಟ, ಆ ಹಿರಿಜೀವ ನನ್ನನ್ನು ಸಂಪೂರ್ಣ ಮನಸ್ಸಿನಿಂದ ಆಶೀರ್ವದಿಸಿತ್ತು.

ಈ ಅವಲಕ್ಕಿಯ ಮಹಿಮೆಯೇ ಅಂತಹದು. ಒಂದು ಮುಕ್ಕು ಒಣ ಅವಲಕ್ಕಿ ಮುಕ್ಕಿದ ಶ್ರೀಕೃಷ್ಣ ಸುಧಾಮನಿಗೆ ಐಶ್ವರ್ಯವನ್ನೇ ಕೊಟ್ಟ.

ಪಾಪಾ ಸುಧಾಮನ ಮನೆಯಲ್ಲಿ ಎಣ್ಣೆ ಒಗ್ಗರಣೆ ಕಾಳಿಗೂ ಗತಿಯಿರಲಿಲ್ಲ. ಗೆಳೆಯನಿಗಾಗಿ ಚಿಂದಿ ಅರಿವೆಯ ಗಂಟಿನಲ್ಲಿ ಒಣ ಅವಲಕ್ಕಿ ತಂದಿದ್ದ. ಶ್ರೀಕೃಷ್ಣ ಮುಕ್ಕಿದ್ದು ಒಣ ಅವಲಕ್ಕಿಯಲ್ಲ ಸುಧಾಮನ ಪ್ರೀತಿ.

ಮಾವನವರು ಹೇಳಿದರು, "ತಿನ್ನಲಿಕ್ಕೆ ಕೊಡೋ ಮುಂದೆ ಮುಕ್ತ ಮನಸ್ಸಿನಿಂದ ಕೊಡಬೇಕವ್ವಾ. ಎಲ್ಲರ ರುಚಿ ಅಭಿರುಚಿ ತಿಳಿದಿರಬೇಕು. ಅವರಿಗೆ ಹೊಟ್ಟೆಗೆ

ಹಿತವಾಗುವಂತಹ ತಿನಿಸು ಹಸಿವಾದಾಗ ಕೊಟ್ರ ಪುಣ್ಯಾ ಬರ್ತದವ್ವಾ."

ಬಿಸಿಲಿನ ತಾಪದಿಂದ ಬಳಲಿ ಬಂದ ಆ ಮುಪ್ಪಿನ ಜೀವಕ್ಕೆ ನಾನಿತ್ತ ಮೊಸರವಲಕ್ಕಿ ಹಿತಕರವಾಗಿತ್ತು. ಅವರಿಗೆ ಮೊಸರವಲಕ್ಕಿ ಅತ್ಯಂತ ಪ್ರೀತಿಯ ಖಾದ್ಯ.

ಮಗನನ್ನು ಭೆಟ್ಟಿಯಾಗಿ ಊರಿಗೆ ಹೊರಟರು. ಹೋಗುವಾಗ "ಮೊಸರವಲಕ್ಕಿ ಭಾಳ ಅಪರೂಪ ಆಗಿತ್ತವ್ವಾ. ರುಚಿ ಅಭಿರುಚಿ ತಿಳೀತು. ನಿನಗ ಅಡಿಗಿ ಬಂತು" ಎಂದು ಹೇಳಿದರು.

"ಗಣೇಶ ಚೌತಿಗೆ ಬೆಳಗಾಂವಿಗೆ ಬರ್ರಿ ಅಂತ ಹೇಳ್ಯಾಳ. ಇಬ್ಬರೂ ಬರ್ರಿ" ಎಂದು ಮಗನಿಗೆ ಹೆಂಡತಿ ಕಳಿಸಿದ ಸುದ್ದಿ ಮುಟ್ಟಿಸಿ,

"ಆಕಿ ನೆನಸತಿರತಾಳ ಪತ್ರಾ ಬರಿ" ಎಂದು ಹೇಳಿ ಹೊರಟರು.

ಬೆಳಗಾಂವಿಗೆ ಹೋಗಿ ಮಾವನವರು ನನ್ನನ್ನು ಮೊಸರವಲಕ್ಕಿ ಎಕ್ಸ್‌ಪರ್ಟ್ ಎಂದು ಪ್ರಸಿದ್ಧ ಮಾಡಿಯೇ ಬಿಟ್ಟರು. ಅತ್ತೆಯವರಿಗೆ ಹೇಳಿದರಂತೆ "ಎಂಥಾ ಮೊಸರವಲಕ್ಕಿ ಕಲಸಿದ್ದಳು ನಿನ್ನ ಸೊಸಿ. ಭಾಳ ಅಪರೂಪ ಆಗಿತ್ತು." ಮನೆಗೆ ಬಂದು ಹೋಗುವವರಿಗೆಲ್ಲ, ಬಳಗಕ್ಕೆ, ಸೊಸೆಯ ಮೊಸರವಲಕ್ಕಿ ವರ್ಣನೆ ಅವರು ಮಾಡಲೇಬೇಕು.

ಅವರ ಹೊಗಳಿಕೆಯಿಂದ ಬೇಸತ್ತ ಜನರೂ ಇದ್ದರು. "ಮೊಸರವಲಕ್ಕಿ ಕಲಸುದೇನು ಮಹಾ. ಮೊಸರು ರುಚಿ ಇದ್ರ ಮೊಸರವಲಕ್ಕಿ ತಾನ ರುಚಿಯಾಗತದ" ಎಂದು ಅವರ ಮಾತಿಗೆ ಪ್ರತಿಮಾತನಾಡಿದವರೂ ಇದ್ದರು.

ತೀಕ್ಷ್ಣಮತಿಗಳು ಅಸೂಯೆಯಿಂದ "ಮೊಸರವಲಕ್ಕಿಗೆ ನೈಸರ್ಗಿಕ ರುಚಿ ಅದ. ಅದಕ್ಕ ಪಾಕ ಕಲಾದ ಅವಶ್ಯಕತೆಯಿಲ್ಲ" ಎಂದು ಚುಚ್ಚಿ ನುಡಿದಿದ್ದರಂತೆ.

ಅದಕ್ಕೆ ಮಾವನವರು "ದೇವರಿತ್ತ ಸೌಂದರ್ಯಕ್ಕ ಅಲಂಕಾರ ಬೇಕು. ಯೋಗ್ಯ ಅಲಂಕಾರ ಒದಗಿಸೋದ ಕಲಾ. ಹಾಂಗ ಮೊಸರು, ಅವಲಕ್ಕಿ ಎರಡರ ನೈಸರ್ಗಿಕ ರುಚಿಯನ್ನು ಅಧಿಕಗೊಳಿಸುವದ ಮೊಸರವಲಕ್ಕಿ ಕಲಸೋ ಕಲಾ" ಎಂದು ಹೇಳಿ ಜನರ ಬಾಯಿ ಮುಚ್ಚಿಸಿದರಂತೆ.

ಈ ಮಾತನ್ನು ಅವರು ನನ್ನೆದುರಿಗೆ ಹೇಳಿದಾಗ ಹೃದಯ ತುಂಬಿ ಬಂದಿತ್ತು. ಅನ್ನವಾದದ್ದು ತಿಳಿಯದ ನನಗೆ ಅವರ ಅಂತಃಕರಣದ ಪ್ರಶಂಸನೆಯಿಂದ ಅಡಿಗೆ ಮಾಡಲು ಬಂತು.

ಸವದತ್ತಿಗೆ ಹೊಲದ ಕೆಲಸಕ್ಕೆ ಮೇಲಿಂದ ಮೇಲೆ ಹೋಗುತ್ತಿದ್ದ ಅವರು ಧಾರವಾಡಕ್ಕೆ ಬಂದಾಗಲೊಮ್ಮೆ ಹುಬ್ಬಳ್ಳಿಗೆ ಬರುತ್ತಿದ್ದರು. ಆ ದಿನ ರಾತ್ರಿ ಮೊಸರವಲಕ್ಕಿ ಪ್ರೋಗ್ರಾಮ ಆಗಲೇಬೇಕು. ಪ್ರತಿಸಾರೆ ಅವರು ನನ್ನನ್ನು ಹೊಗಳಲೇಬೇಕು. ಅವರ ಹೊಗಳಿಕೆಯಿಂದ ನನನ್ನ ಮೊಸರವಲಕ್ಕಿಗೆ ರುಚಿ ಏರಬೇಕು.



"ಈ ಮೊಸರವಲಕ್ಕಿಗೆ ನಿನ್ನ ಅಂತಃಕರಣ ಕೂಡಿ ಪರಿಮಳ ಬಂದದ ನೋಡವ್ವಾ" ಎಂದು ಒಂದು ದಿನ ಹೇಳಿದರು. ಅದೇ ನಾನವರಿಗೆ ಕೊನೆಯ ಸಾರೆ ಕಲಸಿಕೊಟ್ಟ ಮೊಸರವಲಕ್ಕಿಯಾಗಿತ್ತು.

ಬರಬರುತ್ತ ಅವರ ಪ್ರಕೃತಿ ಕ್ಷೀಣವಾಗಿ ಮೇಲಿಂದ ಮೇಲೆ ಹುಬ್ಬಳ್ಳಿಗೆ ಬರುವುದಾಗುತ್ತಿರಲಿಲ್ಲ. ನಾವು ಬೆಳಗಾವಿಗೆ ಹೋದಾಗಲೊಮ್ಮೆ ಹೇಳಬೇಕು.

"ಮೊಸರವಲಕ್ಕಿ ಪ್ರೋಗ್ರಾಮ್ ಮಾಡಸವ್ವಾ" ಎಂದು. ಅವರ ನಾಲಿಗೆಗೆ ರುಚಿ ಕಡಿಮೆಯಾಗಿತ್ತು.

ಅತ್ತೆಯವರು ಹೇಳಬೇಕು. "ಪ್ರತಿದಿನಾ ನಿನ್ನ ನೆನಸತಾರ. ನಿನ್ನ ಮೊಸರವಲಕ್ಕಿ ನೆನಪಾತು ಅಂದ್ರ ಅವರಿಗೆ ಹುಬ್ಬಳ್ಳಿಗೆ ಹೋಗಬೇಕು ಅನ್ನಸತದ."

ರಸಿಕರಾದ ಮಾವನವರಿಗೆ ಊಟದ ರುಚಿ ಹೆಚ್ಚು. ಅತ್ತೆಯವರ ಕೈ ಅಡಿಗೆ ಬಲು ರುಚಿ, ಪ್ರಸಿದ್ಧ. ಹೆಂಡತಿಯನ್ನು ಹೊಗಳಿದಷ್ಟು ತೆಗಳುತ್ತಿದ್ದುದೂ ಉಂಟು.

"ಏನು ಅಪರೂಪ ಆಗೇದ ಸಾರು!" ಎಂದು ಹೊಗಳುವ ಅವರು,

"ಸಾರೋ ಸೀಗೇಕಾಯಿ ನೀರೋ?" ಎಂದು ಕೇಳಿದ್ದುಂಟು.

"ಚಕ್ಕಲಿ ರಬ್ಬರ ಎಳದ್ಹಾಂಗ ಆಗ್ಯಾವ. ಒಗ್ಗರಣಿ ಕಾಸಿದ ಭಾಂಡಿಯೊಳಗ ಬಟಾಟೆ ಹೋಳು ಒರಸಿ ತಗದ್ಹಂಗ ಆಗೇದ. ಬಟಾಟೆ ಪಲ್ಲ್ಯಾನ ಇದು" ಎಂದು ನಕ್ಕಿದ್ದೂ ಉಂಟು.

"ನಿಮಗ ವಯಸ್ಸಾತು. ಅಡಿಗಿ ಮರತ ಹೋಗೇದ. ಹಲಸಿನ ಕಾಯ ಪಲ್ಲ್ಯಾಕ್ಕೆ ಉಪ್ಪ ಹಾಕಿಲ್ಲ" ಎಂದು ಹೆಂಡತಿಗೆ ಎಚ್ಚರಿಸಿದಾಗ,

"ಮರೆತಿರಬೇಕು. ಉಪ್ಪು ಹಚ್ಚಿಕೊಳ್ಳಿರಿ."

"ಎಲ್ಯಾಗ ಉಪ್ಪು ಹಚ್ಚಿಕೊಂಡ್ರ ಪದಾರ್ಥದ ರುಚಿ ಮುಗೀತು" ಎಂದು ಮಾತಿಗೆ ಪೂರ್ಣವಿರಾಮ ಕೊಡುತ್ತಿದ್ದರು.

ಅಂತಹ ರುಚಿಯಿದ್ದ ಮಾವನವರಿಂದ ಮೊಸರವಲಕ್ಕಿ ತಜ್ಞಳೆಂದು ಬಿರುದು ಪಡೆದ ನನಗೆ ಅವರ ಬಿರುದನ್ನು ಹೆಮ್ಮೆಯಿಂದ ಇಂದಿಗೂ ಹೇಳಿಕೊಳ್ಳಬೇಕೆನಿಸುತ್ತದೆ.

* * *

ಕೈಯಲ್ಲಿದ್ದ ಮೊಸರವಲಕ್ಕಿ ತುತ್ತು ಬಾಯಿಗೆ ಮತ್ತೆ ಬಿತ್ತು. ಮನಸ್ಸಿನಲ್ಲಿ ತೆರೆ ಎದ್ದಿತ್ತು. ಹೊರಗೆ ಮತ್ತೆ ಗುಡುಗಿತ್ತು. ಮೋಡ ಕವಿದು ಕತ್ತಲು ಮನೆಯಲ್ಲೆಲ್ಲ ತುಂಬಿತು.

ಮಾವನವರು ಇಂದಿಲ್ಲ. ಆದರೆ ಮೊಸರವಲಕ್ಕಿ ಅವರ ಮಧುರಸ್ಮೃತಿ ತರುವ ದಿವ್ಯ ಖಾದ್ಯ.

ನಮ್ಮವರು ತಂದೆಯ ತಿಥಿಯ ದಿನ ರಾತ್ರಿ ಮೊಸರವಲಕ್ಕಿ ತಿನ್ನುತ್ತಾರೆ. ಆ ದಿನ ನಮ್ಮ ಮಗಳು ಮೊಸರವಲಕ್ಕಿ ಬೇಡವೆಂದಳು. ಮಗಳನ್ನು ಬಿಟ್ಟು ತಿನ್ನಲಾಗದೇ ಹೇಳಿದರು.

"ಮೊಸರವಲಕ್ಕಿ ತಿನ್ನು. ಅದು ಅಜ್ಜಾಗ ಭಾಳ ಪ್ರೀತಿ."

"ಯಾವ ಅಜ್ಜಾಗ?" ಮಗಳು ಪ್ರಶ್ನಿಸಿದಳು.

"ಇಬ್ಬರೂ ಅಜ್ಜಾಗ."

"ಯಾಕ ತಿನ್ನಬೇಕು?"

"ಅದು ಪ್ರಸಾದ."

ನಮ್ಮವರು ಆ ದಿನ ಆಡಿದಂತೆ ಮೊಸರವಲಕ್ಕಿ ನಮಗೊಂದು ಪ್ರಸಾದ. ಆ ಎರಡು ಅಂತಃಕರಣದ ಜೀವಗಳ ಮಧುರ ಸ್ಮೃತಿ ತರುವ ಪ್ರಸಾದ. ಹೊಟ್ಟೆ, ಬೆನ್ನು ನನ್ನೆದುರು ತಕ್ಕಡಿಯ ಎರಡು ಪರಡಿಗಳಾಗಿ ತೂಗಿದವು.

ತಂದೆಯವರು ತೀರಿಹೋಗಿದ್ದರು. ಮನೆ ಮನಸ್ಸು ಎಲ್ಲ ಭಣ ಭಣ. ನನ್ನನ್ನು ಭೆಟ್ಟಿಯಾಗಲೆಂದು ಬಂದ ಮಾವನವರು ಅಳುತ್ತಿದ್ದ ನನ್ನನ್ನು ಸಂತೈಸಿ ಹೇಳಿದರು, "ಅಳಬ್ಯಾಡವ್ವಾ ನಾ ಇದ್ದೀನಿ." ತಂದೆಯವರ ಅಂತಃಕರಣದ ಕೊರಕಲನ್ನು ತುಂಬಿದ್ದರು. ತಾವು ಸಾಯುವವರೆಗೆ ನನ್ನನ್ನು ತಂದೆಯಾಗಿ ಜೋಕೆಗೈದ ಅವರ ಮನಸ್ಸು ಸಾಗರದಷ್ಟು ವಿಶಾಲ. ಅದರ ಆಳಕ್ಕೆ ಇಳಿದವ ಮುತ್ತನ್ನು ತಂದವನಿದ್ದ. ಚಿಪ್ಪನ್ನು ತಂದವನಿದ್ದ.

* * *

ಗಣೇಶ ಚತುರ್ಥಿಯ ಹಿಂದಿನ ದಿನ ಮಾವನವರ ತಿಥಿ, ಮರುದಿನ ತಂದೆಯವರ ತಿಥಿ. ಗಣೇಶನ ಹಬ್ಬ ನಮ್ಮಿಬ್ಬರ ಉಬ್ಬ ಕಳೆದರೂ ಮೊಸರವಲಕ್ಕಿ ನಮಗೆ ಆ ದಿನಗಳಲ್ಲಿ ಪ್ರಸಾದ.

ನನ್ನ ಜೀವನದಲ್ಲಿ ಮೊಸರವಲಕ್ಕಿ ಪಾತ್ರ ಬಲು ಹಿರಿದು. ಆ ಹಿರಿ ಜೀವಗಳ ಮಧುರ ಸ್ಮೃತಿ, ತಾಯ ವಿಧವೆ ಸೋದರತ್ತೆಯರ ದುಃಖ, ಅಕ್ಕ ತಂಗಿಯರೊಟ್ಟಿಗೆ ಹಬ್ಬದ ದಿನ ಮೊಸರವಲಕ್ಕಿ ಕಲಸಿದಾಗ ಸಮನಾಗಿ ಹಂಚಿ ತಿನ್ನುವ ದಾಯಾದಿತ್ವ. 'ಸುಖದುಃಖೇ ಸಮೇಕೃತ್ವಾ' ಎಂಬ ಗೀತೆಯ ವಾಕ್ಯವನ್ನು ನೆನಪಿಗೆ ತರುವ ಸಾಂಕೇತಿಕ ಸಾಮಾನ್ಯ ಉಪಾಹಾರ ಮೊಸರವಲಕ್ಕಿ.

ಹೊಟ್ಟೆ ಬೆನ್ನು ಮತ್ತೆ ನನ್ನೆದುರು ತಕ್ಕಡಿಯ ಪರಡಿಗಳಾಗಿ ತೂಗಿದವು. ಹೆತ್ತ ಹೊಟ್ಟೆಯಿಂದ ಜಾರಿ ಬೆನ್ನ ಮೇಲೆ ಬಿದ್ದಾಗ ಹೊಟ್ಟೆಯಂತೆ ಪ್ರೀತಿಯಿಂದ ಆ ಭಾರ ಹೊತ್ತು ಪ್ರೀತಿ ಸುರಿಸಿದ ಮಾವನವರನ್ನು ಮೊಸರವಲಕ್ಕಿ ಕಲಸಿದಾಗೊಮ್ಮೆ ನೆನಸುತ್ತೇನೆ.



ಮಳೆ ತಡೆಗಟ್ಟಿ ಹಿಡಿದ ಮೋಡಗಳು ಚಲಿಸಿದವು. ಮಳೆ ಸುರಿಯಿತು. ಕಣ್ಣೀರು ಕೋಡಿಯಾಗಿ ಹರಿಯಿತು. ತಾಯಿ ಅಂದರು "ತ್ರಾಸು ಮಾಡಿಕೋಬ್ಯಾಡ. ನಾನು ನಿಮ್ಮತ್ತಿ ಎಲ್ಲಾ ದುಃಖ ಮರತು ಮುಂದ ಹರಿಯೋ ನೀರಿನ ಪ್ರವಾಹದ ಜೋಡಿ ಈಸಿ ಹೊರಟೇವಿ."

ತಾಯಿ ಅತ್ತೆಯರು ಕಣ್ಣೆದುರು ದೃಢವಾಗಿ ನಿಂತರು. ಅವರು ಉರಿಯುತ್ತಿದ್ದಂತೆ ಕರಗುವ ಮೇಣದ ಗೊಂಬೆಯಲ್ಲ. ಕಲ್ಲಿನ ಪ್ರತಿಮೆ. ನೋವುಂಡು ಇನ್ನೂ ಕಲ್ಲಾಗಿದ್ದಾರೆ. ಕೈಯಲ್ಲಿದ್ದ ಮೊಸರವಲಕ್ಕಿ ಕಹಿಯೆನಿಸಿತ್ತು. ಆದರೆ ನಮ್ಮವರು ಆ ದಿನ ಆಡಿದ ಮಾತು ನೆನಪಾಯಿತು. "ಮೊಸರವಲಕ್ಕಿ ತಿನ್ನಬೇಕು. ಅಜ್ಜಾಗ ಪ್ರೀತಿ, ಮೊಸರವಲಕ್ಕಿ ಪ್ರಸಾದ." ನನ್ನ ನೆನಪಿನ ಪುಟದಲ್ಲಿ ಅಚ್ಚಳಿಯದೇ ನಿಂತ ಮೊಸರವಲಕ್ಕಿ ಪ್ರಸಾದ.

## ಲೇಖಕರ ಪರಿಚಯ

**ಸುನಂದಾ ಬೆಳಗಾಂವಕರ [೧೯೩೫–೨೦೧೭]**

ಮೂಲತಃ ಧಾರವಾಡದವರಾದ ಸುನಂದಾ ಬೆಳಗಾಂವಕರರು ಮೂವತ್ತು ವರ್ಷಗಳಷ್ಟು ದೀರ್ಘಕಾಲ ವಿದೇಶದಲ್ಲಿದ್ದರೂ ಕನ್ನಡದ ಕಂಪನ್ನು ಎಲ್ಲೆಡೆ ಹರಡಿದರು. 'ಕಜ್ಜಾಯ' ಇವರ ಪ್ರಸಿದ್ಧ ಪ್ರಬಂಧ ಸಂಕಲನ. ಶಾಲ್ಮಲಿ ಎಂಬ ಕವನ ಸಂಕಲನ, ನಾಸು ಮತ್ತು ಝುವೇರಿ ಎಂಬ ಕಾದಂಬರಿಗಳು ಮತ್ತು ಕೈತುತ್ತು ಎಂಬ ಕಥಾಸಂಕಲನಗಳನ್ನು ಇವರು ಪ್ರಕಟಿಸಿದ್ದಾರೆ. ಕಾರ್ಯಕೈಲಾಸ, ಕಾಕಭುಶುಂಡಿ, ಕೊಡುವುದೇನು ಕೊಂಬುದೇನು, ಮೃದ್ಗಂಧ ಮುಂತಾದವು ಇವರ ಇತರ ಕೃತಿಗಳು.

## ಶಬ್ದಾರ್ಥ ವಿವರಣೆ

ರಂಜಕ–ಒಂದು ಬಗೆಯ ಚಟ್ನಿ; ತೊಯ್ಸಿಕೋ–ನೆನೆ; ಮುಕ್ಕು–ತಿನ್ನು; ರಸಸ್ಮೃತಿ–ರಸಭರಿತ ನೆನಪು; ಕಕ್ಕ–ಚಿಕ್ಕಪ್ಪ; ಉಳ್ಳಾಗಡ್ಡಿ–ಈರುಳ್ಳಿ, ತ್ವರಿತ–ಬೇಗ; ಖಾದ್ಯ–ತಿನಿಸು; ಪರಡಿ–ತಟ್ಟೆ; ತ್ರಾಸು–ಕಷ್ಟ, ದುಃಖ.

## ೧. ಸಂದರ್ಭ ಸಹಿತ ವಿವರಿಸಿ.

೧. ಒಣ ಅವಲಕ್ಕಿ ಕೊಟ್ಟರ ಮೊಸರ ಹಾಕಿಸಿಗೋತೀರಿ.

೨. ಅವರಿಬ್ಬರ ಜೀವನವೂ ಅವಲಕ್ಕಿಯಂತೆಯೇ.

೩. ಅವನ ಕೈ ನೋಡಿದರೆ ಏನೆಲ್ಲ ನೆನಪಾಗ್ತದ.

೪. ಹೇಡಿಗಳು, ಮೆಣಸಿನಕಾಯಿ ತಿನ್ನಲಿಕ್ಕೆ ಆಗೋದಿಲ್ಲ.

೫. ಮೊಸರವಲಕ್ಕಿ ಪ್ರೋಗ್ರಾಮ್ ಮಾಡಸವ್ವಾ.

೬. ಅಳಬ್ಯಾಡವ್ವಾ, ನಾ ಇದ್ದೀನಿ.

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಒಣಅವಲಕ್ಕಿ ಮುಕ್ಕುವುದರಿಂದ ಏನಾಗುತ್ತದೆ ಎಂದು ತಾಯಿ ಹೇಳಿದಳು?

೨. ತಾಯಿಯ ತವರು ಮನೆಗೆ ಹೋದಾಗ ಲೇಖಕಿಗೆ ಯಾರು ಕಲಿಸುತ್ತಿದ್ದ ಮೊಸರವಲಕ್ಕಿ ನೆನಪಾಗುತ್ತಿತ್ತು ?

೩. ಮೊಸರವಲಕ್ಕಿಯ ರುಚಿ ಯಾವುದಕ್ಕೆ ಬರುವುದಿಲ್ಲ ?

೪. ಯಾರ ಕೈಯನ್ನು ನೋಡಿದರೆ ಲೇಖಕಿಯ ತಾಯಿಗೆ ದುಃಖವಾಗುತ್ತಿತ್ತು? ಏಕೆ ?

೫. 'ಅವ್ವ ಸತ್ತರ ಮೊಸರವಲಕ್ಕಿ ಸಿಗ್ತದ' ಎಂದು ಯೋಚಿಸುತ್ತಿದ್ದವರು ಯಾರು?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಲೇಖಕಿ ತನ್ನ ಸೋದರತ್ತೆಯನ್ನು ನೆನಪಿಸಿಕೊಂಡಿರುವ ಬಗೆ ಹೇಗೆ ?

೨. ತಂದೆ ಮಾಡುತ್ತಿದ್ದ ಸ್ಪೆಷಲ್ ಮೊಸರವಲಕ್ಕಿಯ ಬಗ್ಗೆ ಲೇಖಕಿ ಕೊಡುವ ಚಿತ್ರಣವೇನು?

೩. ಲೇಖಕಿಯ ಮೊಸರವಲಕ್ಕಿ ಕಲೆಸುವ ಕಲೆಯ ಬಗ್ಗೆ ಆಕೆಯ ಮಾವನವರಿಗಿದ್ದ ಅಭಿಪ್ರಾಯವೇನು ? ಅದನ್ನು ಅವಳು ಹೇಗೆ ವ್ಯಕ್ತಪಡಿಸುತ್ತಿದ್ದರು ?

೪. ಲೇಖಕಿಯ ಮಾವನವರ ಭೋಜನರಸಿಕತೆಯನ್ನು ವಿವರಿಸಿ.

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಲೇಖಕಿಯ ಜೀವನದ ವಿವಿಧ ಹಂತಗಳಲ್ಲಿ ಮೊಸರವಲಕ್ಕಿಯು ವಹಿಸಿರುವ ಪಾತ್ರವನ್ನು ವಿವರಿಸಿ.

೨. ಲಲಿತಪ್ರಬಂಧವಾಗಿ 'ಮೊಸರು ಅವಲಕ್ಕಿ'ಯ ಸೊಬಗನ್ನು ವಿವರಿಸಿ.

೩. 'ಸುಖದುಃಖೇ ಸಮೇಕೃತ್ವಾ' ಎಂಬ ಗೀತಾ ವಾಕ್ಯವನ್ನು ಮೊಸರು ಅವಲಕ್ಕಿ ನೆನಪಿಸುವುದೇಕೆ? ವಿವರಿಸಿ.

***

# ೧೩. ಬರಹದ ಹಣೆಬರಹ

**ಪಾ.ವೆಂ. ಆಚಾರ್ಯ**

ಬರಹದ ಆರಂಭದೊಂದಿಗೆ ಮಾನವನ ಹಣೆಬರಹವೂ ಬದಲಾಯಿತು. ಬೇರೆ ಬೇರೆ ಭಾಷೆಗಳಲ್ಲಿ **ಬರಹಕ್ಕೆ** ಇರುವ ಪದಗಳ ಪರಿಶೀಲನೆ ಬರಹದ ಆರಂಭದ ಕಾಲದ ರೀತಿಗಳನ್ನು ಕುರಿತು ಚಾಡಿ ಹೇಳುತ್ತದೆ.

ಕನ್ನಡ **ಬರೆ**ಯನ್ನೇ ತೆಗೆದುಕೊಳ್ಳಿ. ಎಲ್ಲ ಲಿಖಿತ ದ್ರಾವಿಡ ಭಾಷೆಯಲ್ಲಿಯೂ ಇದಕ್ಕೆ ಜ್ಞಾತಿ ಪದಗಳಿವೆ. [ತಮಿಳು ವರೈ, ತೆಲುಗು ವ್ರಾ, ತುಳು ಬರೆ]. ಚಿತ್ರ ಮಾಡುವುದಕ್ಕೂ ಅಕ್ಷರ ಲೇಖನಕ್ಕೂ ಈ ಭಾಷೆಗಳಲ್ಲಿ **ಬರೆ** ಧಾತುವನ್ನೇ ಬಳಸಲಾಗುತ್ತದೆ. ಪ್ರಾಣಿಗಳ ಮೈಮೇಲೆ ಕಾಸಿ ಮಾಡಿದ ಗುರುತಿಗೂ ಕೋಲಿನಿಂದ ಹೊಡೆದಾಗ ಏಳುವ ಬಾಸುಂಡೆಗೂ **ಬರೆ** ಎಂದೇ ಹೆಸರು. ಚಿನ್ನವನ್ನು ತಿಕ್ಕಿ ನೋಡುವುದಕ್ಕೆ ಉಪಯೋಗಿಸುವ **ಒರೆ** ಧಾತುವೂ ಬರೆ ಧಾತುವೂ ಮೂಲದಲ್ಲಿ ಒಂದೇ ಇರಬಹುದು. ಕಸಬರಿಗೆ ಎಂಬಲ್ಲಿ **ಬರಿಗೆ** ಎಂಬುದೂ ಬರೆ ಧಾತುವಿನ ಮಗುವೇ. ಹೀಗೆ ಬರೆ ಧಾತುವಿಗೆ ಕಡ್ಡಿಯಂಥ ಪದಾರ್ಥದಿಂದ ಕೆರೆದು ಅಥವಾ ಯಾವುದಾದರೂ ಕುರುಹು ಬಿಡಬಲ್ಲ ಪದಾರ್ಥದಿಂದ ತಿಕ್ಕಿ ಗುರುತು ಮಾಡು ಎಂಬರ್ಥ ಮೂಲದಲ್ಲಿ ಇರಬೇಕು. ಮಾನವನ ಅತಿ ಪ್ರಾಚೀನ ಗುಹಾ ನಿವಾಸಗಳಲ್ಲಿ ನಮಗೆ ದೊರೆಯುವ ಚಿತ್ರಗಳು ಈ ವಿಧಾನದಲ್ಲಿ ನಿರ್ಮಿಸಿದವುಗಳೆಂದು ಮನಗಂಡರೆ ಲೇಖನಕಲೆಯ ಉಗಮ ಹೇಗಾಯಿತೆಂಬುದರಲ್ಲಿ **ಬರೆ** ಧಾತುವಿನ ಅರ್ಥಕ್ಕೆ ಬೆಂಬಲ ಬರುತ್ತದೆ. ಮಾನವನ ಆದಿಮ ಲಿಪಿ ಚಿತ್ರ ಲಿಪಿಯೇ ಆಗಿದ್ದುದರಿಂದ ಚಿತ್ರ ಲೇಖನಕ್ಕೂ, ಅಕ್ಷರ ಲೇಖನಕ್ಕೂ ಒಂದೇ ಧಾತುವಿರುವುದು ಸಹಜವಾಗುತ್ತದೆ.

ಸಂಸ್ಕೃತದ **ಲೇಖನ** ಮತ್ತು ಇಂಗ್ಲೀಷಿನಲ್ಲಿ writing ಪದಗಳನ್ನು ಬೆದಕಿದರೆ ಇದಕ್ಕಿಂತಲೂ ಸ್ಪಷ್ಟವಾದ ಸಂಕೇತ ಸಿಗುತ್ತದೆ. **ಲಿಖ್** ಧಾತುವಿನ ಮೂಲರೂಪ **ರಿಖ್** ಆಗಿತ್ತು. ಅಥರ್ವ ವೇದಾದಿ ಬಹು ಪ್ರಾಚೀನ ಭಾರೋಪ್ಯ ದಾಖಲೆಗಳಲಿ **ರಿಖ್–**

**ಲಿಖ್** ಧಾತುವಿಗೆ ಕೆರೆ ಕೆರಸು ಕುಕ್ಕು ಮೊದಲಾದ ಅರ್ಥಗಳೇ ಇವೆ. ಸಂಸ್ಕೃತಕ್ಕೆ ಬಹಳ ಹತ್ತಿರವಾದ ಯುರೋಪಿನ ಲಿಥುವೇನಿಯನ್ ಭಾಷೆಯಲ್ಲ **ರೇಕ್ತಿ** ಎಂದರೆ **ಕೊರೆ**ಯುವುದು, ಕೆತ್ತುವುದು ಎಂದೇ ಅರ್ಥ. ಇಂಗ್ಲೀಷಿನ writeನ ಹಳೇ ಇಂಗ್ಲಿಷ್ writan ಮತ್ತು ಹಳೇ ನಾರ್ಸ್ ಭಾಷೆಯ rita ಇವೆರಡೂ **ಕೆರೆ** ಎಂಬರ್ಥವನ್ನೇ ಕೊಡುತ್ತವೆ. ಸಂಸ್ಕೃತದ ಲಿಖಿತಕ್ಕೆ ಅಥರ್ವ ವೇದದಲ್ಲಿ ಕೆರೆದು ಕಲೆಯುಂಟು ಮಾಡಿದ ಗುರುತು ಎಂಬರ್ಥವೇ ಇದ್ದು ಅದಕ್ಕೆ ಲೇಖನ ಎಂಬರ್ಥ ಬಂದದ್ದು ತಡವಾಗಿ, ಯಾಜ್ಞವಲ್ಕ್ಯ ಸ್ಮೃತಿ, ಶಾಂಖಾಯನ ಶ್ರೌತ ಸೂತ್ರಕಾಲದಲ್ಲಿ, ಲೇಖನವೆಂದರೆ ಮೂಲತಃ **ಕೆರೆದು ಮಾಡಿದ ಕಾಯಂಗುರುತು** ಎಂದೇ. ಇದು ಕಂಟವದಿಂದ ತಾಳೆ ಓಲೆಯ ಮೇಲೆ ಕೆರೆದು ಬರೆಯುವ ಕಾಲದ ಲೇಖನಕ್ಕೂ ಸರಿಯಾಗಿ ಹೊಂದಿಕೊಂಡಿತು. ಮುಂದೆ ಬಣ್ಣ ಬಳಿದು ಮಾಡಿದ ಚಿತ್ರಗಳಿಗೂ ಅಕ್ಷರಗಳಿಗೂ **ಲಿಖ್** ಧಾತುವಿನಿಂದ ಬಂದ ಪದಗಳನ್ನೇ ವಿಸ್ತರಿಸಲಾಯಿತು ಹೀಗೆ ನಮಗೆ ಚಿತ್ರಲೇಖೆಯರು ಪ್ರಾಚೀನ ಪುರಾಣ ಕಾವ್ಯ ಸಾಹಿತ್ಯದಲ್ಲಿ ಸಿಗುತ್ತಾರೆ. ಮೂಲ **ರಿಖ್** ಧಾತುವಿನಿಂದ ಬಂದ ರೇಖೆ ಗೆರೆ ಎಂಬರ್ಥದಲ್ಲಿ ಉಳಿದುಕೊಂಡಿದೆ. ಈ ಪ್ರಕಾರ ಕೆರೆದು ಮಾಡಿದ ಗುರುತು ಅಕ್ಷರವಾಯಿತು. **ಅಕ್ಷರ** ಎಂದರೆ **ಅಳಿವು ಇಲ್ಲದ್ದು** ಎಂದು ಒಂದು ಅರ್ಥ.

ಆದರೆ **ಲಿಪಿ** [ಬರಹ] ಎಂಬುದು ಬೇರೆಯೇ ಕಥೆ ಹೇಳುತ್ತದೆ. **ಲಿಪ್** ಎಂದರೆ [ಎಣ್ಣೆ, ಬಣ್ಣ] **ಬಳಿ**. ಈ ಶಬ್ದ ಬಳಕೆಗೆ ಬಂದಾಗಲೇ ಕಲ್ಲಲ್ಲೋ ಇಟ್ಟಿಗೆಯಲ್ಲೋ ಕೆರೆದು ಇಡುವ ಲೇಖನ ಪದ್ಧತಿಯ ಬದಲು ಬಣ್ಣಗಳಿಂದ ಅಥವಾ ಮಸಿಯಿಂದ ಚರ್ಮ, ಭೂರ್ಜಪತ್ರ ಇತ್ಯಾದಿಗಳ ಮೇಲೆ ಚೀನದಲ್ಲಿಯ ಹಾಗೆ ಕುಂಚದಿಂದಲೋ ಗರಿಯಿಂದಲೋ ದಾಖಲೆಗಳನ್ನು ಬರೆದಿಡುವುದು ಪ್ರಾರಂಭವಾಗಿರಬೇಕು. ಅದು ಲೇಪಿಸುವುದಾದ್ದರಿಂದ **ಲಿಪಿಯಾಯಿತು.**

ಪಾಣಿನೀಯ ಸೂತ್ರದಲ್ಲಿ ಲಿಖಿತ ಎಂಬರ್ಥದಲ್ಲಿ **ಲಿಪಿ, ಲಿಬಿ** ಬರುವುದರಿಂದ ಸಂಸ್ಕೃತದಲ್ಲಿ ಅದು ಕನಿಷ್ಠ ೨೪೦೦ ವರ್ಷ ಹಳೆಯ ಶಬ್ದ. ಆದರೆ ಅಶೋಕನ ಶಾಸನಗಳಲ್ಲಿ **ಲಿಪಿ**ಯೊಡನೆ **ದಿಪಿ** ಎಂಬ ರೂಪ ಕೂಡ ಕಾಣಿಸುತ್ತದೆಂದೂ **ದಿಪಿ**ಯದೇ ಒಂದು ರೂಪ **ಲಿಪಿ**ಯಾಗಿದ್ದು ಅದು ಹಳೇ ಪಾರಸೀಕ ಭಾಷೆಯ ದಾನವೆಂದೂ ಸುನೀತಿ ಕುಮಾರ ಚಟರ್ಜಿ ಹೇಳುತ್ತಾರೆ. ಕಾಶ್ಮೀರಿ ಸಂಸ್ಕೃತ ಕವಿಗಳು **ದಿವಿರ** ಎಂಬ ಪದವನ್ನು **ಸರಕಾರಿ ಲೇಖಾಧಿಕಾರಿ, ಕರಣಿಕ** ಎಂಬರ್ಥದಲ್ಲಿ ಕ್ರಿ.ಶ. ೧೦ನೇ ಶತಮಾನದಲ್ಲಿ ಬಳಸಿದ್ದಾರೆ. ಇದು ಹಳೇ ಪಾರಸೀಕ ಭಾಷೆಯ **ದಿಪಿವರ** [ಹೊಸ ಪಾರಸೀಕ ಭಾಷೆಯ **ದಬೀರ್**] ಪದದ ಸಂಸ್ಕೃತೀಕರಣ ಹೊರತು ಬೇರೆ ಅಲ್ಲ. ಹಳೇ ಪಾರಸೀಕ ಭಾಷೆಯುಲ್ಲಿ **ನಿಪಿಸ್ತ** [ಲಿಖಿತ] ಪದವಿದೆ. ನಮ್ಮ ಲಿಪಿಗೆ ಈ **ನಿಪಿಸ್ತ** ಮೂಲವಾಗಿರಲೂಬಹುದು.



ಬರೆಯುವ ಕಲೆಗೆ ಸಂಬಂಧಿಸಿದ ಅನೇಕ ಶಬ್ದಗಳ ಮೂಲಶೋಧನೆ ಋಷಿ ಮೂಲದ ಅನ್ವೇಷಣೆಯಿಂದ ಸ್ವಲ್ಪ ಸಂಕೋಚಕಾರಿಯಾಗಿದೆ. **ಪುಸ್ತಕ**ವನ್ನೇ ತೆಗೆದುಕೊಳ್ಳಿ, ನಮ್ಮ ಸರಸ್ವತಿದೇವಿ ವೀಣಾ **ಪುಸ್ತಕ**ಪಾಣಿಯಾಗಿದ್ದಾಳೆ. ಅಂದ ಮೇಲೆ **ಪುಸ್ತಕ** ಶುದ್ಧ ಭಾರತೀಯ ಪದವಾಗಿರಬೇಕು. ಆದರೆ ಹಾಗಿಲ್ಲ. **ಪುಸ್ತಕ** ಶಬ್ದಕ್ಕೆ ನಿಜವಾದ ಪುರಾತನ ಪ್ರಯೋಗದ ಉದಾಹರಣೆ ಭಾರತೀಯ ಸಾಹಿತ್ಯದಲ್ಲಿ ಇಲ್ಲ. ಪಾಣಿನೀಯ ವ್ಯಾಕರಣದಲ್ಲಿ ಅದು ಸಿಕ್ಕುವುದಿಲ್ಲ. ಅಲ್ಲಿ **ಪುಸ್ತ, ಬುಸ್ತ** ಎಂಬ ಧಾತುಗಳಿವೆ. ಆದರೆ ಅವು ಪುಸ್ತಕಕ್ಕೆ ಸಂಬಂಧಿಸಿದವನಲ್ಲ. ಹರಿವಂಶ ಪುರಾಣದಲ್ಲಿ ಅದು ಕಾಣಿಸುತ್ತದೆಂದು ಮೋನಿಯರ್ ವಿಲಿಯಮ್ಸ್ ಕೋಶ ಹೇಳುತ್ತದೆ. ಆದರೆ ಈ ಪುರಾಣ ಅಷ್ಟು ಪ್ರಾಚೀನವೆಂದು ಗೃಹೀತವಾಗಿಲ್ಲ. ವರಾಹಮಿಹಿರ ಪುಸ್ತಕವನ್ನು ಉಲ್ಲೇಖಿಸುವುದರಿಂದ ಅದು ಕ್ರಿ.ಶ. ಐದನೇ ಶತಮಾನದಲ್ಲಿ ಇಲ್ಲಿ ಪ್ರಚಾರದಲ್ಲಿತ್ತೆಂಬುದು ಖಂಡಿತ, ಆದರೆ ಅಮರಕೋಶದಲ್ಲಿ ಅದು ಕಾಣದು. ಅನಂತರ ಬಾಣಭಟ್ಟನ ಹರ್ಷಚರಿತ ಮತ್ತು ಆ ಮೇಲಿನ ಕಾವ್ಯಗಳಲ್ಲಿ ಈ ಪದ ಗೋಚರಕ್ಕೆ ಬಂದಿದೆ.

ವಾಸ್ತವಿಕವಾಗಿ **ಪುಸ್ತಕ** ಪದ ನಮಗೆ ಬಂದದ್ದು ಪ್ರಾಚೀನ ಪಾರಸೀಕ ಭಾಷೆಯಿಂದ. ಆ ಭಾಷೆ ತುರ್ಕಿ ಭಾಷೆಯಿಂದ  ಅದನ್ನು ತೆಗೆದುಕೊಂಡಿತೆಂದು ಡಾ. ಸುನೀತಿಕುಮಾರ ಚಟರ್ಜಿ ಹೇಳುತ್ತಾರೆ. ಇರಾಣ ಮತ್ತು ಇತರ **'ಮ್ಲೇಚ್ಛ'** ದೇಶಗಳಲ್ಲಿ ಶಾಶ್ವತ ದಾಖಲೆಗಳನ್ನು ಬರೆದಿಡುವುದಕ್ಕೆ ಉಪಯೋಗಿಸುತ್ತಿದ್ದ ಹದಮಾಡಿದ ಕುರಿಚರ್ಮಕ್ಕೆ **ಪೋಸ್ತ್** ಎಂಬ ಹೆಸರಿತ್ತು. [ಇಂಗ್ಲೀಷಿನಲ್ಲಿ ಇದು **ಪಾರ್ಚ್‌ಮೆಂಟ್**]. ಸುರಳಿ ಸುತ್ತಿ ಕಾಪಾಡುತ್ತಿದ್ದ ಇಂಥ ಚರ್ಮಮಯ ದಾಖಲೆಗಳನ್ನು ಭಾರತೀಯರು ಇಡುತ್ತಿದ್ದರೋ ಇಲ್ಲವೋ ತಿಳಿಯದು. ಹೇಗಿದ್ದರೂ **ಪೋಸ್ತ** ಪ್ರಾಕೃತ ಭಾಷೆಯನ್ನು ಹೊಕ್ಕು ಗುಜರಾಥಿ, ಹಿಂದೀ ಮೊದಲಾದ ಅಪಭ್ರಂಶ ಭಾಷೆಗಳಲ್ಲಿ **ಪೋಥಾ, ಪೋಥೀ** ಮೊದಲಾದ ರೂಪಗಳನ್ನು ಪಡೆಯಿತು. ಪ್ರಾಕೃತದಿಂದ ಕನ್ನಡಕ್ಕೂ ಬಂದು **ಪೊತ್ತಗೆ, ಹೊತ್ತಗೆ** ಆಯಿತು. **ಪೋಥೀ** ಎಂಬುದು ಲೆಕ್ಕ ಪುಸ್ತಕಕ್ಕೂ ಅನ್ವಯವಾಯಿತು.

ಕ್ರಿ.ಶ. ಆರನೇ ಶತಮಾನಕ್ಕೂ ಹಿಂದಿನ ಅಮರಕೋಶದಲ್ಲಿ **ಪುಸ್ತ** ಎಂಬ ಶಬ್ದವೊಂದು ಸಿಕ್ಕುತ್ತದೆ. ಅದರ ಅರ್ಥ **ಚರ್ಮ,** ಮಣ್ಣು ಮೊದಲಾದ ಪದಾರ್ಥಗಳಿಂದ ಲೆಪ್ಪದ ಬೊಂಬೆಗಳ ನಿರ್ಮಾಣ ಮಾಡುವ ಕಲೆ ಎಂದು. **ಪುಸ್ತಕ್ಕೂ,** ಚರ್ಮಕ್ಕೂ ಇರುವ ಸಂಬಂಧಕ್ಕೂ ಇದು ಇನ್ನೊಂದು ಅಪ್ರತ್ಯಕ್ಷ ಪ್ರಮಾಣ ಎನ್ನಬಹುದು. ಈ **ಪುಸ್ತವೇ** ಬೊಂಬೆಗೆ **ಪುತ್ತಳಿ**ಯೆಂಬ ಹೆಸರು ಬರಲು ಕಾರಣವಾಗಿರಬಹುದು.

**ಕಾಗದ** ಬರುವ ಮುಂಚೆ ಭಾರತದಲ್ಲಿ ಬರವಣಿಗೆಯ ತಲಗಳೆಂದರೆ ಮುಖ್ಯವಾಗಿ **ತಾಳಪತ್ರ** ಮತ್ತು ಭೂರ್ಜ [**ಭೋಜ**] ಪತ್ರ. ಪತ್ರ ಅಂದರೆ ಎಲೆ. **ತಾಳಪತ್ರ**ದ ವಿಷಯದಲ್ಲಿ

ಇದು ಸರಿ. ಅದು **ತಾಳೀ** ಮರದ ಎಲೆ ಅಥವಾ ಗರಿ. ಹಿಮಾಲಯದ ಪ್ರಾಂತದಲ್ಲಿ ಬೆಳೆಯುವ **ಭೂರ್ಜವೃಕ್ಷ**ದಿಂದ ಬರುವ 'ಪತ್ರ' ಮಾತ್ರ ಎಲೆಯಲ್ಲ. ಅದು ಆ ಮರದ ಕಾಂಡದಿಂದ ಸುಲಿದು ತೆಗೆಯುವ ತೆಳ್ಳನ್ನ **ತೊಗಟೆ**. ಉತ್ತರ ದೇಶದಲ್ಲಿ ಭೂರ್ಜಪತ್ರದ ಮೇಲೆ ಲೇಖನಿಯಿಂದ ಬರೆಯುವ ವಾಡಿಕೆ ಬೆಳೆದು ಬಂದರೆ, ಪೂರ್ವದಕ್ಷಿಣಗಳಲ್ಲಿ ಧಾರಾಳವಾದ **ತಾಳಪತ್ರ**ದ ಮೇಲೆ **ಕಂಟವ**ದಿಂದ ಬರೆಯುವುದು ಕ್ರಮವಾಯಿತು. ಭಾರತದ ಭೂರ್ಜಪತ್ರದಂತೆ ಪ್ರಾಚೀನ ಇಜಿಪ್ತಿನಲ್ಲಿ **ಪೆಪಿರಸ್** ಗಿಡದ ತೆಳ್ಳನ್ನ ತೊಗಟೆಯ ಮೇಲೆ ದಾಖಲೆಗಳನ್ನು ಬರೆಯುತ್ತಿದ್ದರು. ಗ್ರೀಕ್ ಭಾಷೆಗೆ ಬಂದ **ಪೆಪಿರಸ್** ಲ್ಯಾಟಿನ್ ಮೂಲಕ ಫ್ರೆಂಚ್ ದಾರಿಯಾಗಿ ಇಂಗ್ಲೀಷಿಗೆ ಪ್ರವೇಶಿಸಿದಾಗ ಅದು **ಪೇಪರ್** ಆಯಿತು. ಪೆಪಿರಸ್ ತೊಗಟೆ ಇಂದು ಎಲ್ಲಿಯೂ ಲೇಖನ ತಲವಾಗಿ ಉಳಿದಿಲ್ಲ. ಚೀನಿಯರಿಂದ ಆವಿಷ್ಕಾರವಾದ **ಕಾಗದ** ಸರ್ವತ್ರ ಬಳಕೆಗೆ ಬಂದಿದೆ. ಆದರೆ **ಪೇಪರ್** ಎಂಬ ಆ ಹಳೇ ಲೇಖನ ಸಾಮಗ್ರಿಯ ಹೆಸರೇ ಈ ಕಾಗದಕ್ಕೂ ಬಳಸಲ್ಪಟ್ಟು ಮುಂದುವರಿದಿದೆ. ಈ **ಪೇಪರ್** ಈಗ ಸಮಾಚಾರ ಪತ್ರದಿಂದಾರಂಭಿಸಿ ಪಂಡಿತರ ಗಹನ ಪ್ರಬಂಧಗಳವರೆಗೆ ನಾನಾ ಲಿಖಿತಗಳಿಗೆ ಅನ್ವಯವಾಗಿ ಅರ್ಥವನ್ನು ವಿಸ್ತರಿಸಿಕೊಂಡಿದೆ.

ಇಂದು ಹಳ್ಳಿಗನಿಗೂ ಪರಿಚಿತವಾಗಿರುವ ಇಂಗ್ಲೀಷ್ **ಬೂಕು** [book] ಭೂರ್ಜದಂಥದೇ ಯುರೋಪಿನ ಬೀಚ್‌ಮರದಿಂದ ಬಂದದ್ದಂತೆ. ಹಳೇ ಇಂಗ್ಲೀಷಿನ **ಬೋಚ್,** ಜರ್ಮನ್ **ಬುಕ್,** ಇತರ ಉತ್ತರ ಯುರೋಪಿಯನ್ ಭಾಷೆಗಳ **ಬೋಶ್, ಬೋಗ್, ಬೋಕ್, ಬುಶ್** ಇತ್ಯಾದಿ ನಾಮಾಂಕಿತವಾದ ಮರದ ತೊಗಟೆ ಅಥವಾ ತೆಳ್ಳನ್ನ ಹಲಗೆಯ ಮೇಲೆ ದಾಖಲೆ ಬರೆದಿಡುತ್ತಿದ್ದುದರಿಂದ ಅದರ ಹೆಸರೇ ಪುಸ್ತಕಕ್ಕೆ ಬಿತ್ತೆಂದು ಭಾವಿಸಲಾಗಿದೆ.

**ಕಾಗದ** ಮತ್ತು **ಕಲಮ** [ಲೇಖನಿ] ಇವೆರಡೂ ಸಂಸ್ಕೃತದಲ್ಲಿ ಒಂಬತ್ತನೇ ಶತಮಾನದಿಂದ ಈಚೆಗೆ ತೋರಿ ಬಂದ ಪದಗಳು. ಈಗ ಹೆಚ್ಚು ಕಡಿಮೆ ಎಲ್ಲ ಭಾರತೀಯ ಭಾಷೆಗಳಲ್ಲಿ ಕಾಗದ ಇದೆ. ಬಟ್ಟೇ ಚಿಂದಿ ಮೊದಲಾದವುಗಳಿಂದ ಕಾಗದ ತಯಾರಿಸುವುದನ್ನು ಕ್ರಿಸ್ತ ಶಕಾರಂಭದ ಹೊತ್ತಿಗೆ ಚೀನಿಯರು ಕಂಡುಹಿಡಿದಿದ್ದರೂ ಆ ಕಲೆ, ಕ್ರಿ.ಶ. ಎಂಟನೇ ಶತಮಾನದಲ್ಲಿ ಅರಬರಿಗೂ, ಚೀನಿಯರಿಗೂ ಸಮರ್‌ಕಂದ್ ಬಳಿ ನಡೆದ ಸಮರದ ತರುವಾಯ ಅರಬರಿಗೆ ತಿಳಿದು ಇರಾಣಕ್ಕೆ ಹಬ್ಬಿತು. ಇರಾಣದಲ್ಲಿ ಚಿಂದಿ ಮತ್ತು ಒಂದು ಜಾತಿಯ ಅಗಸೆಯ ದೇಟಿನಿಂದ ಧಾರಾಳವಾಗಿ ಕಾಗದ ತಯಾರಾಗತೊಡಗಿತು. ಮೊದಲು ತುರ್ಕರ ಮೂಲಕ ಚೀನದಿಂದ ಬರುತ್ತಿದ್ದ ಈ ಪದಾರ್ಥಕ್ಕೆ ಇದ್ದ **ಕಾಗಜ್** ಎಂಬ ತುರ್ಕಿ ಶಬ್ದವೇ ಪಾರಸೀಕ ಭಾಷೆಗೂ ದಾಟಿ ಭಾರತದಲ್ಲಿ ಅದು **ಕಾಗದ**ವಾಯಿತು. ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ **ಕಾಗಜ,**



**ಕಾಗದ, ಕೌಗತ, ಕಾಕಾಜಿ** ಇತ್ಯಾದಿ ರೂಪಗಳಲ್ಲಿ ಅದು ಇದೆ. ನೇಪಾಳಿ ಭಾಷೆಯಲ್ಲಿ **ಕಾಯಗತ** ಎಂಬ ಒಂದು ಹಸ್ತಲಿಖಿತ ಪುಸ್ತಕವೇ ಇದ್ದು ಅದು **ಕಾಗದದ್ದೇ** ಅವತಾರವೆಂದು ಸುನೀತಿ ಚಟರ್ಜಿ ಹೇಳುತ್ತಾರೆ.

**ಕಲಮ** ಕನ್ನಡದಲ್ಲಿ ಅಷ್ಟಾಗಿ ಬೇರು ಇಳಿಸದಿದ್ದರೂ **ಕಲಮದಾನಿ** ಇತ್ಯಾದಿ ಕುಲನಾಮಗಳಲ್ಲಿ ಅದು ಉಳಿದುಕೊಂಡಿದೆ. ಸಂಸ್ಕೃತದಲ್ಲಿ ಕಾಶ್ಮೀರಿ ಕವಿಗಳು ಅದನ್ನು ಧಾರಾಳವಾಗಿ ಬಳಸಿದ್ದಾರೆ. **ಕಲಮ** ಎಂದರೆ ಲೇಖನಿ. ಉರ್ದುಕೋಶಗಳು ಅದು ಅರಬ್ಬಿ ಪದವೆಂದು ಹೇಳುತ್ತವೆ. ಇಂಗ್ಲೀಷಿನಲ್ಲಿ colamos ಇದೆ; ಅದು ಗ್ರೀಕ್ **ಕಲಮೊಸ್**‌ನಿಂದ ಲ್ಯಾಟಿನ್ ಮೂಲಕ ಆ ಭಾಷೆಗೆ ಬಂದದ್ದು. **ಕಲಮೊಸ್** ಎಂದರೆ ಕತ್ತರಿಸಿ ಲೇಖನಿಗಾಗಿ ಉಪಯೋಗಿಸುತ್ತಿದ್ದ ಒಂದು ಬಗೆಯ **ಗಲಗು** ಅಥವಾ **ಗಲಕು** ಎಂಬ ದಪ್ಪನೆಯ ಹುಲ್ಲು. ಈ **ಗಲಗು** ಕೂಡ ಕನ್ನಡ ಪದವಿದ್ದಂತೆ ಕಾಣೆ. ತೆಲುಗಿನಲ್ಲಿ **ಕಲಗು** ಎಂಬ ರೂಪದಲ್ಲಿದೆ. ಏನಿದ್ದರೂ ಕಲಮ ನಮಗೆ ಬಂದದ್ದು ಪಾರಸೀಕ ಭಾಷೆಯ ಮೂಲಕ ಅರಬ್ಬಿಯಿಂದ. ಹೀಗೆ ವಾಕ್–ಅರ್ಥಗಳ ಸಮುದ್ರದಲ್ಲಿ ಮುಳುಗಿದಷ್ಟೂ ಇಂತಹ ಹಲವಾರು ಮುತ್ತು ಹವಳಗಳು ಸಿಗುತ್ತಲೇ ಇರುತ್ತವೆ.

## ಲೇಖಕರ ಪರಿಚಯ

**ಪಾ.ವೆಂ. ಆಚಾರ್ಯ** [೧೯೧೫–೧೯೯೨]

ಪಾವೆಂ ಎಂದೇ ಪ್ರಸಿದ್ಧರಾಗಿದ್ದ ಪಾಡಿಗಾರು ವೆಂಕಟರಮಣ ಆಚಾರ್ಯರು ಕನ್ನಡನಾಡಿನ ಪ್ರಸಿದ್ಧ ಪತ್ರಕರ್ತರಲ್ಲಿ ಒಬ್ಬರು. 'ಕಸ್ತೂರಿ' ಎಂಬ ಮಾಸಪತ್ರಿಕೆಯನ್ನು ಅವರು ಕಟ್ಟಿ ಬೆಳೆಸಿದ ರೀತಿ ಅನನ್ಯ. ಲಾಂಗೂಲಾಚಾರ್ಯ, ಪಿ.ವಿ. ಆಚಾರ್ಯ, ರಾಧಾಕೃಷ್ಣರಾವ್ ಮುಂತಾದ ಹಲವು ಹೆಸರುಗಳಲ್ಲಿ ನೂರಾರು ಲೇಖನಗಳನ್ನು ಬರೆದ ಖ್ಯಾತಿ ಅವರದು. ಬಯ್ಯಮಲ್ಲಿಗೆ, ರಶಿಯಾದ ರಾಜ್ಯಕ್ರಾಂತಿ, ಸುಭಾಷಿತ ಚಮತ್ಕಾರ, ವರನೀರದ, ಹೌಸಿಂಗ್ ಕಾಲನಿ ಮುಂತಾದವು ಪಾವೆಂರ ಕೃತಿಗಳು. ಶಬ್ದ ಮತ್ತು ಅರ್ಥಗಳಿಗೆ ಸಂಬಂಧಿಸಿದಂತೆ ಅವರು ರಚಿಸಿದ 'ಪದಾರ್ಥ ಚಿಂತಾಮಣಿ' ಒಂದು ಅಪರೂಪದ ಗ್ರಂಥ.

## ಶಬ್ದಾರ್ಥ ವಿವರಣೆ

ಜ್ಞಾತಿ–ಸೋದರ ಸಂಬಂಧಿ; ಕುರುಹು–ಗುರುತು; ನಿವಾಸ–ಮನೆ; ಆದಿಮ–ಮೊದಲ; ಬೆದಕು–ಕೆದಕು; ಕಂಡವ–ತಾಳೆಗರಿಯ ಮೇಲೆ ಬರೆಯಲು ಬಳಸುವ ಕಬ್ಬಿಣದ ಚೂಪಾದ ಲೇಖನಿಯಂತಹ ವಸ್ತು; ಗೃಹೀತ–ಒಪ್ಪಿತ, ಪರಿಗಣಿತ; ಗೋಚರ–ಕಾಣು; ದೇಟು–ಕಾಂಡ.

## ೧. ಸಂದರ್ಭ ಸಹಿತ ವಿವರಿಸಿ.

೧. ಬರಿಗೆ ಎಂಬುದೂ ಬರೆ ಧಾತುವಿನ ಮಗುವೇ

೨. ಲೇಖನವೆಂದರೆ ಮೂಲತಃ ಕೆರೆದು ಮಾಡಿದ ಕಾಯಂ ಗುರುತು ಎಂದೇ

೩. ಚೀನೀಯರಿಂದ ಆವಿಷ್ಕಾರವಾದ **ಕಾಗದ** ಸರ್ವತ್ರ ಬಳಕೆಗೆ ಬಂದಿದೆ.

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಯಾವುದರ ಆರಂಭದೊಂದಿಗೆ ಮಾನವನ ಹಣೆಬರಹ ಬದಲಾಯಿತು?

೨. ಮಾನವನ ಆದಿಮ ಲಿಪಿ ಯಾವುದಾಗಿತ್ತು ?

೩. ಲಿಖಿತ ಎಂಬ ಶಬ್ದಕ್ಕೆ ಅರ್ಥವ ವೇದದಲ್ಲಿ ಯಾವ ಅರ್ಥವಿದೆ ?

೪. 'ಅಕ್ಷರ' ಎಂಬ ಶಬ್ದದ ಅರ್ಥವೇನು ?

೫. 'ಪುಸ್ತಕ' ಎಂಬ ಪದ ನಮಗೆ ಯಾವ ಭಾಷೆಯಿಂದ ಬಂದಿದೆ ?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. 'ಬರೆ' ಎಂಬ ಶಬ್ದದ ಬಗ್ಗೆ ಲೇಖಕರು ಆಡಿರುವ ವಿವರಣೆಯೇನು ?

೨. 'ಲಿಪಿ' ಎಂಬ ಪದದ ಪೂರ್ವಾಪರಗಳನ್ನು ವಿವರಿಸಿ.

೩. 'ಪುಸ್ತಕ' ಎಂಬ ಶಬ್ದದ ಮೂಲ–ಚೂಲಗಳನ್ನು ವಿವರಿಸಿ.

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಬರವಣಿಗೆ, ಲೇಖನ, ಲಿಪಿ ಮುಂತಾದ ಶಬ್ದಗಳ ಮೂಲದ ಬಗ್ಗೆ ಲೇಖಕರ ಅಭಿಪ್ರಾಯವೇನು ?

೨. ಪೇಪರ್, ಬುಕ್, ಕಲಮ್ ಮೊದಲಾದ ಶಬ್ದಗಳ ಮೂಲವನ್ನು ವಿವರಿಸಿ.

***

# ೧೪. ಶಕುಂತಲೆಯೊಂದಿಗೆ ಕಳೆದ ಅಪರಾಹ್ನ

**ವೈದೇಹಿ**

ಶಕುಂತಲೆ ಹೇಳುತ್ತ ಹೋದಳು. ಹೇಮಕೂಟದ ಮಣ್ಣು ಜಗಲಿಯ ಮೇಲೆ ಕುಳಿತು.

...ಹೇಳು ಎನ್ನುತ್ತಿ, ಏನು ಹೇಳಲಿ? ಎಲ್ಲ ಹೇಳಬೇಕು. ಎಲ್ಲಿಂದ ಆರಂಭಿಸಲಿ, ಹೇಗೆ?

ಹ್ಞಾ... ಕಣ್ವರಿರಲಿಲ್ಲ ಅಂದು, ದುಷ್ಯಂತ ಬಂದ. ವಸಂತ ವೈಭವವೇ ಬಂದಂತೆ. ಆತ ಯಾರು? ತಿಳಿದಿರಲಿಲ್ಲ ನನಗೆ. ಆದರೆ ಅವನನ್ನು ನೋಡಿದ್ದೇ ಬಹುಕಾಲದಿಂದ ಬಲ್ಲೆ ಅನಿಸಿತು. ಇದನ್ನೇ ಪ್ರಥಮ ಭ್ರಮೆ ಎನ್ನಲೇ? ನಾನದರಲ್ಲಿ ತೇಲಿ ಹೋಗಿಬಿಟ್ಟೆ. ಅವನಿಗಾಗಿಯೇ ಹುಟ್ಟಿ ಬಂದವಳೇನೋ ಎಂಬಂತೆ.

"ಏಯ್ ಕನಸು ಬೇಡ. ಕನಸಿನೆದುರು ಇರುವುದು ಯಾವಾಗಲೂ ಯಜ್ಞಕುಂಡ" ಎಂದದ್ದು ಯಾರದು, ಎಲ್ಲಿಂದ? ಚಿತ್ತದ ಉದ್ದಗಲಕ್ಕೂ ಸುಳಿದು ಬಂದೆ. ಯಾರೂ ಕಾಣಿಸಲಿಲ್ಲ, ದನಿ ಕೇಳಿಸುತ್ತಿತ್ತು. ಕ್ಷೀಣವಾಯಿತು, ಮಾಯವಾಯಿತು, ನಾ ಚಿತ್ರಕ್ಕಾಗಿ ಕಾದು ನಿಂತ ನಕಾಶೆಯಂತಾದೆ. ನಕಾಶೆಯಲ್ಲಿ ಆಗಲೇ ಬಣ್ಣ ತುಂಬಿಕೊಳ್ಳುತ್ತಿತ್ತು. ಈತ ಯಾರು? ನಾನು ಈತನಿಗೇಕೆ ಪ್ರವೇಶ ಕೊಟ್ಟೆ? ಬಣ್ಣಗಳು ಒಂದನ್ನೊಂದು ಬೆರೆತು ಹೊಸ ಹೊಸದಾಗಿ ಬೆಳೆಯುತ್ತ ಗಾಢವಾಗುತ್ತ ಹೋದವು. ಅರ್ಥದ ಅವಶ್ಯಕತೆಯನ್ನೇ ಕಾಣದೆ. ಆತ ಬರೆದ. ಬರೆಯುತ್ತ ನನ್ನ ಮುಖ ನೋಡಿದ. ಕಣ್ಣು ಮುಚ್ಚಿ ದೂರ ನಿಂತ. ಕಣ್ತೆರೆದ. ಕದ್ದೊಯ್ಯುವ ನಗೆಯೊಂದಿಗೆ ಸನಿಹ ಬಂದ. ನಾನು ಪೂರ್ತಿ ಕೊಟ್ಟುಕೊಂಡು ಬಿಟ್ಟಿದ್ದೆ. ಒಬ್ಬ ಮಹಾ ಚಿತ್ರಕಾರನಿಗೆ ಎಂದುಕೊಳ್ಳುತ್ತ ನಲಿವೇ ಆಗಿಬಿಟ್ಟಿದ್ದೆ. ಕನಸಲ್ಲ, ಅನುಭವಿಸುತ್ತಿದ್ದೆ.

ಭ್ರಮರ ಸುತ್ತಿದ ಕ್ಷಣ. ಈಗಲೂ ನೆನಪಾಗುತ್ತಿದೆ. ಏಕಾದರೂ ಬಂತು ಅದು ಅಂದೇ? ನನ್ನ ಸುತ್ತ ಭ್ರಮೆಯ ಬಲೆ ನೇಯಲೆಂದೇ? ಜನ ಏನೇನೋ ಅರ್ಥೈಸಿ ಚಪ್ಪರಿಸಿದರು. ಆದರೆ ಭ್ರಮರದ ಸುತ್ತ ನಾ ತಿರುಗಿದನೇ, ನನ್ನ ಸುತ್ತ ಭ್ರಮರವೇ? ಅಂತೂ ಬಲೆಯೊಳಗೆ ಸ್ವಯದಿಂದಲೆ ಸಿಕ್ಕಿ ಬಿದ್ದಿದ್ದೆ. ಇದು ವಾಸ್ತವ.

ಆತ ನನಗೆ ಬೇಕಾಗಿದ್ದ ಯಾಕೆ? ಪ್ರೀತಿಸಬೇಕು ಎಂದಲ್ಲ. ಪಂಡಿತನೆಂದಲ್ಲ, ಪುರುಕುಲೋತ್ತಮನೆಂದಲ್ಲ. ಅವನಿಗಾಗಿಯಲ್ಲ, ನನಗಾಗಿಯೆ. ಆಶ್ರಮದ ಗಿಡದಲ್ಲಿ ಹೂ ಬಿಟ್ಟಂತೆ, ಋತುಮಾನದಲ್ಲಿ ಕರೆವ ಹಕ್ಕಿಗಳಂತೆ, ಹರಿಣದ ಚುರುಕುತನ ಚೊಂಗನೆ ನೆಗೆದಂತೆ. ಸ್ನಿಗ್ಧ ಸಹಜವಾಗಿ, ಮಧುರ ಗಂಭೀರವಾಗಿ. ಹಿನ್ನೆಲೆ ಬೇಡ. ಈ ಶಕುಂತಲೆ ದುಷ್ಯಂತನನ್ನು ಕಂಡದ್ದೇ ಎಷ್ಟು ತೀಕ್ಷ್ಣವಾಗಿ ವಿಮಲವಾಗಿ ಪ್ರೀತಿಸಿದಳು ಗೊತ್ತೆ ಇರುವಂತಿಗೇ? ಎಂದು ನಾನು ನೀರೆರೆದು ಬೆಳೆಸಿದ ಇರುವಂತಿಗೆ ಗಿಡವನ್ನೇ ಕೇಳಿದೆ. ಜನ್ಮಾಂತರದ ಸಂಬಂಧವೆನ್ನಲೇ ? ಹಾಗೆನ್ನಲು ಸುಖವೆನಿಸುತ್ತಿತ್ತು.

"ಕಣ್ವರ ಸಾಕು ಮಗಳು, ಆಶ್ರಮದ ಗಡಿಯಾಚೆ ಹೋಗದವಳು ಅವರ ಕಣ್ಣಡಿಯಲ್ಲಿಯೇ ಕೂಗಳತೆಯಲ್ಲಿಯೇ ಸುತ್ತುತ್ತ ಬೆಳೆದವಳು. ಅವರು ಕಳಿಸಿದಲ್ಲಿಗೆ ಹೋಗಲು ಸಿದ್ಧಳೆಂದು ತನಗೆ ತಾನೇ ಅಂದುಕೊಂಡ ಮುಗ್ಧೆ. ಆಶ್ರಮದ ವಾತಾವರಣದಲ್ಲಿ ಆ ವರ್ಚಸ್ವೀ ಪುರುಷನನ್ನು ಕಂಡದ್ದೇ ಪರವಶವಾದೆಯೆಂದರೆ ಆಶ್ಚರ್ಯವಿಲ್ಲ" ಎಂದೆಯೇನು? ನಿನ್ನಲ್ಲಿ ಮುಚ್ಚುಮರೆ ಏಕೆ ?

ತಂದೆ ಕಣ್ವರನ್ನು ಭೇಟಿ ಮಾಡಲು ಬರುತ್ತಿದ್ದ ರಾಜರು ಸಾಮಂತರು ಹಲವಾರು. ವಯೋಗುಣಕ್ಕೆ ಅನುಸಾರವಾಗಿ ಚಲಿಸುತ್ತಿದ್ದವು ಕಣ್ಣುಗಳು. ಈ ಶಕುಂತಲೆ ಮುಗ್ಧೆ, ಯಾರಿಗೆ? ಹೊರಗಿನಿಂದ ನೋಡುವವರಿಗೆ, ಆಕೆಗಲ್ಲ. ಆಕೆಯ ಗಮನ ಯಾರ ಮೇಲೆಯೂ ಸ್ಥಿರವಾಗಲಿಲ್ಲ. ನಾನೆಂಬುದು ಇಲ್ಲವೇ ಆಗಿ ಬಿಡುವಂತಹ ತಾದಾತ್ಮ್ಯತೆ ಉಂಟಾಗಲಿಲ್ಲ. ಕಣ್ವರೊಡನೆ ನನ್ನನ್ನು ಕೇಳಿದ ರಾಜರಿಗೆ ಅವರೂ ಕೊಡಲಿಲ್ಲ. ಮಾತಿಗೊಮ್ಮೆ ಕಣ್ವರು ಹೇಳಿದ್ದರು "ನನ್ನ ಶಕುಂತಲೆಯ ಪತಿ ಅಂತಿಂತಹವನಲ್ಲ." ಕಣ್ವರನ್ನು ಬಿಟ್ಟು ಹೋಗುವ ಗಳಿಗೆ ಸಹಿಸಲಾರದ್ದು ಎನಿಸಿತು. "ನಿಮ್ಮನ್ನು ಬಿಟ್ಟು ಎಲ್ಲಿಗೂ ಹೋಗುವವಳಲ್ಲ ಈ ಶಕುಂತಲೆ" ಎಂದೆ. ಕಿರು ನಗುತ್ತಿದ್ದ ಕಣ್ವರು ತಕ್ಷಣವೇ ಗಂಭೀರರಾದರು. "ಮಗೂ ಹಾಗೆ ಹೇಳಲೇಬಾರದು ನೀನು"– ಬಲು ಮೆಲುವಾಗಿತ್ತು ನುಡಿ. ಅಂತರ್ವಾಣಿಯಂತೆ.

ಆಶ್ರಮವೆಂದೊಡನೆ ಆದರ್ಶ ವಾತಾವರಣವೆಂಬ ಕಲ್ಪನೆ ಇದೆಯೇನು ನಿನಗೆ? ತೆಗೆ ತೆಗೆ. ದಿನಾ ಜಪ ತಪ ಹೋಮ  ಇತ್ಯಾದಿ ಪ್ರಪಂಚದಲ್ಲಿರುವ ಆಶ್ರಮವಾಸಿಗಳಲ್ಲಿ ಎಲ್ಲರೂ ಪೂರ್ಣಮನದಿಂದ ಅಲ್ಲಿರುವವರು, ಎಲ್ಲವನ್ನೂ ಗೆದ್ದವರು ಎಂದುಕೊಂಡೆಯಾ ಹೇಗೆ? ಗೆಲ್ಲುವುದೆಂಬುದು ಅಷ್ಟು ಸುಲಭವೇ? ಕಣ್ವರ ಹೆದರಿಕೆ ಎಷ್ಟಿದ್ದರೇನು? ಅವರಿಲ್ಲದ ಸಮಯದಲ್ಲಿ ನನ್ನನ್ನು ಪಡೆಯುವ ಬಯಕೆ ವ್ಯಕ್ತಪಡಿಸಿದ ಋಷಿಕುಮಾರರಿಗೇನೂ ಕಡಿಮೆಯಿರಲಿಲ್ಲ. ಸಿಕ್ಕಿದ್ದು ನನ್ನ ಅವಜ್ಞೆ. ವಿಶ್ವಾಮಿತ್ರ–ಮೇನಕೆಯ ಪುತ್ರಿ ಎಂಬ ಅಹಂ, ಅವರು ಸಂಪೂರ್ಣ ತ್ಯಜಿಸಿ ಹೋಗಿದ್ದರೂ ಕೂಡ, ನನಗೇ ಅರಿಯದಂತೆ ನನ್ನೊಳಗಿತ್ತೇನೋ! ಈಗ ದೂರನಿಂತು ಆಗಿನ ನನ್ನನ್ನು ವೀಕ್ಷಿಸಿಕೊಂಡಾಗ ಹಾಗೆನಿಸುತ್ತದೆ.



ದಿನ ಕಳೆಯುತ್ತಿತ್ತು; ವನಜ್ಯೋತ್ಸ್ನೆಯೊಂದಿಗೆ, ಹರಿಣದೊಂದಿಗೆ, ಅನಸೂಯೆ ಪ್ರಿಯಂವದೆಯರೊಂದಿಗೆ, ಗೌತಮಿಯ ಅಂತಃಕರಣದ ಛಾಯೆಯಲ್ಲಿ, ತಂದೆ ಕಣ್ವರ ವಾತ್ಸಲ್ಯದ ಸಿಂಚನದಲ್ಲಿ– ದುಷ್ಯಂತ ಬರುವವರೆಗೆ.

ಆತ ಬಂದ.

ನಾ ಎಲ್ಲವನ್ನೂ ಮರೆತೆ.

ಜಿಂಕೆ ಮರಿಯನ್ನೂ, ಇರುವಂತಿಗೆಯನ್ನೂ, ಗೆಳತಿಯರನ್ನೂ, ಗೌತಮಿಯನ್ನೂ, ತಂದೆ ಕಣ್ವರನ್ನೂ... ಗೆಳತೀ, ನನ್ನನ್ನೂ! ಹಾ! ಪ್ರಣಯದ ಕಾವಿನ ವರ್ಣನೆಗೆ ಇಳಿಯಲಾರೆ. ಅದು ಅಂತಿಂತಹ ಕಾವಲ್ಲ. ಹೇಳಿ ಕಳೆಯುವಂಥದೇ ಅಲ್ಲ. ಒಬ್ಬ ವ್ಯಕ್ತಿಯನ್ನು ಪುಟಗೊಳಿಸುವ ಭಾವಕೇಂದ್ರದ ಕಾವನ್ನು ವರ್ಣಿಸಬೇಕಾಗಿಯೂ ಇಲ್ಲ.

ನನ್ನೆದುರು ದುಷ್ಯಂತನಿದ್ದ.

ಅವನೆದುರು ನಾನಿದ್ದೆನೆ? ಈ ಪ್ರಶ್ನೆಯೇ ಇರಲಿಲ್ಲ!

ಇದ್ದೇನೆ ಎಂತಲೇ ಅಂದುಕೊಂಡು ಬಿಟ್ಟಿದ್ದೆ. ಯಾವ ಆಧಾರವೂ ಇಲ್ಲದೆ. ಪ್ರಕೃತಿಯ ಸಮಸ್ತ ಮೃದುಲ ಭಾವನೆಗಳು ಬೇರೆಯಲ್ಲ ನಾ ಬೇರೆಯಲ್ಲ ಎಂಬಷ್ಟು ತನ್ಮಯಳಾದೆ. ಆತ?

ಆರಂಭದಿಂದಲೂ ಫಕ್ಕನೆ ಅವನನ್ನು ಕವಿಯುತ್ತಿದ್ದ ಅನ್ಯಮನಸ್ಕತೆ ನನಗೆ ಕಾಣಲೇ ಇಲ್ಲ. ಕಾಣುವ ಅವಸ್ಥೆಯಲ್ಲಿಯೇ ನಾನಿರಲಿಲ್ಲ. ಆದರೆ ಒಂದು ಮಧ್ಯಾಹ್ನ ನೆಲ ಆಕಾಶ ವನ ಯಾವುದೂ ಕಾಣದ ಆ ದಿನಗಳ ಸಂಜೆಯತ್ತ ಬಾಗಿ ನಿಂತ ಮಧ್ಯಾಹ್ನವದು. ಮಾಧವೀ ಮಂಟಪದಲ್ಲಿ ಬೆಚ್ಚನೆ ನೆರಳಿತ್ತು. ಆತ ನನ್ನ ಅವನ ಸುತ್ತಷ್ಟೇ ಪ್ರಪಂಚವನ್ನು ಕಿರಿದುಕೊಳಿಸಿದ್ದ. ಮಾತುಗಳು ಸ್ಫಟಿಕಶುಭ್ರ. ಕಂಡಷ್ಟೂ ಕಾಣಬೇಕನಿಸಿ ಕಾಣುತ್ತಲೇ ಇದ್ದೆ. ನೋಡಿದಷ್ಟೂ ಮತ್ತೆ ಬಾಯಾರುತ್ತಿದ್ದೆ. ಕೇಳಿದಷ್ಟೂ ಕೇಳಿಯೇ ಇಲ್ಲವೆಂಬಂತಹ ಚಡಪಡಿಕೆಯಲ್ಲಿದ್ದೆ. ಆಗ–

ಯಾಕೆ ಯಾಕೆ? ಏನಾಯಿತು?

ಇದ್ದಕ್ಕಿದ್ದಂತೆಯೇ ಆತ ತಣ್ಣಗೆ ಕುಳಿತುಬಿಟ್ಟ. ಹಿಮವಂತನಾದನೇ ದುಷ್ಯಂತ? ನಾ? ಪುಟ್ಟ ಕಣಿವೆಯಂತೆ ಆತನನ್ನು ಮೊಗವೆತ್ತಿ ನೋಡಿದೆ. "ಹಿಮಾಲಯಕ್ಕೆಂದೂ ಒಂದೇ ಕಣಿವೆಯಲ್ಲ,  ಹಿಮಾಲಯಕ್ಕೆಂದೂ ಕಣಿವೆಗಳು ಕಾಣುವುದಿಲ್ಲ "....... ದನಿಗಳು ಹೊತ್ತು ಗೊತ್ತಿಲ್ಲದೆ ತೂರಿಕೊಳ್ಳುತ್ತಲೇ ಇರುತ್ತವೆ. ಯಾರ್‍ಯಾರದೋ ದನಿಗಳು.... ಈ ದನಿ ರೇಶಿಮೆಯೆಳೆಯಂತಿತ್ತು. ಮಾತೃತ್ವದ ಕಂಪು ತುಂಬಿಕೊಂಡಿತ್ತು. ಆದರೆ ನಾನದನ್ನು ಒತ್ತರಿಸಿದೆ. ಇವೆಲ್ಲ ಕೇಳಲು ಸತ್ಯ. ನಂಬುವಾ ಎಂದರೆ ಸುಳ್ಳೆಂದು ದೂರ ತಳ್ಳುವಂತಾಗುತ್ತದೆ. ಎಲ್ಲರನ್ನೂ ಮರೆತು ಕುಳಿತಿದ್ದರೂ ದನಿಗಳು ಕಾಡುತ್ತವೆಯಲ್ಲಾ ಏನು ಮಾಡಲಿ?

ಆತ ಬಿಸಿಲಿಗೆ ಕರಗಿದಂತಾದ. ಕಣಿವೆ ತಂಪಾಯಿತೇ? ನಿನಾದದ ಗೆಜ್ಜೆ. ಮಾತಿಲ್ಲ. ಉನ್ಮತ್ತ. ಹಿಮವಂತ ದುಷ್ಯಂತ ತೋಳಿಗೊರಗಿ ವಿಶ್ರಾಂತ. ತಂಬೆಲರು ಬಿಸಿ ಬಂತು. ಅವನ ಮುಚ್ಚಿದ ಕಣ್ಣುಗಳನ್ನೇ ಕೇಳಿದೆ. ನಿದ್ದೆಯೇ? ಅವು ರೆಪ್ಪೆಯಾಡಲಿಲ್ಲ. ಬದಲು ಒಳಗೇನೋ ನಡೆಯುತ್ತಿದೆಯೆಂಬಂತೆ ಅದಕ್ಕೆಲ್ಲ ಅವು ಸಾಕ್ಷಿಗಳೆಂಬಂತೆ ಕಂಡವು.

ಆತ ಯಾರದೋ ಹೆಸರನ್ನು ಕನವರಿಸಿದ. ಆಲಿಸಿದೆ, ಪುನಃ ಆಲಿಸಿದೆ. ಯಾರೀಕೆ ನೀಹಾರಿಕೆ? ಕನಸಿನಲ್ಲಿಯೂ ಬಿಡದವಳು? ಯಾರೇ ಆಗಿರಲಿ, ನನ್ನೆದುರಿಗಿಲ್ಲ. ಇಲ್ಲವೇನು? ತಿರುಗಿ ಆ ಕಣ್ಣುಗಳನ್ನೇ ನೋಡಿದೆ, ಅವು ಒಳಗೇ ಅತ್ತಿತ್ತ ಚಲಿಸುತ್ತ ಚಂಚಲನೇತ್ರ. ಎಚ್ಚರಿಸುವಂತಿಲ್ಲ, ತಾನಾಗಿ ಎಚ್ಚರಾಗುವವರೆಗೂ.

ತಾನಾಗಿ ಆತ ಎಚ್ಚರಾದ. "ಆಹ! ಎಂತಹ ಕನಸು!" ಎಂದ. ಏನಂತ ಕನಸು?– ಅದರ ಬದಲು: "ರಾಜಕಾರಣದ ಯೋಚನೆಯೇ?" ಎಂದೆ. ಆತ ಮುಗುಳುನಕ್ಕ. ಆ ನಗೆಯ ಮುಗುಳು ಈಗ ಈಗ ಯಾರಿಗೋ ಮುತ್ತಿಟ್ಟು ಬಂದಂತೆ ಬಿಸಿಯಿದೆ, ಬಿಸಿಯಿಂದ ಅದುರುತ್ತಿದೆ ಅನಿಸಿತು. ಗೆಳತೀ, ಒಮ್ಮೆಗೇ ಆತ ಅಪರಿಚಿತನಂತೆ ಕಾಣಿಸಿದ.

ತಡೆಯಲಾರದೆ ನಾನವನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡೆ. ಬಹುಶಃ ಅವನಿಗೇ ತಿಳಿಯದಂತೆ ಆತ ಕೈ ಕೊಸರಿಕೊಂಡ. ಹೌದೇ? ಸಂಶಯದ ಮೊನೆ ಚುಚ್ಚಿ ಬೆಚ್ಚಿಸಿತು. ಮನದ ಮೂಲೆಯಯಲ್ಲೆಲ್ಲೋ ಗದ್ದಲವಾಯಿತು. ನಾನದನ್ನು ಗಮನಿಸದೆ ಹೋದೆ. ಹಾಗೆ ಗಮನಿಸದೇ ಹೋದದ್ದನ್ನು ಗಮನಿಸಿಕೊಂಡಿದ್ದೇನೆ ಎಂಬ ಅರಿವು ಉಂಟಾಗುತ್ತಿರುವುದೇ ಈಗ !

ಹೊತ್ತು ಪಶ್ಚಿಮಕ್ಕಿಳಿಯುತ್ತಿತ್ತು. ನನಗೆ ಎಚ್ಚರ ಬೇಕಿರಲಿಲ್ಲ.

ಅನಸೂಯೆ ನನಗಿಂತ ಬುದ್ಧಿವಂತೆ. ಬಹುಪತ್ನಿಯರುಳ್ಳ ಮಹಾರಾಜನನ್ನು ನೇರ ಪ್ರಶ್ನಿಸಿದ ಆಕೆಗೆ "ಕುಲಪ್ರತಿಷ್ಠೆಗೆ ಕಾರಣಳಾಗುವ ಈ ಶಕುಂತಲೆ ಮತ್ತು ಸಮುದ್ರವೇ ಒಡ್ಯಾಣವಾಗಿರುವ ವಸುಂಧರೆ– ಇವರನ್ನು ಬಿಟ್ಟರೆ ಇನ್ನಾವುದೂ ಎನಗೆ ಪ್ರಿಯಕರವಾದದ್ದಲ್ಲ" ಎಂದಿದ್ದನಲ್ಲ ಈತ ! ಎಚ್ಚರ ಯಾಕೆ? [ಬಹುಪತ್ನಿಯರುಳ್ಳವನ ಈ ಮಾತು ನಿಜಕ್ಕೂ ನನ್ನನ್ನು ಎಚ್ಚರಿಸಬಹುದಿತ್ತು.]

ಮೈಮರೆವನ್ನು ಅಲುಗಿಸಿ ಅವನೇ ನೆನಪಿಸಿದ.

"ಅಂದು ನಿನ್ನ ಸಖಿ ಕೇಳಿದಳಲ್ಲ ಹಾಗೆ ? ನನಗೆ ಇನ್ನಷ್ಟು ಮಂದಿ ನಲ್ಲೆಯರಿದ್ದಾರೆ ಎಂದಾದರೆ ಏನು ಮಾಡುತ್ತೀಯಾ ?"

ಮಾತು ನನ್ನ ಕಂಠವನ್ನು ಒತ್ತಿ ಹಿಡಿಯಿತು. ಬಿಡಿಸಿಕೊಂಡು "ನೀ ನನ್ನೊಡನಿದ್ದಾಗ ಅವರಿಲ್ಲವಲ್ಲ. ನೀನವರ ನೆನಪನ್ನು ಇಲ್ಲಿಗೂ ತಂದಿಲ್ಲವಲ್ಲ. ಅಷ್ಟು ಸಾಕು" – ಎಂದೆ. ಆತ ನಕ್ಕ. ತುಸು ಹೆಚ್ಚೆನಿಸುವಂತೆಯೇ. ಯಾಕಿರಬಹುದು? ಉತ್ತರ ಹುಡುಕುವ ಮೊದಲೇ ಬೆಳದಿಂಗಳು ಹರಡಿತ್ತು. ಆತ ಭ್ರಮರನಾದ. ಅಥವಾ ನಿಜವಾಗಿಯೂ ನಾ



ಭ್ರಮಿತೆಯಾದೆನೇ?

ಮಧುರ ಕ್ಷಣಗಳು ಉದುರಿದವು ತೊಟ್ಟು ತೊಟ್ಟು.

ಎಷ್ಟು?

ಲೆಕ್ಕವಿಡುವ ದುಃಖ ನನಗೆ ಬೇಡ, ಲೋಕಕ್ಕಿರಲಿ.

ಎಲ್ಲ ಲೆಕ್ಕಗಳೂ ಗಳಿಗೆಗಳ ಸರಪಳಿ.

ದುಷ್ಯಂತನಿರಲಿ ಬದುಕಿನಲಿ

...... ಬೆಳದಿಂಗಳು ಹಾಡಿನ ಮತ್ತು ಕುಡಿಸುತ್ತಿತ್ತು. "ಇದು ಪಾಪವಲ್ಲ" ಎಂದಿದ್ದ ಅವನು. ಆ ಮಾತಿಗೆ ನಾನೊರಗಿದೆ. ಕೊಟ್ಟೆ, ಪಡೆದೆ. "ಆ" ಗಳಿಗೆಯಲ್ಲಿಯೂ ಕಿರುಕಹಿ ವಿಲಿಗುಟ್ಟಿತೇ ಸಿಹಿಯಲ್ಲಿ?" "ಹುಡುಗೀ ನೀನು ಯಾರದೋ ಬದಲಿಗೆಂದು ಯಾರನ್ನೋ ನಿನ್ನ ಮೇಲೆ ಆವಾಹಿಸಿಕೊಂಡಿರಬಾರದೇಕೆ ಈತ?" – ಶಕುಂತ ಪಕ್ಷಿಯೊಂದು ಪ್ರೀತಿಯಿಂದ ಕೇಳಿದಂತಾಯಿತು. ಸಾಕಿ ಸಲಹಿದ ಪಕ್ಷಿಯನ್ನು ನಿರ್ಮಮಕಾರದಿಂದ ಓಡಿಸಿದೆ. ಹುಟ್ಟಿದ ಬೆಳೆದ ನೆಲ ಬಿಗಿದ ಬಂಧನ ಒಮ್ಮೆಗೇ ಕಡಿದು ಸಡಿಲಾಗಿ ಬಿಟ್ಟಿತ್ತು. ಮಧುರಿಮೆಯ ಉತ್ತುಂಗವೇರಿದೆ.

ಕಾಲವನ್ನು ತುದಿಗಾಲಿಂದ ಒದ್ದು ದೂರ ತಳ್ಳುವಂತಿದ್ದಿದ್ದರೆ! ಮರುದಿನ ಆತ ಹೋಗಲೇಬೇಕಿತ್ತು. ಹೋಮ ರಕ್ಷಣೆಯ ಕಾರ್ಯ ಮುಗಿದಿತ್ತು. ಆ ರಾತ್ರಿ ಮುಗಿಯುವುದೇ ಬೇಡ. ಅಂದೇ ಜಗತ್ತು ಮುಗಿದು ಹೋಗಲಿ ಅಂತೆಲ್ಲ ಅನಿಸುತ್ತಿತ್ತು. ಗೆಳತೀ, ಬೆಳದಿಂಗಳ ನಂತರದ ದಿನಗಳು ಎಷ್ಟು ಕರಾಳ!

ಅವುಚಿ ಹಿಡಿದುಕೊಂಡೆ. ಬಿಡುವುದಿಲ್ಲವೆಂದೆ. ಹದಿಹರೆಯದ ಹುಡುಗಿಯರ ಎಲ್ಲ ಆತಂಕ ಉದ್ವೇಗ ಪ್ರೇಮಾತಿಶಯದ ಪರಾಕಾಷ್ಠೆಯಲ್ಲಿದ್ದೆ ನಾನು. ಆತನನ್ನು ಬಿಟ್ಟು ಮತ್ತುಳಿದ ಪ್ರಪಂಚವೇ ಕಾಣುತ್ತಿರಲಿಲ್ಲ.

ನಾನವನನ್ನು ಅವುಚಿ ಹಿಡಿದನೆಂದೆನೇ? ಅತ ಬಿಡಿಸಿಕೊಳ್ಳಲೂ ಇಲ್ಲ, ಇನ್ನಷ್ಟು ಬಿಗಿಯಲೂ ಇಲ್ಲ. ನಾನೇ ಬಿಡಲೆಂಬಂತೆ ಸುಮ್ಮನಿದ್ದ. ತಿಳಿದರೂ ನಾ ತಿಳಿವನ್ನು ಅಲ್ಲಗಳೆದೆ. ನನ್ನೊಡಲ ತೋಡಿಕೊಂಡೆ. ಇರಲಾರೆ ನಾ, ನೀರಿಲ್ಲದೆ ಒಣಗುವ ವನಜ್ಯೋತ್ಸ್ನಾ .....

ನನ್ನ ಉತ್ಕಂಠತೆಯೆದುರು ಆತ ನೀಲಕಂಠನಾದ. ನಾ ವಿಹ್ವಲಳಾಗುತ್ತ ಇದ್ದೆ. "ಇಲ್ಲ, ಹಂಚಿಕೊಳ್ಳಲು ಸಾಧ್ಯವಿಲ್ಲ" ಈ ಮಾತು ಎತ್ತಣಿಂದ ಬಂತು? ಗೊತ್ತಿಲ್ಲ. ನಕ್ಕನೇ ನೀಲಕಂಠ ಗಂಗೆಯನ್ನು ತಲೆಯಲ್ಲಿ ಹೊತ್ತೇ? ಯೋಚಿಸುತ್ತಿರುವಾಗ ಅವನ ಕುಡಿವಾಯಲ್ಲಿ ಹಾಲು ಚೆಲ್ಲಿದಂತಹ ನಗೆ ತನ್ನನ್ನು ತಾನು ಆಗಲೇ ಹಂಚಿಕೊಂಡ ಕತೆ ಹೇಳುತ್ತಿತ್ತು.

ಹಾಯ್, ಆಶ್ರಮದಲ್ಲಿ ಬೆಳೆಯಬಾರದು ಎಂದಿಗೂ. ಶಕುಂತ ಪಕ್ಷಿಗಳೇ ಕೇಳಿ. ಓ ಲೋಕ ಜನರೇ, ಕಿವಿಗೊಟ್ಟು ಕೇಳಿ. ರಾಜರ್ಷಿಯ ಮಗಳಾಗಿಯೂ ಅಪ್ಸರೆಯ ಕುಡಿಯಾಗಿಯೂ. ಕಾಡಿನ ಮಡಿಲಲ್ಲಿ ಬೆಳೆದ ಶಕುಂತಲೆಯ ನೊಂದ ಪ್ರೇಮದ ಕತೆ. ಊರು ನೋಡಿ ಕಾಡು ಬಯಲಾದ ಕತೆ.

"ನನಗೆ ಗೊತ್ತು, ರಾಜಧಾನಿಗೆ ಹೋದವ ನನ್ನನ್ನು ಮರೆಯುತ್ತೀ" ಎಂದೆ. ಆತ ಇಲ್ಲವೆನ್ನಲಿಲ್ಲ. ಬದಲು ಬೇಗ ಕರೆಸಿಕೊಳ್ಳುವೆನೆಂದು ಭಾಷೆ ಕೊಟ್ಟ.

ಹೊರಟೇಹೋದ, ಉಂಗುರವಿತ್ತು. ಭೂಮಿ ಸೂರ್ಯನಿಗೆ ಎಷ್ಟು ಸುತ್ತು ಬಂತೋ! ದುಷ್ಯಂತ ಮರೆವಿನ ಮರೆಯಲ್ಲಿ ತನ್ನನ್ನು ಅಡಗಿಸಿಕೊಂಡು ಬಿಟ್ಟ. ಕರೆಗೆ ಉತ್ತರವಿಲ್ಲ. ಸುದ್ದಿ ಸಂದೇಶವಿಲ್ಲ. ತಪ್ಪಲಿನ ತಪಸ್ವಿನಿಗೆ ನಿದ್ದೆಯಿಲ್ಲ. ಜಗತ್ತೆಲ್ಲವೂ ಸೊನ್ನೆಯಂತೆ ಕಂಡಿತು. ಹೋಗುವ ಮುನ್ನ "ಇಷ್ಟು ಮೃದು ಮನವೇಕೆ? ಗಟ್ಟಿಯಾಗು" – ಎಂದಿದ್ದ. "ನೀನಿಲ್ಲದಿದ್ದರೆ ಸಾಯುತ್ತೇನೆ, ಹುಚ್ಚಿಯಾಗುತ್ತೇನೆ, ಮನುಷ್ಯಳಾಗಿಯೇ ಇರುವುದಿಲ್ಲ,"– ಎಂದೆಲ್ಲ ಹಲುಬಿದ್ದಕ್ಕೆ. ಆದರೆ ಮನಸ್ಸು ಗಟ್ಟಿಯಾಗಬೇಕಾದದ್ದು ಏನೆಲ್ಲವನ್ನು ತಡೆದುಕೊಳ್ಳಲಿಕ್ಕಾಗಿ!

ನಾ ಕೇವಲ ಏಕಾಂಗಿಯಾದೆ.

ಆ ಹರಿತ ಏಕಾಂಗಿತನ ಬೇಕಿರಲಿಲ್ಲ. ಕಣ್ವರಿನ್ನೂ ಬರಲಿಲ್ಲ. ಅನಸೂಯೆ ಪ್ರಿಯಂವದೆಯರು "ನಿನಗೆ ಪ್ರೇಮದ ಕಾಹಿಲೆಯೇ!" "ಮಹಾರಾಜನ ಮಡದಿಯಾಗುವವಳು. ಮಾತನಾಡಿಸುವಂತೆಯೇ ಇಲ್ಲ" ಇತ್ಯಾದಿ ಲಘು ಹಾಸ್ಯಗಳಲ್ಲಿಯೇ ಉಳಿದರು. ನಿಂತಲ್ಲೇ ಗಿರಕಿ ಹೊಡೆಯುವವರಂತೆ ಕಂಡರು ಅವರು. ಗೆಳತಿಯರೇ, ನಿಮಗೂ ಒಮ್ಮೆ ಪ್ರೀತಿಯ ಸೋಂಕು ತಗಲಲಿ. ಆಘಾತವಾಗಲಿ. ಅದನ್ನು ಮೀಟಿ ಪುನಸ್ಸೃಷ್ಟಿಗೊಳ್ಳುವುದರೊಳಗೆ ನಿಮ್ಮ ಹದಿಹರೆಯದ ಈ ನಗೆಗಳೆಲ್ಲ ಮಾತು ಹಾಸ್ಯಗಳೆಲ್ಲ ಕಾಣದ ಜಗಕ್ಕೆ ಅಂತರ್ಧಾನವಾಗುತ್ತವೆ....

ಹದಿಹರೆಯದ ನಾನು ಹೀಗೆಲ್ಲ ಅಂದುಕೊಳ್ಳುವಷ್ಟು ಮುದಿಯಾದೆನೆ! ಪ್ರಿಯಂವದೆ ಅನಸೂಯೆಯರಿಗೆ ಇನ್ನೂ ಹುಡುಗಾಟಿಕೆ, ಅವರೇ ಸುಖಿಗಳು.

ಅಲ್ಲ, ನಾನೇ!

ನನ್ನ ಒಡಲಲ್ಲಿ ಆಗಲೇ ದೌಷ್ಯಂತಿಯ ಮೃದುಪಾದ ಒತ್ತುತ್ತಿತ್ತು.

ಆಶ್ರಮದಲ್ಲಿ ಬಿಸಿ ಹವೆ. ನಾರುಮಡಿಗಳಿಂದಲೂ ನಾರುವಂತಹ ಮಾತುಗಳು.

"ದುಷ್ಯಂತ ಬೇಟೆಗೆ ಹೊರಟನೆಂದರೆ..."

"ಮಹಾರಾಜನಿಗೇನು? ಇಂಥವಳು ಹದಿನಾರು ಸಾವಿರ"

ನನ್ನ ಅವಜ್ಞೆಗೆ ಒಳಗಾದವರು ಏನು ಹೇಳಿದರೇನು ಎಂದುಕೊಂಡರೂ ಕಿವಿಯ



ಮೇಲೆ ಬೇಕೆಂದೇ ಬೀಳುವ ಮಾತುಗಳು ಗೀಚುತ್ತಲೇ ಇದ್ದವು. ಆತನ ಯಾಯಾವುದೋ ಪ್ರಸಂಗಗಳು.... [ನಂಬಲಾರೆನೆಂದರೆ ಆತನ ವಿಸ್ಮರಣೆ ಅಪಹಾಸ್ಯ ಮಾಡುತ್ತ ನಂಬುವ ಅನಿವಾರ್ಯತೆಯ ಉರುಳು ಬಿಗಿಸಿತ್ತು.]

ಹಿಂದೊಂದು ಕಾಲದಲ್ಲಿ ಹಂಸಪದಿಕೆ ಎಂಬ ಬುಡಕಟ್ಟಿನ ಹುಡುಗಿಯನ್ನು ಆತ ಪ್ರೀತಿಸಿದ್ದು, ದುಷ್ಯಂತನ ಯೌವನದೊಂದಿಗೇ ಹೆಣೆದುಕೊಂಡು ಬಂದ ಹಲವಾರು ಹಂಸಪದಿಕೆಯರು, ಅಂತಃಪುರದ ವಸುಮತಿಯರು, ಶಕುಂತಲೆಯರು! ...ಕನಸಿನಲ್ಲಿ ಕಂಡ ಆ ನೀಹಾರಿಕೆ ಯಾರೂ? ಕನವರಿಸಿದ ಆ ಹೆಸರು ಯಾರದು? ಆಶ್ಚರ್ಯವೆಂದರೆ ನನಗೆ ಅವರೆಲ್ಲರನ್ನೂ ಪ್ರೀತಿಸಲು ಸಾಧ್ಯವಾದದ್ದು. ದುಷ್ಯಂತ ಅವರನ್ನೆಲ್ಲ ಇಷ್ಟಪಟ್ಟನೆಂದ ಮೇಲೆ ನನಗವರನ್ನೆಲ್ಲ ನೋಡಬೇಕು ಎಂಬ ಆಸೆ ಮೊಳೆತದ್ದು!

ಆದರೂ...

"ಆದರೂ" ಎಂಬುದೊಂದು ಮೂಲ ಶಬ್ದ, ಅದರ ಸುತ್ತವೇ ನಮ್ಮ ಎಲ್ಲ ವಿಕಾರಗಳೂ, ರಾಗಗಳೂ, ದೌರ್ಬಲ್ಯಗಳೂ ಸುತ್ತುತ್ತಿರುತ್ತವೆ ಹೌದೇ? ಮನವೇ, ಹುಡುಕಲು ಹೋಗಬೇಡ. ದುಷ್ಯಂತನನ್ನು ನೀ ಆತನಿಗಾಗಿ ಪ್ರೀತಿಸಲಿಲ್ಲವೆಂಬುದನ್ನು ಮರೆಯಬೇಡ. ಆತನಿಗೆ ಪ್ರಿಯರಾದವರು ನಿನಗೆ ಪ್ರಿಯರೆನಿಸಲಿಕ್ಕೂ, ಪ್ರೀತಿಯನ್ನೇ ಹಂಚಿ ಉಣ್ಣುವುದಕ್ಕೂ ನಡುವೆ ವ್ಯತ್ಯಾಸ ಅಗಾಧ. ಒಂದು ಮಾನವನ ನೈಸರ್ಗಿಕ ಗುಣವಾದರೆ ಇನ್ನೊಂದಕ್ಕೆ ಬೇಕಾಗುವುದು ಅಪೂರ್ವ ಸಿದ್ಧತೆ.

ಎಲೇ ಹಲವು ಹೆಂಡಿರ ಗಂಡನೇ, ಮರೆವಿನ ಗುರುತೂ ಇಲ್ಲದ ಈ ಶಕುಂತಲೆಯನ್ನು ಮರೆತೆಯಾ ಹೇಗೆ? ಇಲ್ಲವೆನ್ನು ಇಲ್ಲವೆನ್ನು.

ಆದರೆ ಆತ ಇಲ್ಲವೆನ್ನದವನು. "ನನ್ನನ್ನು ಮರೆಯುತ್ತೀ" ಎಂದು ನಾ ಹುಸಿ ಶಂಕೆಯಿಂದೆಂಬಂತೆ ಆದರೆ ನಿಜ ಕಳವಳದಿಂದ ನುಡಿದಾಗಲೂ "ಹೂಂ" ಎಂದು ನಗೆಯಾಡಿ ತಾನು ವಿನೋದಕ್ಕಾಗಿ ಹಾಗೆಂದೆ ಎಂಬಂತೆ ನಟಿಸಿದವನು. "ಆ ಮಾತು ಏಕೆ? ಅದನ್ನೆಲ್ಲ ವ್ಯಕ್ತವಾಗಿ ಹೇಳಿಬಿಡಬಾರದು" ಎನ್ನುತ್ತ ಚುಂಬನದಿಂದ ಸಂಶಯ ಒರೆಸಿದವನು.

ಪುರುವಂಶದಲ್ಲಿ ಜನಿಸಿ ಬಂದ ಸತ್ಯಸಂಧ ರಾಜಾ, ನನ್ನನ್ನು ಚುಂಬಿಸುವಾಗ ಏಕೆ ಅಷ್ಟೊಂದು ಬೆವೆತಿದ್ದೆ? ಕಂಪಿಸುತ್ತಿದ್ದೆ! [ರಾಜಗಣ್ಣುಗಳಲ್ಲಿಯೂ ನೀರು ತುಂಬಿತ್ತಲ್ಲವೇ? ಆತ ಮಹಾರಾಜನಲ್ಲ, ಅಪ್ಪಟ ಮನುಷ್ಯನಂತೆಯೇ ಕಂಡಿದ್ದ. ತುಂಬ ಆಪ್ತನಾಗಿ ಬಿಟ್ಟ] ಇವೆಲ್ಲವೂ ನನಗಾಗಿಯೇ ಎಂದುಕೊಳ್ಳುವಷ್ಟು ಪ್ರೇಮದಲ್ಲಿ ಮುಚ್ಚಿ ಹೋಗಿದ್ದೆ ನಾನು. ನನ್ನದೆಯೊಳಗೆ ಭೀತಿಯೊಂದು ಕರಿಮುಸುಕು ಹಾಕಿ ಮೂಲೆಯಲ್ಲಿ ಕುಳಿತಿದ್ದದ್ದು ಈಗ ಏಕೆ ಎದ್ದು ಬಂತು? ಆತ ನನ್ನನ್ನು ಮರೆತಿದ್ದಾನೆ ಎಂದೇ ನನ್ನೆದುರು ನಿಂತು ಸಾರಿ ಸಾರಿ ಹೇಳುತ್ತಿತ್ತು.... ಹೃದಯದ ದೀಪ ನಂದುವಂತಾದಾಗೆಲ್ಲ ಪ್ರೀತಿ ಇದ್ದಲ್ಲಿ ಕತ್ತಲೆಯಿಲ್ಲ ಎಂಬ ಸಾಂತ್ವನದ ಮರೆ ಹಿಡಿದೆ.

ಗೌತಮಿ ಇದ್ದಳು. ಅಂತಃಸ್ಥಿತಿಯನ್ನು ಗ್ರಹಿಸಿ ತನು ನೋಡಿಕೊಂಡಳು.

ಜೀವಮೂಲಕ್ಕೇ ದುಃಖ ಕಿತ್ತು ಬರುತ್ತಿತ್ತು. ನಾನಾಗಿ ಕವಿಸಿಕೊಂಡ ಯಾತನೆಯ ಸಿಕ್ಕುಗಳ ಸುಕೋಮಲ ಎಳೆಗಳನ್ನು ನಿಧಾನವಾಗಿ ಒಬ್ಬ ಎಲ್ಲ ವಿಕಾರವನ್ನೂ ಮೀರಿದವನೊಂದಿಗೆ ಬಿಡಿಸಿ ಹೇಳಬೇಕು, ಹೇಳಿ ಕಳೆಯ ಬೇಕು, ಕಳೆದು ಹೊಸಬಳಾಗಬೇಕು ......

ಕಾಯುತ್ತಿದ್ದೆ ಜಾಗೃತ ಚೇತಸರನ್ನು.

ತಂದೆ ಕಣ್ವರೇ ಎಲ್ಲಿ ಹೋದಿರಿ?

ಆಶ್ರಮದ ಬಾಗಿಲಲ್ಲೇ ಕುಳಿತುಬಿಟ್ಟೆ, ಆಕಾಶ ನೋಡುತ್ತ. ಮೇಘಗಳನ್ನು ಕರೆಯುತ್ತ. ಅವು ಹಾರಿ ಹೋದವು. ಇಳಿಯಲಿಲ್ಲ ಒಂದೂ. ಆಗ ದೂರ್ವಾಸರ ಹೆಜ್ಜೆ ಸಪ್ಪಳ ಕೇಳಿಸಿತು.

ಆತ ಬಂದದ್ದೇ ನನಗೆ ತಿಳಿಯಲ್ಲಿಲ್ಲವೆಂಬಂತೆ ಕತೆ ಸೃಷ್ಟಿಸಿದನಲ್ಲವೆ ಕವಿ? ಅವನನ್ನೇ ನಂಬಿತು ಲೋಕ. ಲೋಕಕ್ಕೆ ಸತ್ಯದ ತಂಪು ಬೇಡ. ಸುಳ್ಳಿನ ಪ್ರಖರತೆ ಬೇಕು. ಪ್ರೇಮದ ನಿಜ ಬೇಡ. ಸುಳ್ಳು ಬಿನ್ನಾಣ ಬೇಕು. ಕವಿಯೋ! ಕಾವ್ಯಮಯ ಸುಳ್ಳು ಹೇಳಿ ಜಗತ್ತನ್ನು ಮರುಳುಗೊಳಿಸುವ ಅಪ್ರತಿಮ. ಪ್ರಪಂಚ ಇವತ್ತು ಕಾಳಿದಾಸನನ್ನು ನಂಬುವಷ್ಟು ಶಕುಂತಲೆಯನ್ನು ನಂಬುತ್ತದೆಯೇ ? ದುಷ್ಯಂತನ ವರ್ತನೆಗೆ ವ್ಯಾಖ್ಯಾನ ನೀಡಬಹುದು. ಶಕುಂತಲೆಯ ಹೃದಯಕ್ಕೆ?..... ಈ ಮನ ಲೌಕಿಕರ ವ್ಯಾಖ್ಯಾನಕ್ಕೆ ನಿಲುಕಲಾರದಂತಹದು ಎಂದು ಹೇಳಿಕೊಳ್ಳುವುದು ನನಗೇ ಕ್ಷೇಮ.

ದೂರ್ವಾಸರು ಯಾಕಾದರೂ ನನಗೆ ಶಾಪ ಕೊಟ್ಟಾರು? ಅವರೊಬ್ಬ ತಪೋಧನರು. ಅನ್ಯಾಯ ಕಂಡರೆ ಕೆಂಡವಾಗುವ ಋಷಿ ಎಂದು ಕಣ್ವರಿಗೆ ಮೆಚ್ಚು. ನನ್ನ ಚಿಕ್ಕಂದಿನಿಂದಲೇ ಅವರು ಆಶ್ರಮಕ್ಕೆ ಬಂದು ಹೋಗುತ್ತಿದ್ದರು. ಅವರು ಬಂದಾಗೆಲ್ಲ ನಾ ಚಿಗರೆ ಮರಿಯೊಂದಿಗೆ ಅವರ ತೊಡೆಯೇರುತ್ತಿದ್ದೆ. "ನಿನಗಲ್ಲದೆ ಇದಕ್ಕೂ ಜಾಗ ಕೊಡಬೇಕೇ ನಾನು?" ಇತ್ಯಾದಿ ನುಡಿಯುತ್ತ ಮುದ್ದಿಸುತ್ತಿದ್ದರು. ನನ್ನ ಎಳಸು ಭಾವನೆಗಳಿಗೆ ಅವರೊಬ್ಬ ದೊಡ್ಡ ಕೇಳುಗರಾಗಿದ್ದರು. "ಮಗೂ ನೋವಿಲ್ಲದ ಬದುಕು ಅಪರೂಪ. ನಿನಗೆ ಅಪರೂಪದ ಬದಕು ಸಿಗಲಿ"– ಎಂದು ಹರಸಿದ್ದರೊಮ್ಮೆ ಪಿತ ಕಣ್ವರೆದುರಿಗೇ. ಆ ಮಾತು ಕೇಳಿ ಕಣ್ವರು ನನ್ನನ್ನು ಬಳಿಗೆ ಎಳೆದುಕೊಂಡು ಬೆನ್ನು ತಡವಿದರು. ಈಗಲೂ ಅವರ ಉಸಿರಿನ ಬಿಸಿಯ ಝಳಪು ನನ್ನ ಕೆನ್ನೆ ಕಿವಿಗಳನ್ನು ಸ್ಪರ್ಶಿಸುತ್ತಿದೆಯೇ ಎಂಬಷ್ಟು ಹಸಿ. ನನ್ನ ಅಂತರಂಗದ ಒಳಹೊರಗೆಲ್ಲ ತಿಳಿದಿದ್ದ ತಂದೆಗೆ ನಾನು ಹೀಗೆ ಹೀಗೆಲ್ಲ ಹೆಜ್ಜೆಯಿಡುತ್ತೇನೆಂದು. ತಪ್ತತೆಯಲ್ಲಿ ಅದ್ದಿಕೊಳ್ಳುತ್ತೇನೆಂದು [ಮೋಸ ಹೋದೆನೆನ್ನುವುದಿಲ್ಲ. ದುಷ್ಯಂತನ ಮೇಲೆ ಮೋಸದ ಆರೋಪ ಸಲ್ಲವೇ ಸಲ್ಲ] ತಿಳಿದಿತ್ತೇ ಹೇಗೆ?



ದೂರ್ವಾಸರು ಬಂದರು. ಆಶ್ರಮದಲ್ಲಿ ಯಾರೂ ಇಲ್ಲದ ಸಮಯ.

ಎಂದಿನಂತೆ ನಾ ತಟಕ್ಕನೆ ಓಡಿ ಬಂದು "ತಾತಾ ವಂದನೆ" ಎನ್ನಲಿಲ್ಲ. ಆತ ಬರುವುದನ್ನು ನೋಡುತ್ತಲೇ ಇದ್ದೆ. ಏಳಬೇಕೆಂದು, ಮಾತಾಡಬೇಕೆಂದು, ಅರ್ಘ್ಯ ಪಾದ್ಯಾದಿಗಳನ್ನು ನೀಡಬೇಕೆಂದು ತೋಚಲೇ ಇಲ್ಲ. ಏನೂ ತೋಚದೆ ಕಾಲವೆಷ್ಟಾಯಿತು! ಆದರೆ ಆತನನ್ನು ನೋಡಿದ್ದೇ ದೀರ್ಘ ಉಸಿರೊಂದು ಹೊರಬಿತ್ತು. ತುಂಬ ಹಾಯೆನಿಸಿತು.

ಆತ ಬಂದವರೇ "ಏನಿದೇನಿದು! ನಮ್ಮ ಶಕುಂತ ಪಕ್ಷಿ ಆತಂಕಳೇ"? ಎಂದು ನಕ್ಕರೂ ನಗೆಯಲ್ಲಿ ಬಲವಂತವಿತ್ತು. ನಾ ನಗಲಿಲ್ಲ, ಕಣ್ಣು ಮುಚ್ಚಿ ಧೇನಿಸಿದ ಆತ ಉಗ್ರರೂಪ ತಾಳಿದರು, ಅವರ ತುಟಿಗಳು ಏನೋ ನುಡಿಯಲು ಸನ್ನದ್ಧವಾದಾಗಲೇ ನನಗೆ ತಿಳಿವು ಬಂದದ್ದು."ಆಗದಾಗದು! ತಾತಾ, ಆತ ಧರ್ಮಪಾಲಕನಾಗಿ ಬಹುಕಾಲ ಬದುಕಿರಬೇಕು"–ನನ್ನ ನುಡಿ ಆಲಿಸಿದ ದೂರ್ವಾಸರು ಮೌನವಾದರು. ಉಗ್ರತೆ ತಣಿಯಲು ತುಸು ಹೊತ್ತೇ ಹಿಡಿಯಿತು. ನನ್ನ ಮುಂದಲೆ ನೇವರಿಸಿದರು. ಹೆಪ್ಪುಗಟ್ಟಿದ ಶೋಕ ಅವರಿಗೆಷ್ಟು ಸ್ಫುಟವಾಗಿ ಕಂಡಿತು! "ಛೇ! ಆತ ಜಾಣ ಮರೆವಿನ ಮಲ್ಲ"– ಎಂದರು, ಸ್ವಗತವೆಂಬಂತೆ. ನನಗೆ ಕೇಳಿಸುವಂತೆಯೇ. "ಮಗೂ, ರಾಜಮುದ್ರೆಯ ಉಂಗುರವಿದೆಯಷ್ಟೆ? ಅಂಥಕಾಲ ಬಂದರೆ ಅದನ್ನು ಆತನೆದುರು ಹಿಡಿ" – ಎಂದರು, ಅವರ ಮಡಿಲೇರಿ ಹೆಗಲಿಗೆ ತಲೆಯಾನಿಸಿ ಹಸುಳೆಯಂತೆ ಅತ್ತುಬಿಡಬೇಕೆಂಬ ಇಚ್ಛೆ ಅದಮ್ಯವಾಯಿತು. ಬಾಲ್ಯವೇ ಎಲ್ಲಿ ಹೋದೆ?

ಆತ ಬಂದದ್ದು, ನನ್ನೊಡನೆ ಏನೋ ಹೇಳಿದ್ದು, ಉಗ್ರರೂಪ ತಾಳಿದ್ದು, ಹೊರಟು ಹೋದದ್ದು– ಎಲ್ಲವನ್ನೂ ಬಹುಶಃ ದೂರದಿಂದೆಲ್ಲೋ ನೋಡಿದ ಆಶ್ರಮವಾಸಿಗಳಲ್ಲಿ ಕೆಲವರು ಅಂದಿನ ವನ್ಯ ಪರಿಕರಗಳನ್ನು ತರುವಾಗ ವಿಂಗಡನೆ ಮಾಡುವಾಗೆಲ್ಲ ಇದಕ್ಕೆ ತಂತಮ್ಮದೇ ಕತೆ ಕಟ್ಟಿದರು. ಕಲ್ಪನೆಯ ಕುದುರೆಗೆ ಎಂದೂ ಲಂಗುಲಗಾಮಿಲ್ಲ. ಕವಿ ಶಾಪ ಗೀಪ ಇತ್ಯಾದಿಗಳನ್ನೆಲ್ಲ ಅಡ್ಡ ಇಟ್ಟು ಪುರುಷರ ಲಂಪಟತ್ವ ಮುಚ್ಚಿಡಲು ಹವಣಿಸಿದ. ಎಲ್ಲ ಜಾಣ ಮರೆವಿನ ಮಲ್ಲರನ್ನೂ ತನ್ನ ತೆಕ್ಕೆಯೊಳಗೆ ಸುರಕ್ಷಿತವಾಗಿರಿಸುವ, ಪುರುಷ ಕಟ್ಟಿದ ವಿಸ್ಮರಣೆಯ ಕತೆ. ರುಚಿಸಲೇಬೇಕು. ಕಾವ್ಯ ಮೀಯುವುದೇ ತನಗೆ ಬೇಕಾದ ಸುಖೋಷ್ಣ ಕಲ್ಪನೆಯಲ್ಲಿ.

"ಕುರು ಪ್ರಿಯಸಖೀವೃತ್ತಿಂ ಸಪತ್ನೀಜನೇ" – ಎಂದರು ತಂದೆ. ಈಗ ಮಾತ್ರ ನನಗೆ ಸಹಿಸಲಾಗಲಿಲ್ಲ. ಉಮ್ಮಳ ಉಬ್ಬುಬ್ಬಿ ಬಂತು. ಪ್ರಿಯ ಜನರನ್ನು ಅಗಲುವಾಗ ಹರಿದ ಕಣ್ಣೀರೆಂದಿತು ಜನ. ನನ್ನದೋ! ವಿಸ್ಮರಣೆಯ ರಾಜನೆದುರು "ಗುರುತಿದೆಯೇ?" ಎನ್ನಬೇಕಾದ ಪರಿಸ್ಥಿತಿ! ಎಲ್ಲ ತಿಳಿದೂ ತಂದೆಯೇಕೆ ಹಾಗೆ ನುಡಿಯಬೇಕಿತ್ತು? ಬಹುಶಃ ಸಹನಾವವತು, ಸಹನೌಭುನಕ್ತು ಎನ್ನುತ್ತಾ ಸದಾ ಬೋಧನ ಅಧ್ಯಯನದಲ್ಲಿ ದಿನಗಳೆಯುವ ತಂದೆಗೆ ಇದು ಕೂಡಾ ಒಂದು ಸರಾಗ ವಾಕ್ಯ. ಬದುಕನ್ನು ಇಡಿ ಇಡಿಯಾಗಿ

ಅನುಭವಿಸಬೇಕೆಂಬ ನನ್ನ ಬಯಕೆಯೇ ನಗೆಗೇಡಿತನದ್ದಾಗಿರಲಿಕ್ಕಿಲ್ಲವಷ್ಟೆ? ತಂದೆ ಕಣ್ವರನ್ನು ನೋಡಿದೆ. ಋಷಿ ಮನವೇಕೆ ಕಂದಿದೆ? ಯಾರೊಡನೆ ಏನೂ ಹೇಳಿಕೊಳ್ಳಲಾಗದೆ ಹರಿಣವನ್ನು ಅಪ್ಪಿ ಮುದ್ದಿಟ್ಟೆ. ಕೊನೆಗೆ ಅದಕ್ಕಾದರೂ ತಿಳಿದೀತು, ಮೂಕರೋದನದ ಭಾಷೆ.

ದೌಷ್ಯಂತಿಯ ತಂಪು ಕಾಯುತ್ತಿತ್ತು.

ಪತಿಗೃಹದತ್ತ ಹೆಜ್ಜೆಯಿಟ್ಟು.

ದಾರಿಯುದ್ದಕ್ಕೂ ಗೌತಮಿ, ಶಾಙ್ಗರವ, ಮತ್ತಿತರರು ಮಾತನಾಡುತ್ತಲೇ ಇದ್ದರು. ನನ್ನೊಳಗಿನಿಂದ ಒಂದು ವಾಕ್ಯವೂ ಹೊರಡಲಿಲ್ಲ. ಸವೆದಷ್ಟೂ ಮುಗಿಯದ ಹಾದಿ. ಈ ಹಾದಿ ಮುಗಿಯುತ್ತದೆ, ಹಾದಿಯ ತುದಿಯಲ್ಲಿ ಆತನಿರುತ್ತಾನೆ. ಖಂಡಿತವಾಗಿಯೂ? ಖಂಡಿತವಾಗಿಯೂ. ನನಗೆ ನನ್ನದೇ ಸಮಾಧಾನ. "ಹ್ಞಾಂ! ರಾಜಧಾನಿ ಅಂತೂ ಬಂತು'' ಎಂದ ಶಾಙ್ಗರವ ಕಂಚುಕಂಠದಲ್ಲಿ. ಬೆಳಕಿನ ಕೋಲೊಂದು ಫಳಕ್ಕೆಂದಂತಾಯಿತು. ಕಣ್ಣರಳಿಸಿ ನೋಡಿದೆ ಸುತ್ತಲೂ. ಕಾಣಿಸಿಯಾನೇ? ಆತ್ಮದ ತುಡಿತವನ್ನು ಅಂತರಾತ್ಮ ಕದ್ದು ಕೇಳಿ ನಕ್ಕಿತು. "ಎಲೆ ಮರುಳು ಹುಡುಗೀ, ಆತ ರಾಜರಲ್ಲಿ ರಾಜ. ಸಿಕ್ಕಲ್ಲಿ ಕಾಣಿಸಿಕೊಳ್ಳಲಾರದವ" ಎಂದು ಛೇಡಿಸಿತು. "ಪ್ರೇಮಿಸುವ ಮನಸ್ಸಿಗೆ ಕಾಣುವುದು ಪ್ರೇಮಿಯೊಬ್ಬನೇ. ಇದು ಮರುಳು ಎಂದಾದರೆ ಈ ಮರುಳು ನನಗಿರಲಿ" ಎಂದು ನಗು ಕೂಡಿಸಿದೆ ನಾನೂ, ನನಗುತ್ತರವಾಗಿ. ಗೆಲವು ನಿಧಾನವಾಗಿ ತುಂಬಿಕೊಳ್ಳುತ್ತಿತ್ತು.

ಹೇಗೆ ಮಹಾದ್ವಾರವನ್ನು ದಾಟಿದೆ, ಹೇಗೆ ಒಳಗೆ ಬಂದೆ, ಎಲ್ಲಿ ಬಂದು ನಿಂತೆ.... ಒಂದೂ ನೆನಪಾಗದು.

ಗೆಳತೀ, ನೆನಪಿರುವುದು ಇಷ್ಟೇ.

ಸಿಂಹಾಸನಾಧೀಶನಾಗಿ ಆತ ಆಸ್ಥಾನದ ಭಿತ್ತಿಯತ್ತ ದೃಷ್ಟಿಯಿಟ್ಟು "ನಾನೀಕೆಯನ್ನು ಎಂದೂ ಕಂಡದ್ದೇ ಇಲ್ಲ'' ಎಂದು ಕೈಯಾಡಿಸಿದ ಕ್ಷಣ.

ಏನಾದೆ, ಏನಾದೆ ನಾನು?

ಸ್ವತಃ ಬೆಂಕಿಯೇ ಆಗಿ ಹೋದೆ.

ಶಕ್ತಿಯ ಆದಿಗೇ ಬಿದ್ದ ಬೆಂಕಿ.

ಒಡಲಾಳದಲ್ಲಿ ಭುಗಿಲೆದ್ದ ಕೋಲಾಹಲದ ಘರ್ಷಣೆಯಿಂದ ಉದ್ಭವಿಸಿದ ಪ್ರತ್ಯಕ್ಷ ಅಗ್ನಿ ದೇವತೆಯೇ.

ಧಗ ಧಗ ಉರಿ ಜ್ವಾಲೆಗಳನ್ನು ಚಾಚಿ ಅವನನ್ನು ದಹಿಸಿ ಬಿಡುವ ಏಕಮೇವ ಆಕಾಂಕ್ಷೆ ನನ್ನನ್ನು ಮುತ್ತಿಕೊಂಡು ಬಿಟ್ಟಿತ್ತು. ಕೂಗಬೇಕು, ಬೊಬ್ಬಿಡಬೇಕು, ಮೂರು



ಲೋಕಕ್ಕೂ ಕೇಳುವಂತೆ. ಒತ್ತಿಟ್ಟುಕೊಂಡ ವಿರಹ ಶೋಕವನ್ನೆಲ್ಲ ಅಗ್ನಿಗೆರಚಿ ಬ್ರಹ್ಮಾಂಡವನ್ನೇ ಸುಟ್ಟುಬಿಡಬೇಕು.... ಮನು ಕುಲವೇ ಇನ್ನು ಚಿಗುರದಂತೆ...

"ಅನಾರ್ಯ...!

ಗೆಳತೀ, ಏನು ಹೇಳಲಿ! ನುಡಿ ಹೊರಗೇ ಬರಲಿಲ್ಲ.

ಒಂದೇ ಒಂದು ನುಡಿ ಜೀವ ಪಡೆಯಲಿಲ್ಲ. ಭಾಷೆ ಸುಟ್ಟು ಭಸ್ಮವಾಗಿತ್ತು. ಅವಾಕ್ಕಾದೆ ನಾನು. ಹೀಗೆ ಯಾಕಾಯಿತು? ರೋಷಾಗ್ನಿ ಬೆಳಕಲ್ಲಿ ಅವಸರವಸರವಾಗಿ ನನ್ನನ್ನೇ ಅವಲೋಕಿಸಿಕೊಂಡೆ–

ಪ್ರಿಯ ಸಖೀ, ಆ ಎಲ್ಲದರಡಿ ಪ್ರೀತಿಯ ಬನಿ ತಂತಾನೇ ಸದ್ದಿಲ್ಲದೆ ಹರಿಯುತ್ತಿತ್ತು. ಕಾಲಾತೀತತೆಯ ಸೊಬಗಿಂದ, ಪ್ರೇಮಿಸುವುದೊಂದೇ ಗುಣವೆಂಬಂತೆ.

ನಾ

ಮೇನಕೆಯ ಮಗಳಲ್ಲ, ರಾಜರ್ಷಿಯ ಕೂಸಲ್ಲ, ಕಣ್ವರ ಸಾಕುಮಗಳೂ ಅಲ್ಲ. ಪೂರ್ಣ ಪ್ರಕೃತಿಯೇ ಆಗಿದ್ದೆ. ನೋಡಿ ಗಕ್ಕೆಂತ ಬೆರಗಿನಿಂದ ಗಚ್ಚು ಹೊಡೆದಂತೆ ನಿಲ್ಲುವುದಷ್ಟೇ ನನ್ನಿಂದ ಸಾಧ್ಯವಾಯಿತು. ಛೇ ಛೇ.....ಪ್ರಪಂಚವನ್ನೇ ಕತ್ತಲಿಗೆ ದೂಡುವ ಆ ಘೋರ ಮರೆವಿನ ವಿಚಾರ ಹೆಚ್ಚಿಗೇನು ಹೇಳಲಿ? ಹೇಳಿದಷ್ಟೂ ನುಡಿಗಳು ಅರ್ಥ ಕಳೆದುಕೊಳ್ಳುತ್ತವೆ.

ದುಷ್ಯಂತ ಹಾಗೆಂದ.

ಶಾರ್ಙ್ಗರವ ಹೀನೈಸಿದ.

ಗೌತಮಿ ದುಃಖಿಸಿದಳು. "ಉಂಗುರ ತೋರಿಸಬಾರದೇ?" ಎಂದಳು. ಆದರೆ ಉಂಗುರ ತೋರಿಸಿ ಪ್ರೇಮದಾನ ಪಡೆಯುವಷ್ಟು ಶೂನ್ಯಳೇನು ನಾನು? ತೋರಿಸುವುದಿಲ್ಲವೆಂದರೂ ಉದ್ಧಟತನವಾಗುತ್ತದೆ. ಅದು ಕಳೆದು ಹೋಯಿತೆಂದೇ ದುಃಖ ನಟಿಸಿದೆ. ಮರೆವಿನ ನಟನೆಗೆ ಉಂಗುರ ಎಂದಾದರೂ ಔಷಧಿಯಾಗುವುದೆಂತ ಇದೆಯೇ?

[ಜನಕ ವಿಶ್ವಾಮಿತ್ರನ ನೆನಪು. ನನ್ನ ತಾಯಿಯ ಬದುಕು ನನ್ನಲ್ಲಿ ಮರುಕಳಿಸುತ್ತಿರುವುದೇ? ನಾನೂ ಮಗುವನ್ನು ನಡುಕಾಡಿನಲ್ಲಿ...? ಹಾ! ಆಗದಾಗದು. ನನ್ನಲ್ಲಿ ಹರಿಯುವುದು ಮೇನಕೆಯ ರಕ್ತ ಮಾತ್ರವಲ್ಲ.]

ಆದರೂ ಆತನ ಕಣ್ಣುಗಳಲ್ಲಿ ತಡಕಾಡಿದೆ.

ಸಖಿ, ಆ ಕಣ್ಣುಗಳಲ್ಲಿ ನಾನಿದ್ದೇನೇ? ನನ್ನಂತಹ ಹಲವರನ್ನು ಕುಡಿದಂತೆ ಕಂಡು ಮರುಳುಗೊಳಿಸಿದ ಕಲೆಯಿತ್ತು. ಆ ದಿನದ ದುಷ್ಯಂತನಿಗೂ ಈತನಿಗೂ ಎಷ್ಟು ವ್ಯತ್ಯಾಸ! ಅಂದು ರಾಜನಿಗಿಂತ ಹೆಚ್ಚಿಗೆ ಮನುಷ್ಯನೇ ವಿಜೃಂಭಿಸುತ್ತಿದ್ದ. ಇಂದು ಸಾಮಾನ್ಯ

ಮನುಷ್ಯನ ಲಕ್ಷಣಗಳೊಂದೂ ಕಾಣದ ಕಿರೀಟಧಾರಿ ಮಹಾರಾಜ. ಬಹುಶಃ ಇದು ಹೀಗೆಯೇ ಇರಬೇಕಾದ್ದೇನೋ! ಬೇಟೆಯ ನೆವದಲ್ಲಿ ಆಗಾಗ ರಾಜಧಾನಿಯನ್ನು ಬಿಟ್ಟು ಕಾಡು ಸೇರುವುದು ತನ್ನೊಳಗಿನ ಮನುಷ್ಯನಿಗೆ ಜೀವ ತುಂಬಲಿಕ್ಕೇನು ?

ಮತ್ತಷ್ಟು ದಿಟ್ಟಿಸಿದೆ. ಮೀಸೆ ಅಂದಿಗಿಂತ ಬಿಳಿಯಾಗಿದೆಯೇ? ಅವನ ಇಡಿಯ ವ್ಯಕ್ತಿತ್ವದಲ್ಲಿಯೇ ಏನನ್ನೋ ಮರೆಮಾಚುವ, ನೋಡುವವರಿಗೆ ತಾನು ನಿಶ್ಚಿಂತನೆಂದು ತೋರಿಸಲು ಹವಣಿಸುವ ಉಲ್ಲಾಸದ ಚಲನವಲನಗಳು ತುಂಬಿದ್ದುವು. "ಇದೆಲ್ಲ ಬರೀ ಊಹೆ. ದುಷ್ಯಂತನನ್ನು ಅಂದು ನೀನು ಹತ್ತಿರದಿಂದ ನೋಡಲೇ ಇಲ್ಲ"– ಎಂದೆಯಾ? ಹಾಗೆನ್ನದಿರು, ಪ್ರೀತಿಸುವ ಮನ ವಿಚಿತ್ರ ಸೂಕ್ಷ್ಮದ್ದು. ಒಂದು ಸಣ್ಣ ಸ್ವರವನ್ನೂ ಹೆಕ್ಕಿ ಪರೀಕ್ಷಿಸುತ್ತದೆ. ಒಮ್ಮೊಮ್ಮೆ ಎದ್ದು ಕಾಣುವಂತಹದನ್ನೂ ಲೆಕ್ಕಿಸದೆ ತದೇಕವಾಗಿ ಬಿಡುತ್ತದೆ!

* * *

ಪತಿಗೃಹಕ್ಕೆ ಬೆನ್ನು ತಿರುಗಿಸಿ ಮುಂದೆ ನೋಡಿದರೆ ಕಣ್ವಾಶ್ರಮದ ಹಾದಿಯನ್ನು ಸಂಪ್ರದಾಯದ ಕೈ ಅಳಿಸಿ ಹಾಕಿತ್ತು. [ಅಳಿಸಿರದಿದ್ದರೂ ಆ ಹಾದಿಯನ್ನು ನಾ ಮತ್ತೆ ತುಳಿವಂಥವಳಲ್ಲ]. ಮಾರೀಚ ಆಶ್ರಮವನ್ನು ಸೇರಿದೆ. ಸ್ವತಂತ್ರ ಏಕಾಂತವಾಸಕ್ಕೆ ನಾಡಾದರೇನು, ಕಾಡಾದರೇನು, ಗಿರಿಯಾದರೇನು, ಒಮ್ಮೆ ಪೂರ್ಣ ಬಯಲಾದ ಬಳಿಕ! ಹೊಟ್ಟೆಯಲ್ಲಿ ಜಗತ್ತನ್ನೇ ಧಿಕ್ಕರಿಸುವಂಥ ಸುಖ ಬೆಳೆಯುತ್ತಿತ್ತು. ಬಿರುಕೊಡೆದ ಮನದ ಗೋಡೆಗೆ ರೋಮಾಂಚ ಲೇಪಿಸುತ್ತಿತ್ತು. ಬದುಕಲು ಕಲಿತೆ. ವಿಮುಖತೆಯನ್ನಲ್ಲ. ಮಗುವನ್ನು ದಟ್ಟಕಾಡಿನಲ್ಲಿ ತ್ಯಜಿಸಿ ತಪ್ಪಿ ಓಡುವುದಲ್ಲ. ಭೂಮಿಯೇ ಬಾಯಿ ತೆರೆ ಎಂದು ಚೀರಾಡುವುದಲ್ಲ.

"ನೀನಿಲ್ಲದಿದ್ದರೆ ಸಾಯುತ್ತೇನೆ, ಏಕಾಂಗಿಯಾಗುತ್ತೇನೆ, ಹುಚ್ಚಿಯಾಗುತ್ತೇನೆ" ಅಂತೆಲ್ಲ ಹೇಳಿದ್ದೆನಲ್ಲವೆ ಅಂದು? ಎಲ್ಲ ಎಷ್ಟು ಅಬದ್ಧವೆಂಬುದು ಬಹುಶಃ ಅವನಿಗೆ ತಿಳಿದಿತ್ತೇನೋ, ನನಗೆ ಅರಿವಾದದ್ದೇ ಈಗ. ಬದುಕೆಂಬುದು ಯಾವ ಹಿಡಿತದೊಳಗೂ ಸಿಲುಕದ್ದು. ಸತ್ತಿತೇನೋ ಎಂದುಕೊಳ್ಳುವುದರೊಳಗೆ ಮತ್ತೆ ಕೊನರುವ ಗುಣದ್ದು ಎಂದು ನನಗೇಕೆ ಹೊಳೆಯಲಿಲ್ಲ? ಕೆದಕಿ ನೋಡಿದರೆ ಏಕಾಂಗಿಯಲ್ಲದವರು ಯಾರು? ದುಷ್ಯಂತನೂ ಏಕಾಂಗಿಯೇ ಇರಬಹುದು. ಆತ್ಮ ಯಾರಿಗೂ ಜೋತು ಬೀಳುವುದು ಬೇಡ. ಪರಿಶುದ್ಧವಾಗಿ ಪ್ರೇಮಿಸುವಂತಹ ಅನುಭವ ನೀಡಿದ ಆತನಿಗೆ ಕೃತಜ್ಞತೆ ಅರ್ಪಿಸಬೇಕು. ಕಳೆದ ಕ್ಷಣಗಳನ್ನೇ ಜಗ್ಗುತ್ತ ಜಗಿಯುತ್ತ ಇರಬಾರದು. ಆನಂದ ದುಃಖದ ಕ್ಷಣಗಳೆಲ್ಲ ಅಲ್ಲಲ್ಲಿಗೇ ಮುಕ್ತಾಯವಾಗುತ್ತವೆ. ಮತ್ತೆ ಮತ್ತೆ ಅವುಗಳನ್ನು ಗೋಚಿಕೊಳ್ಳುತ್ತ ಮುಂದೆ ಹೋದರೆ ಹೊರೆ ಯಮಭಾರವಾಗಲಿಕ್ಕಿಲ್ಲವೇ?



ಕಹಿ ನುಂಗಬೇಕು, ನೋವು ಕಳೆಯಬೇಕು, ಮನಸ್ಸನ್ನು ಪ್ರಸನ್ನವಾಗಿ ಇಟ್ಟುಕೊಳ್ಳಬೇಕು. ಒಂದೇ ನೆಗೆತಕ್ಕಲ್ಲ, ತೀಕ್ಷ್ಣತಮಗಳನ್ನು ಅಂಗುಲ ಅಂಗುಲವಾಗಿ ನಡೆದು ತೀರಿಸಿಯೇ,

ನನಗೆ ನಾನೇ ಗುರುವಾದೆ, ಶಿಷ್ಯೆಯಾದೆ,

ಮಗು ಸರ್ವದಮನ ಜನಿಸಿದ. ಶಮನವಾಯಿತೇ ನೋವು? ಕಳೆಯಬೇಕು ಎಂದೊಡನೆ ಯಾವುದೂ ಕಳೆಯುವುದಿಲ್ಲ. ಕಡಿಮೆಯಾದೀತು, ಸುಪ್ತತಲಕ್ಕೆ ಇಳಿದೀತು ಕಾಲ ಸಂದಂತೆ.

ಸುಪ್ತತಲಕ್ಕೆ ಇಳಿಯಿತು ಎಂದುಕೊಂಡಿದ್ದೆ.

ಆದರೆ ತಳಕ್ಕಿಳಿದ ನೋವು ಮತ್ತೆ ಕದಡಿ ಮೇಲೆ ಬಂತು. ಬೆಳದಿಂಗಳನ್ನು ಕೂಡಿ ಬಂತು.

ದುಷ್ಯಂತ ಬಂದಿದ್ದ!

ಬಂದನೇ? ಬಂದದ್ದು ದುಷ್ಯಂತನೇ? ದುಷ್ಯಂತನೇ ಹೌದೇನು? ನಾ ಮರಗಿಡ ಬಳ್ಳಿಗಳನ್ನು ಹಕ್ಕಿ ಹರಿಣಗಳನ್ನು ಆಶ್ರಮದ ಗೋಡೆ ತಡಿಕೆ ಜಗಲಿಗಳನ್ನು...... ಕಡೆಗೆ ಮಗು ಸರ್ವದಮನನನ್ನೂ ಕೇಳಿದೆ ಸ್ವರ ಚೆಲ್ಲದೆ.

ಆರೆರೆ! ಭರತ ಆಗಲೇ ಅವನ ತೋಳುಗಳಲ್ಲಿ ಸವಾರಿ ಮಾಡುತ್ತಿದ್ದ. ನನ್ನ ಕಣ್ಣಂಚಿನಲ್ಲಿ ನೀರು ತುಳುಕಿದರೆ [ಕುದಿತಗಳನ್ನೆಲ್ಲ ಪಾತಾಳಕ್ಕೊತ್ತಿ ಭೂಮಿ ತನ್ನನ್ನು ತಾನೇ ತಣಿಸಿಕೊಂಡ ಬಗೆಯನ್ನು ಕಣ್ಣಾರೆ ಕಂಡಿದ್ದ] ಮಾರೀಚರಾದರೂ ಖಂಡಿತ ವ್ಯರ್ಥ ಭಾವಾವೇಗವೆಂದು ಸುಲಭ ಮಾಡಲಿಕ್ಕಿಲ್ಲ. ಸಹಜವನ್ನು ಸಹಜವಾಗಿ ಸ್ವೀಕರಿಸುವ ಅಭ್ಯಾಸವೇ ಇಲ್ಲದ ಲೋಕದ ಮಾತು ಲೋಕಕ್ಕಿರಲಿ. ನನಗೆ ಬೇಡ.

ಆತ ಬಂದದ್ದು ನನಗಾಗಿಯೇ?

"ದೇವೇಂದ್ರನಿಗೆ ಸಹಾಯ ಮಾಡಲಿಕ್ಕಾಗಿ....."

ಮನವೇ, ಸೂಕ್ಷ್ಮ ಪ್ರಶ್ನೆಗಳೇಕೆ? ಸುಖದ ಹೂ ನಿಂತಿರುವುದೇ ಕೋಮಲ ದಂಟಿನ ಮೇಲೆ. ಉದುರುತ್ತೇನೆ, ಉದುರಿದೆ ಎಂದು ಹೆದರಿಸುತ್ತ.

ಮೆಲ್ಲನುಸುರಿದೆ ನಾನು "ನೆನಪಾಯಿತೇ.... ನನ್ನದು?"

ನೆನಪು– ಆ ಶಬ್ದವೇ ಅಂತಹುದೇನೋ! ಅದೇ ಅನ್ಯಮನಸ್ಕತೆ ಅವನನ್ನು ಮತ್ತೆ ಆವರಿಸಿತು.

"ನಿನ್ನೊಡನೆ ಸತ್ಯ ಹೇಳಲಿಕ್ಕೇನು"– ಎನ್ನುತ್ತ ಮೊದಲೇ ಪ್ರಕಾಂಡ ಪಂಡಿತ, ಮನುಷ್ಯ ಸಂಬಂಧಗಳ ಕುರಿತು ದೀರ್ಘವಾಗಿ ಸಾವಧಾನತೆಯಿಂದ ನನಗೆ ತಿಳಿಯುವಂತೆ ಹೇಳಿದ. ನಡುವೆ ಕೊಂಡಿಗಳಾಗಿ ಅವನ ನಲ್ಲೆಯರ, ಅಂತಃಪುರದ ಪ್ರೀತಿ ಪ್ರೇಮ –

ಲೈಂಗಿಕ ಸಂಬಂಧಗಳ ವಿಚಿತ್ರಪರಿ– ಇತ್ಯಾದಿ ಎಲ್ಲ ವಿಚಾರಗಳೂ ವಿವರವಾದವು. ಎಲ್ಲವನ್ನೂ ಅಲ್ಲಲ್ಲಿಗೇ– ಆ ಬಿಂದುವಿಗೇ– ಅನುಭವಿಸಿ ಬಿಟ್ಟು ಬಿಡಬೇಕು ಎಂದಂತಾಯಿತೇ?

ಅವನು ಹೇಳುವುದೆಲ್ಲವೂ ನನಗರ್ಥವಾಗುವಷ್ಟು ಬೆಳೆದಿದ್ದೆ ನಾನು. ನಾನಿನ್ನು ಈತನನ್ನು ಪ್ರೀತಿಸಲು ಸಾಧ್ಯವಾಗುವುದಿಲ್ಲವೇನೋ ಎಂದುಕೊಂಡೆ. ಆದರೆ ನನ್ನ ಹೇಳಿಕೆ ಕೇಳಿಕೆಯನ್ನೂ ಉಲ್ಲಂಘಿಸಿ ಪ್ರೀತಿ ಇನ್ನಷ್ಟು ಸಾಂದ್ರವಾಗಿ ನನ್ನನ್ನು ನರಳಿಸಿತು. ಆತ್ಮದ ಬುಡಕ್ಕೇ ಪೆಟ್ಟು ತಿಂದ ವಿಶ್ವಾಮಿತ್ರನ ಕುವರಿ ಈ ಮಾತನ್ನು ಕೇವಲ ಸುಕುಮಾರತೆಯಿಂದ ನುಡಿಯಲು ಸಾಧ್ಯವಿಲ್ಲ. ಪ್ರೀತಿಯಷ್ಟು ಸ್ವತಂತ್ರ ಯಾವುದಿಲ್ಲ.

"ಬಾ" ಎಂದ ರಾಗ ತುಂಬಿ. ಅದೇ ದುಷ್ಯಂತ?

ಹೋಗಲೇ ನಾನು? ಹೋಗಬೇಕೆ?

ಮಾರೀಚರು ಮೌನಧಾರಣೆ ಮಾಡಿದರು. ನಿರ್ಧಾರ ನನ್ನದು.

ನನಗಾತ ಅನಿವಾರ್ಯನೆಂದ ಮಾತ್ರಕ್ಕೆ ನಾನು ಆತನಿಗೆ ಅನಿವಾರ್ಯವಾಗಬೇಕಿಲ್ಲವೆಂಬ ಸತ್ಯದಂಚಿನಲಿ ನಿಂತು ಚಿಂತಿಸಿದೆ. ಪರಸ್ಪರ ಅನಿವಾರ್ಯವಾಗುವವರೆಗೆ [ಅದು ಎಂದಿಗೂ ಸಾಧ್ಯವಿಲ್ಲದ ಮಾತಾಗಿರಬಹುದು. ಯಾರು ಯಾರಿಗೂ ಎಂದಿಗೂ ಅನಿವಾರ್ಯರಲ್ಲದಿರಬಹುದು. ಆದರೆ ಎಲ್ಲ ಚಿರಂತನ ನುಡಿಗಳಿಗೂ ಅಪವಾದಗಳಿರುತ್ತವೆ] ಕೂಡುವುದೂ ತಪ್ಪು ಎನಿಸಿತು.

ನನ್ನಲ್ಲಿ ಹರಿಯುತ್ತಿರುವುದು ಕ್ಷತ್ರಿಯ ರಕ್ತ ಎಂದೆಲ್ಲ ನಾ ಹೇಳುತ್ತಿದ್ದುದಿತ್ತು. ಆದರೆ ಇದೆಲ್ಲ ಎಂತಹ ಟೊಳ್ಳು ಠೇಂಕಾರ! ಅ ರತ್ನ ಸಿಂಹಾಸನ ನನ್ನನ್ನು ಸೆಳೆಯಲೇ ಇಲ್ಲ.

ನಾ ಹೋಗಲಿಲ್ಲ.

ಸಿಂಹಾಸನ ಉತ್ತರಾಧಿಕಾರಿಯ ಚಿಂತೆಯಲ್ಲಿ ಮಹಾರಾಜನಿದ್ದಾನೆ ಎಂದು ತಿಳಿಯಿತು. ಆಶೀರ್ವಾದ ಪಡೆದು ಭರತ ತಂದೆಯ ಕೈ ಹಿಡಿದು ರಥವೇರಿದ.

ಭರತ ನೆಲೆ ಸೇರಿದ, ನಾನೀಗ ಹಗುರವಾದೆ ಎಂದುಕೊಂಡೆ, ಭಾರವಾದೆ. ಭಾರವಾದೆನೇ ಎಂದುಕೊಳ್ಳುವುದರೊಳಗೆ ಹಗುರವಾಗಿ ಸ್ವಸ್ಥಮಾನಸಿಯಾದೆ. ನಾನೀಗ ಹೀಗಾದೆ ಹಾಗಾದೆ ಎಂದುಕೊಳ್ಳುವಾಗ ನಾವು ಏನೂ ಆಗಿರುವುದಿಲ್ಲ. ಹಾಗೆ– ಹೀಗಿನ ನಡುವಿನಲ್ಲಿ ಕಣ ಕಣವಾಗಿ ಅತ್ತಲೋ ಇತ್ತಲೋ ಚಲಿಸುತ್ತಿರುತ್ತೇವೆ, ಏನಂತಿ?

ಭರತನನ್ನಪ್ಪಿಕೊಂಡು ಹೊರಟೇ ಹೋದ ದುಷ್ಯಂತ. ಸದಾ ಸುಖಿ? ಆತನ ದ್ವಂದ್ವಗಳೆಲ್ಲ ಕಾವ್ಯಕ್ಕೆ, ಜಗತ್ತಿಗೆ ಮಹಾರಾಜನ ಮನಸ್ಸು ಈ ಪರಿಯೆಂದು ಸಮರ್ಥಿಸಲಿಕ್ಕೆ, ಅಧ್ಯಯನಕ್ಕೆ, ಹೊರತು ಸತ್ಯ ಕಾಯಲಿಕ್ಕಲ್ಲ.

ಸತ್ಯವನ್ನು ಕಾಯಬೇಕಾಗಿ ಇಲ್ಲ?



... ನಾ ಕೂಗಿ ಹೇಳಿದೆ "ನನಗೆಂದೂ ನಿನ್ನ ನಲ್ಲೆಯರ ಮೇಲೆ ಮಾತ್ಸರ್ಯವಿಲ್ಲ...."

ಆಗಲೇ ರಥದ ಗಾಲಿ ರಾಜಕಾರಣದತ್ತ ತಿರುಗಿ ಓಡುತ್ತಿರುವಾಗ ಅವನಿಗೆ ಅದು ಖಂಡಿತವಾಗಿಯೂ ಕೇಳಿಸಿರದು.

ಸೂರ್ಯೋದಯ ಹೊಸ ಹೊಸದಾಗಿ ತೋರುವವರೆಗೂ ಬದುಕು ಎಂದಿಗೂ ಬೇಸರವಾಗದು.

* * *

ಬಂದಾಗ ಅಪರಾಹ್ನವಿದ್ದ ಹೇಮಕೂಟದ ತುಂಬ ಈಗ ಸಂಜೆಯ ನೇಸಲು ಚೆಲ್ಲಿತ್ತು.

ಆಶ್ರಮದ ಮಣ್ಣು ಜಗಲಿಯಲ್ಲಿ ಶಕುಂತಲೆ ಹೇಳುತ್ತ ತಡಿಕೆಗೊರಗಿ ಕಣ್ಮುಚ್ಚಿದಳು. ಬೈತಲೆಯ ಅಕ್ಕಪಕ್ಕದಲ್ಲಿ ಬಿಳಿಗೂದಲು ಬೆಳ್ಳಿ ಮಿಂಚುತ್ತಿತ್ತು.

ನೋಡುತ್ತ ಕುಳಿತೆ. ಫಕ್ಕನೇಳಲು ಮನಸ್ಸಾಗದೆ.

ಈಕೆ ಯಾರು? ಪ್ರೇಮಿಯೇ, ವಿರಹಿಣಿಯೇ, ತಪಸ್ವಿನಿಯೇ?

ಅಥವಾ ಈ ಎಲ್ಲದರ ಪರಿಪಾಕವೇ?

ಅಥವಾ ಎಲ್ಲವೂ ಆಗಿ ಎಲ್ಲವನ್ನೂ ಕಳೆದು ಚೊಕ್ಕವಾದ ತಾಜಾ ಪ್ರಕೃತಿಯೇ?

ಹೊತ್ತು ಬೆಟ್ಟದಾಚೆ ಮಾಯವಾಯಿತು.

ಮೆಲ್ಲನೆದ್ದೆ. ಮೆಟ್ಟಿಲಿಳಿದೆ. ಅಂಗಳ ದಾಟಿದೆ. ಹಿಂದಿರುಗಿ ನೋಡಿದೆ.

ಕತ್ತಲ ಚಾದರದಲ್ಲಿ ಏನೂ ಕಾಣಿಸಲಿಲ್ಲ.

ಉಸಿರಿನ ಉಬ್ಬರದಂತೆ ಗಾಳಿ ಬೀಸುತ್ತಿತ್ತು.

**[ಪ್ರೇರಣೆ: ಶ್ರೀಕೆ.ವಿ. ಸುಬ್ಬಣ್ಣ ಅವರು ರೂಪಾಂತರಿಸಿ ನೀನಾಸಮ್ ತಿರುಗಾಟ ೮೫–೮೬ ಪ್ರದರ್ಶಿಸಿದ ಶ್ರೀಸಿ.ಆರ್. ಜಂಬೆ ಅವರ ನಿರ್ದೇಶನದ ನಾಟಕ "ಲೋಕ ಶಾಕುಂತಲ"]**

## ಲೇಖಕರ ಪರಿಚಯ

**ವೈದೇಹಿ** [೧೯೪೫]

ಶ್ರೀಮತಿ ಜಾನಕಿ ಎಸ್. ಮೂರ್ತಿ ದಕ್ಷಿಣ ಕನ್ನಡ ಜಿಲ್ಲೆಯ ಹಂದಾಪುರದಲ್ಲಿ ಹುಟ್ಟಿದರು. 'ವೈದೇಹಿ' ಇವರ ಕಾವ್ಯನಾಮ. ಮಧ್ಯಮವರ್ಗದ ನೋವು ನಲಿವುಗಳನ್ನು

ಸ್ವಂತಿಕೆಯಿಂದ ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ಕಥೆಗಳನ್ನು ಹೆಚ್ಚಾಗಿ ಬರೆದಿರುವ ಇವರು, ಭಾಷೆಯಲ್ಲಿ ಲವಲವಿಕೆಯನ್ನು ಕಾವ್ಯಗುಣಗಳನ್ನು ತಂದುಕೊಟ್ಟಿದ್ದಾರೆ. ಇವರ ರಚನೆಗಳಲ್ಲಿ ಹೆಣ್ಣಿನ ಮನದಾಳದ, ಒಳಪದರಗಳನ್ನು ಕಲಾತ್ಮಕವಾಗಿ ಪರಿಭಾವಿಸಿ ಅದರ ವ್ಯಾಪ್ತಿಯನ್ನು ಹಿಗ್ಗಲಿಸಿರುವ ಅಂಶ ವ್ಯಕ್ತವಾಗುತ್ತದೆ. 'ಅಂತರಂಗದ ಪುಟಗಳು' 'ಗೋಲ' 'ಮರಗಿಡಬಳ್ಳಿ', 'ಕ್ರೌಂಚಪಕ್ಷಿಗಳು', 'ಅಮ್ಮಚ್ಚಿ ಎಂಬ ನೆನಪು' – ಇವರ ಕಥಾಸಂಕಲನಗಳು; 'ಬಿಂದು ಬಿಂದಿಗೆ' ಕವನ ಸಂಕಲನ; 'ಅಸ್ಪೃಶ್ಯರು' ಕಾದಂಬರಿ. ಹೆಗ್ಗೋಡಿನ 'ನೀನಾಸಂ' ತಿರುಗಾಟಕ್ಕೆ ಷೇಕ್ಸ್‌ಪಿಯರನ 'ಟೆಂಪೆಸ್ಟ್' ಮತ್ತು 'ಮ್ಯಾಕ್‌ಬೆತ್' ನಾಟಕಗಳನ್ನು ಮಕ್ಕಳಿಗಾಗಿ ರೂಪಾಂತರಗೊಳಿಸಿದ್ದಾರೆ. ಮಲ್ಲಿನಾಥನ ಧ್ಯಾನ, ಮೇಜು ಮತ್ತು ಬಡಗಿ ಮತ್ತು ಜಾತ್ರೆ ಇವರ ಪ್ರಬಂಧ ಸಂಕಲನಗಳು. ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳು ವೈದೇಹಿಯವರಿಗೆ ಲಭಿಸಿವೆ.

## ಶಬ್ದಾರ್ಥ ವಿವರಣೆ

ಸನಿಹ–ಹತ್ತಿರ; ಭ್ರಮರ–ದುಂಬಿ; ಸ್ವಯ–ತಾನಾಗಿ; ಹರಿಣ–ಜಿಂಕೆ; ಅವಜ್ಞೆ–ತಿರಸ್ಕಾರ; ಜ್ಯೋತ್ಸ್ನೆ–ಬೆಳದಿಂಗಳು; ತಂಬೆಲರು–ತಣ್ಣನೆಗಾಳಿ; ಒಡ್ಯಾಣ–ಸೊಂಟಕ್ಕೆ ಧರಿಸುವ ಆಭರಣ, ಡಾಬು; ನಿರ್ಮಮಕಾರ–ಮೋಹವಿಲ್ಲದ; ವಿಹ್ವಲ–ದುಃಖಿತ; ವಿಸ್ಮರಣೆ–ಮರೆವು, ಲಂಪಟತೆ–ಕಾಮುಕ ವಾಂಛೆ; ಶಮನ–ಶಾಂತವಾಗು; ಅನ್ಯಮನಸ್ಕತೆ–ಅನಾಸಕ್ತಿ; ತಡಿಕೆ–ಬಿದುರಿನ ಗೋಡೆ; ಪರಿಪಾಕ–ಮಿಶ್ರಣ.

## ೧. ಸಂದರ್ಭ ಸಹಿತ ವಿವರಿಸಿ

೧. ಮಗೂ ಹಾಗೆ ಹೇಳಲೇಬಾರದು ನೀನು

೨. ರಾಜಕಾರಣದ ಯೋಚನೆಯೇ ?

೩. ನನಗೊತ್ತು ರಾಜಧಾನಿಗೆ ಹೋದವ ನನ್ನನ್ನು ಮರೆಯುತ್ತೀ.

೪. ಮಹಾರಾಜನಿಗೇನು ? ಇಂಥವಳು ಹದಿನಾರು ಸಾವಿರ.

೫. ಛೇ! ಆತ ಜಾಣ ಮರೆವಿನ ಮಲ್ಲ.

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಶಕುಂತಲೆ ಎಲ್ಲಿ ಕುಳಿತು ಕಥೆ ಹೇಳುತ್ತ ಹೋದಳು ?

೨. ಭ್ರಮರ ಏಕೆ ಬಂದಿರಬೇಕೆಂದು ಶಕುಂತಲೆ ಯೋಚಿಸುತ್ತಾಳೆ ?

೩. ಮಾಧವೀ ಮಂಟಪದಲ್ಲಿ ದುಷ್ಯಂತ ಯಾರ ಹೆಸರನ್ನು ಕನವರಿಸಿದ ?



೪. ಹಂಸಪದಿಕೆ ಯಾರು ?

೫. ದೂರ್ವಾಸರು ಕಣ್ವರೆದುರಿಗೆ ಶಕುಂತಲೆಯನ್ನು ಏನೆಂದು ಹರಸಿದ್ದರು ?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ದುಷ್ಯಂತ ಬರುವವರೆಗೆ ಶಕುಂತಲೆಯ ಬದುಕು ಹೇಗಿತ್ತು ?

೨. ಆಶ್ರಮದಲ್ಲಿದ್ದಾಗ ದುಷ್ಯಂತ ಅನ್ಯಮನಸ್ಕನಾಗಿದ್ದದ್ದು ಏಕೆ ಮತ್ತು ಹೇಗೆ ?

೩. ದೂರ್ವಾಸರು ಶಕುಂತಲೆಯನ್ನು ಭೇಟಿಯಾದ ಪ್ರಸಂಗವನ್ನು ವಿವರಿಸಿ.

೪. ಶಕುಂತಲೆಯು ರಾಜಧಾನಿಯಲ್ಲಿ ದುಷ್ಯಂತನನ್ನು ಭೇಟಿಯಾದ ಪ್ರಸಂಗವನ್ನು ವಿವರಿಸಿ.

೫. ಶಕುಂತಲೆಯು ದುಷ್ಯಂತನೊಂದಿಗೆ ಅರಮನೆಗೆ ಹಿಂದಿರುಗಿ ಹೋಗದಿರಲು ಕಾರಣವೇನು ?

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಕಾಳಿದಾಸನ ಅಭಿಜ್ಞಾನ ಶಾಕುಂತಲಕ್ಕೂ ಪ್ರಸ್ತುತ ಕಥೆಗೂ ಇರುವ ವ್ಯತ್ಯಾಸಗಳನ್ನು ವಿವರಿಸಿ.

೨. ದೂರ್ವಾಸ–ಶಕುಂತಲೆಯರ ಪ್ರಸಂಗಕ್ಕೆ ಲೇಖಕಿಯು ನೀಡಿರುವ ಹೊಸ ರೂಪವನ್ನು ವಿಮರ್ಶಿಸಿ.

೩. ಸ್ತ್ರೀ ಸಬಲೀಕರಣದ ಹಿನ್ನೆಲೆಯಲ್ಲಿ ವೈದೇಹಿಯವರ ಕಥೆಯನ್ನು ವಿಮರ್ಶಿಸಿ.

***

# ೧೫. ಕವಿಕಾಯಕ–ರಾಜಕಾಯಕ

**ಕೆ.ವಿ. ಸುಬ್ಬಣ್ಣ**

'ಕವಿರಾಜ ಮಾರ್ಗ'ವು ಮೊದಲು ಮುದ್ರಣಗೊಂಡು ಪ್ರಕಟವಾದ್ದು ೧೮೯೮ರಲ್ಲಿ. ಆಗ, ಆತನಕ ದೊರಕಿದ್ದ ಹಳಗನ್ನಡ ಗ್ರಂಥಗಳಲ್ಲಿ ಅದೇ ಅತ್ಯಂತ ಪ್ರಾಚೀನವಾದ್ದಾಗಿ [ಕ್ರಿ.ಶ. ೮೧೪–೮೭೭] ಕನ್ನಡ ವಾಙ್ಮಯದ ಪ್ರಥಮ ಉಪಲಬ್ಧ ಗ್ರಂಥವೆಂದು ಹೆಸರುಗೊಂಡಿತ್ತು. ಈಗ ನೂರು ವರ್ಷಗಳು ಕಳೆದಮೇಲೂ ಅದು ಹಾಗೇ ಪ್ರಥಮವಾಗಿಯೇ ಉಳಿದುಕೊಂಡಿದೆ. ಇದಕ್ಕೆ ಹಿಂದೆಯೂ ಹಲವಾರು ಕನ್ನಡ ಗ್ರಂಥಗಳು ರಚಿತವಾಗಿದ್ದುವೆಂಬುದು ನಿಶ್ಚಿತವಾಗಿ ತಿಳಿಯುತ್ತದಾದರೂ ಅವಾವುದೂ ಈತನಕ ದೊರಕಿಲ್ಲ. ಆದ್ಯತೆಯೆನ್ನುವುದೊಂದೇ ಅಲ್ಲದೆ ಈ ಕೃತಿಗೆ ಇನ್ನೂ ಅನೇಕ ಹೆಚ್ಚಳಗಳಿವೆ. ಆ ಕಾರಣದಿಂದ ಈ ಶತಮಾನದ ಪ್ರಮುಖ ಕನ್ನಡ ವಿದ್ವಾಂಸರೆಲ್ಲರೂ 'ಕವಿರಾಜಮಾರ್ಗ'ದ ಬಗ್ಗೆ ವ್ಯಾಪಕವಾಗಿ ಸಂಶೋಧನೆ–ವಿಶ್ಲೇಷಣೆ–ವಿಮರ್ಶೆಗಳನ್ನು ಕೈಗೊಂಡಿದ್ದಾರೆ. ಈ ಅವಧಿಯಲ್ಲಿ ಈ ಗ್ರಂಥದ ಐದು ಆವೃತ್ತಿಗಳು ಪ್ರಕಟವಾಗಿವೆ; ಅವುಗಳಲ್ಲಿ ಕ್ರಮವಾಗಿ, ಪಾಠಗಳನ್ನು ಪರಿಷ್ಕರಿಸಲಾಗಿದೆ ಮತ್ತು ಹೊಸಹೊಸ ಅಂಶಗಳನ್ನು ಸಂಶೋಧಿಸಿ ಮಂಡಿಸಲಾಗಿದೆ. ಕೊನೆಯ ಆವೃತ್ತಿಯು ಗ್ರಂಥದ ಹೊಸಗನ್ನಡ ಅನುವಾದವನ್ನೂ ಒಳಗೊಂಡಿದೆ. 'ಕವಿರಾಜಮಾರ್ಗ'ವನ್ನು ಕುರಿತು ನಾಲ್ಕು ಸ್ವತಂತ್ರ ಗ್ರಂಥಗಳೂ ವಿಪುಲ ಸಂಖ್ಯೆಯ ಲೇಖನಗಳೂ ಪ್ರಕಟವಾಗಿವೆ:

೧೯೫೨ರ ಸಮಯದಲ್ಲಿ ಗುರುಗಳಾದ ಎಸ್.ವಿ. ಪರಮೇಶ್ವರ ಭಟ್ಟರು ನಾಲ್ಕಾರು ದಿನ ನನ್ನನ್ನು ಕೂರಿಸಿಕೊಂಡು 'ಕವಿರಾಜಮಾರ್ಗ'ವನ್ನು ಓದಿ ಹೇಳಿದ್ದರು. ಆಮೇಲೆ ಆಗಾಗ ನಾನು ಅದನ್ನು ಓದುತ್ತಿದ್ದುದ್ದುಂಟು. ಆದರೆ ಈ ಗ್ರಂಥವು ನನ್ನಲ್ಲಿ ನಿಜವಾಗಿ ಸ್ಫೋಟಿಸಿದ್ದು ೧೯೮೦ರ ದಶಕದಲ್ಲಿ. ಗೋಕಾಕ್ ವರದಿಯ ಪರವಾದ ಚಳುವಳಿಯು ಆಗ ಪ್ರಾರಂಭವಾಗಿತ್ತು ಅಥವಾ ಆಗಿ ಮುಗಿದಿತ್ತು ಅಂತ ನೆನಪು. ಆಗ ಓದುವಾಗ 'ಕವಿರಾಜಮಾರ್ಗ'ದ ಪಠ್ಯವು ಹಿಂದೆ ಓದಿದ್ದಕ್ಕಿಂತ ಭಿನ್ನವಾದ ಬೇರೆಯೇ ಹೊಸ ಗ್ರಂಥವೆನ್ನುವಂತೆ ಕಂಡಿತು. ಬಹುಪಾಲು ನನ್ನೆದುರೇ ನಡೆದಿದ್ದ ನಮ್ಮ ಈಚಿನ ಇತಿಹಾಸ ವಾಹಿನಿಯ ಮೇಲೆ ಅದು ಬೆಳಕು ಚೆಲ್ಲಿ ಬೆಳಗಿಸುತ್ತಿರುವಂತೆ ಭಾಸವಾಯಿತು. ಅಂದರೆ–



೧. ಸ್ವಾತಂತ್ರ್ಯಪೂರ್ವದ ಸುಮಾರು ಒಂದು ಶತಮಾನದುದ್ದವೂ ಭಾರತವು ರೂಪಿಸಿಕೊಂಡುಬಂದ, ಸ್ವಾಯತ್ತ ಭಾಷಾರಾಜ್ಯಗಳು ಮತ್ತು ಅವುಗಳ ಒಕ್ಕೂಟವಾದ ಸ್ವತಂತ್ರ–ಅಖಂಡ–ವಿಕೇಂದ್ರೀಕೃತ ಪ್ರಜಾತಂತ್ರಾತ್ಮಕ ಭಾರತದ ಭಾರೀ ಕನಸು; ಮತ್ತು ಸ್ವಾತಂತ್ರ್ಯ ಪ್ರಾಪ್ತಿಯಾಗುತ್ತಿರುವಾಗಲೇ ಧರ್ಮ ಭೇದದ ನೆಪದಿಂದಾಗಿ ನಡೆದ ಭಾರತದ ದೇಹಚ್ಛೇದ;

೨. ಅನಂತರ ನಡೆದ ಭಾಷಾರಾಜ್ಯ ಹೋರಾಟಗಳು; ಆಂಧ್ರದ ಪೊಟ್ಟಿ ಶ್ರೀರಾಮುಲು ಅವರ ಆಮರಣ ಉಪವಾಸ ಮತ್ತು ಸಾವು; ಅದರ ಪರಿಣಾಮವಾಗಿ ಭಾಷಾರಾಜ್ಯಗಳ ಉದಯ; ೧೯೫೬ರಲ್ಲಿ ಕರ್ನಾಟಕ [ವಿಶಾಲ ಮೈಸೂರು] ರಾಜ್ಯದ ಸ್ಥಾಪನೆ;

೩. ಈ ಮಧ್ಯದ ತಮಿಳುನಾಡಿನ ದ್ರಾವಿಡ ಚಳುವಳಿ; ಪ್ರತ್ಯೇಕ ದ್ರಾವಿಡ ರಾಷ್ಟ್ರವನ್ನು ನಿರ್ಮಿಸುವ ಬೆದರಿಕೆ; ಅಕಾಲಿಗಳ ಪ್ರತ್ಯೇಕತೆಯ ಚಳುವಳಿ; ಕಾಶ್ಮೀರದ ಆಕ್ರಮಣ ಮತ್ತು ಅದು ಇಬ್ಭಾಗವಾಗುವ ಭಯ;

೪. ಈ ಹಿನ್ನೆಲೆಯಲ್ಲಿ ಭಾಷಾರಾಜ್ಯಗಳ ನಿರ್ಮಾಣಕ್ಕೆ ತೀವ್ರ ವಿರೋಧ; ಜನಾಂಗ–ಧರ್ಮ–ಜಾತಿಗಳ ಹಾಗೆಯೇ ಭಾಷೆಯೂ ಛಿದ್ರೀಕರಣಕ್ಕೆ ದಾರಿ ಮಾಡೀತು ಎನ್ನುವ ವಾದ; ಭಾಷಾರಾಜ್ಯ ನಿರ್ಮಾಣ ಕುರಿತು ನೆಹರು ಅವರ ಅಸಮಾಧಾನ, ಅಸಮ್ಮತಿ; ಕರ್ನಾಟಕ ಏಕೀಕರಣಕ್ಕೆ ಒಳಗಿನಿಂದಲೇ ಭಿನ್ನಾಭಿಪ್ರಾಯಗಳು, ವಿರೋಧಗಳು; ಐದು ಕರ್ನಾಟಕಗಳಿರಲಿ ಎಂಬ ಡಿ.ವಿ.ಜಿ. ಅವರ ವಾದ;

೫. ಭಾಷಾ ರಾಜ್ಯಗಳು ಉದಯವಾದ ಮೇಲಿನ ಗಡಿವಿವಾದ ಜಗಳಗಳು; ಬೆಳಗಾವಿ, ಬಳ್ಳಾರಿ ಬೆಂಗಳೂರು, ದಕ್ಷಿಣಕನ್ನಡ ಮುಂತಾಗಿ ನಾಲ್ಕು ಮೂಲೆಗಳಲ್ಲಿ ಕನ್ನಡದ ನೆಲವು ಕತ್ತರಿಸಿ ಹೋದದ್ದು; ನದಿವಿವಾದಗಳು, ವಲಸೆ ವಿವಾದಗಳು, ಈ ಸಂಬಂಧ ಚಳುವಳಿಗಳು, ಹಿಂಸೆಯ ಘಟನೆಗಳು;

೬. ಕಾಶ್ಮೀರ, ಪಂಜಾಬ್, ಅಸ್ಸಾಂ ಮತ್ತು ಪೂರ್ವಾಂಚಲ ರಾಜ್ಯಗಳಲ್ಲಿನ ಪ್ರತ್ಯೇಕತಾ ಚಳುವಳಿಗಳು ಮತ್ತು ಅವಕ್ಕೆ ವಿದೇಶಗಳಿಂದ ಕುಮ್ಮಕ್ಕು; ಸೈನ್ಯ ಕಾರ್ಯಾಚರಣೆಗಳು ಪಂಜಾಬ್‌ನ ಅಮೃತಸರದಲ್ಲಿ ನಡೆದ ಹತ್ಯಾಕಾಂಡ ಮತ್ತು ಅದರ ಪರಿಣಾಮವಾಗಿ ದೆಹಲಿಯಲ್ಲಿ ನಡೆದ ಕರಾಳ ಹಿಂಸೆ ಹತ್ಯೆಗಳು; ಮಹಾರಾಷ್ಟ್ರದಲ್ಲಿ ಶಿವಸೇನೆಯು ಹುಟ್ಟಿ ಬೆಳೆದು ಅಲ್ಲಿ ಬೆಳೆಸಿದ ಭಯೋತ್ಪಾದಕ ಚಳುವಳಿಗಳು; ಬಾಂಗ್ಲಾದೇಶವು ಪಾಕಿಸ್ತಾನದಿಂದ ವಿಭಜನೆಗೊಂಡದ್ದು ಮತ್ತು ಅದರಲ್ಲಿ ಭಾರತದ ಕಿಂಚಿತ್ ಕುಮ್ಮಕ್ಕು;

೭. ಕರ್ನಾಟಕದಲ್ಲಿ ಕನ್ನಡ ಚಳುವಳಿಗಳು; ಗೋಕಾಕ್, ಸರೋಜಿನಿ ಮಹಿಷಿ ಆಯೋಗ ವರದಿಗಳು ಮತ್ತು ಅವುಗಳ ಪರ ವಿರೋಧ ಚಳುವಳಿಗಳು; ಜಾತಿ

ಪ್ರಾತಿನಿಧ್ಯ ಕುರಿತ ಚಳುವಳಿಗಳು; ತಮಿಳು ವಲಸೆಗಾರರ ವಿರುದ್ಧ, ಕಾವೇರಿ ವಿವಾದಕ್ಕೆ ಸಂಬಂಧಿಸಿ ಚಳುವಳಿಗಳು; ಹಿಂಸಾತ್ಮಕ ಘಟನೆಗಳು; ಗೋಕಾಕ್ ವರದಿ ವಿರುದ್ಧ ಬರೆದ ಡೆಕ್ಕನ್ ಹೆರಾಲ್ಡ್ ಸಂಪಾದಕೀಯಕ್ಕೆ ಪ್ರತಿಭಟನೆ; ಬೆಂಗಳೂರಲ್ಲಿ ಬೆಳೆದ ಕನ್ನಡ ಚಳುವಳಿ ಪರಂಪರೆ;

೮. ಇವನ್ನು ಹಿಂಬಾಲಿಸಿದ ಇತ್ತೀಚಿನ ಕೊಡಗು, ಉತ್ತರ ಕರ್ಣಾಟಕ, ಹೈದರಾಬಾದು ಕರ್ಣಾಟಕ, ತುಳುನಾಡು, ಮಲೆನಾಡು, ಕರಾವಳಿ ಪ್ರಾಂತ ಮುಂತಾದ ಪ್ರತ್ಯೇಕತೆಯ ಕೂಗುಗಳು ಇತ್ಯಾದಿ ಇತ್ಯಾದಿ.

– ಹೀಗೆ ನಡೆದಿರುವ ಇತಿಹಾಸ ಸರಣಿಯಲ್ಲಿ ನಾವು ಯಾಯಾವ ಸಮಸ್ಯೆ ಸವಾಲುಗಳನ್ನು ಎದುರಿಸುತ್ತ ಕಂಗೆಟ್ಟಿದ್ದೇವೋ ಕಳವಳಗೊಂಡಿದ್ದೇವೋ ಅಂಥ ಸಮಸ್ಯೆಗಳ ಮೂಲವನ್ನು ಎಂದರೆ ಪ್ರಾಯಃ, ಕನ್ನಡತನದ ತಾತ್ತ್ವಿಕತೆ ಮತ್ತು ಅನುಷ್ಠಾನದ ಸಮಸ್ಯೆಗಳನ್ನು ಸಂಬೋಧಿಸಿಯೇ 'ಕವಿರಾಜಮಾರ್ಗ' ಮಾತಾಡುತ್ತಿದೆ ಹಾಗೂ ಈ ಸಮಸ್ಯೆಗಳ ಜೊತೆ ಅನುಸಂಧಾನಕ್ಕೆ ಬೇಕಾದ ವಿವೇಕ–ಉಪಾಯಗಳ ಬಗ್ಗೆ ಚಿಂತಿಸಿದೆ ಅಂತ ಕಂಡಿತು.

ಅಲ್ಲದೆ, ಅದು ಕಾಕತಾಳೀಯವೆಂದರೂ ಸರಿಯೆ, ನಮಗೂ 'ಕವಿರಾಜಮಾರ್ಗ'ಕ್ಕೂ ನಡುವೆ ಬಲು ಕುತೂಹಲದ ಕೊಂಡಿಯೊಂದಿದೆ ಎಂಬುದನ್ನು ಗಮನಿಸಬೇಕು. ಆ ಕಾಲದಲ್ಲಿ ನೃಪತುಂಗನು ಕಟ್ಟಿದ ಕಾವೇರಿ–ಗೋದಾವರಿ ಮೇರೆಯ ಸಮಗ್ರ ಕನ್ನಡ ರಾಜ್ಯವೆಂಬುದು ಅವನ ಅನಂತರ ಮತ್ತೆ ಕಾಣದಂತೆ ಮಾಯವಾಗಿ ಬಿಟ್ಟಿತು. ಮತ್ತು, ಈ ನಕಾಶೆಯ ಸಮಗ್ರ ಕನ್ನಡವು ಇನ್ನೊಮ್ಮೆ ಸುಮಾರಾಗಿಯಾದರೂ– ಗೋದಾವರಿಯಲ್ಲದಿದ್ದರೆ ಕೃಷ್ಣೆಯಿಂದ, ಕಾವೇರಿಯ ತನಕ– ಅದೇ ಆಕೃತಿಯ ಭಾಷಾರಾಜ್ಯವಾಗಿ ಅಸ್ತಿತ್ವ ಕಂಡದ್ದು, ಹನ್ನೊಂದು ಶತಮಾನಗಳ ಅನಂತರ ೧೯೫೬ರಲ್ಲಿ, ನಮ್ಮ ಕಾಲದಲ್ಲಿಯೇ.

**ಭಾಷೆ ಮತ್ತು ರಾಜ್ಯಗಳ ಬಂಧ–ಸಂಬಂಧ**

ನಮ್ಮ ಇವತ್ತಿನ ಕನ್ನಡದ ವಿಶಿಷ್ಟ ಸಂದರ್ಭಬಿಂದುವಿನಲ್ಲಿ ನಿಂತು, ಆಗಿನ ಸಹಸ್ರಮಾನದ ಹಿನ್ನೆಲೆಯಲ್ಲಿ ನೃಪತುಂಗನನ್ನೋ ಅಥವಾ ಮತ್ತೇನನ್ನೋ ಗುರಿಯಿಟ್ಟು ಲಕ್ಷಿಸುವ ಬದಲಿಗೆ 'ಕವಿರಾಜಮಾರ್ಗ' ಗ್ರಂಥವನ್ನು ಕೇಂದ್ರಚಿತ್ರವಾಗಿ ಕಾಣುತ್ತಿದ್ದೇನಲ್ಲ. ಯಾಕೆ?

ನೆಬ್ರಿಜಾ ಎಂಬವನ ಕಥೆ ಹೇಳುತ್ತಾರೆ. ಆಂಟೋನಿಯೊ ನೆಬ್ರಿಜಾ [ಕ್ರಿ.ಶ. ೧೪೪೪–೧೫೨೨] ಸ್ಪೆಯಿನ್‌ನಲ್ಲಿ ಖ್ಯಾತ ರಾಣಿ ಇಸಾಬೆಲ್ಲಾಳ ಆಳ್ವಿಕೆಯ ಕಾಲದಲ್ಲಿದ್ದವನು. ಆ ರಾಣಿಯು ಸ್ಪೆಯಿನ್ ರಾಜ್ಯವನ್ನು ವಿಸ್ತರಿಸುವುದರಲ್ಲಿ ಆಸಕ್ತಳಾಗಿದ್ದವಳು. ಕೊಲಂಬಸ್



ಅದೇ ಕಾಲದವನು. ಕೊಲಂಬಸ್‌ನು ಖಂಡಾಂತರ ಸಮುದ್ರಯಾನ ಸಾಹಸದ ಯೋಜನೆ ಹಾಕಿ ಅದಕ್ಕೆ ರಾಣಿಯ ಆಶ್ರಯ ಸಹಾಯಗಳನ್ನು ಪಡೆದುಕೊಂಡು ಯಾತ್ರೆ ಹೊರಟಿದ್ದ ಕಾಲದಲ್ಲೇ ನೆಬ್ರಿಜಾ ತನ್ನದೊಂದು ಯೋಜನೆಯನ್ನು ರಾಣಿಯ ಮುಂದಿಟ್ಟು ಅದಕ್ಕೆ ಆಶ್ರಯ ಸಹಾಯಗಳನ್ನು ಬೇಡಿದ್ದ. ನೆಬ್ರಿಜಾ ಅಷ್ಟರಲ್ಲಾಗಲೇ ಒಂದು ಒಳ್ಳೆಯ ಲ್ಯಾಟಿನ್ ವ್ಯಾಕರಣ ಗ್ರಂಥವನ್ನು ಬರೆದಿದ್ದ. ಯುರೋಪಿನಲ್ಲಿ ಆಗಷ್ಟೇ ಮುದ್ರಣತಂತ್ರವು ಕಾಲಿಡುತ್ತಿದ್ದು, ಈತನ ಗ್ರಂಥವು ಮೊತ್ತಮೊದಲಿನ ಮುದ್ರಿತಗ್ರಂಥಗಳಲ್ಲೊಂದಾಗಿ ಪ್ರಕಟವಾಗಿತ್ತು.

ನೆಬ್ರಿಜಾನ ಮನವಿಯ ಸಾರಾಂಶ ಇದು: 'ಸ್ಪೆಯಿನ್‌ನ ಪ್ರಜೆಗಳು ಬಳಸುತ್ತಿರುವ ಕಾಸ್ಟಲಿನ್ ಭಾಷೆಯು ಈಗ ಯಾವುದೇ ನಿಯಂತ್ರಣವಿಲ್ಲದೆ, ಸ್ಥಳಸ್ಥಳಕ್ಕೂ ಭಿನ್ನವಾಗಿ ಹೋಗಿದೆ; ನೂರಾರು 'ಗ್ರಾಮ್ಯ'ಗಳಲ್ಲಿ ಛಿದ್ರವಾಗಿ ಹೋಗಿದೆ. ಮತ್ತು, ಹಿಡಿತವಿಲ್ಲದೆ ಇದು ದಿನದಿನವೂ ಬದಲಾಗುತ್ತ ಹೋಗುತ್ತಿದೆ. ಹೀಗೆ ಭಾಷೆಯು ಛಿದ್ರೀಕರಣವಾಗಿರುವುದರಿಂದ ನಮ್ಮ ಸಾಮ್ರಾಜ್ಯವೇ ಛಿದ್ರವಾಗಿದೆ. ಮತ್ತು, ಇವತ್ತಿನ ಭಾಷೆಯಲ್ಲಿ ಬರೆದಿಟ್ಟ ರಾಣಿಯ ವೈಭವದ ಇತಿಹಾಸವು ಮುಂದಿನ ಜನಕ್ಕೆ ತಲುಪದೆ ವ್ಯರ್ಥವಾಗುವಷ್ಟು ಇದು ತ್ವರೆಯಲ್ಲಿ ಬದಲುಗೊಳ್ಳುತ್ತಿದೆ. ಒಂದು ಸಾಮ್ರಾಜ್ಯವನ್ನು ಮತ್ತು ಇತಿಹಾಸವನ್ನು ನಿರ್ಮಿಸಬೇಕೆಂದರೆ, ಅದಕ್ಕೆ ತಕ್ಕುದಾದ ಒಂದು ಸ್ಥಿರ [– ಪ್ರಮಾಣ] ಭಾಷೆಯನ್ನು ನಿರ್ಮಿಸಿಕೊಳ್ಳಬೇಕು. ರಾಣಿಯ ಅಧಿಕೃತ ಮುದ್ರೆಯುಳ್ಳ ಪ್ರಮಾಣ – ರಾಜಭಾಷೆಯೊಂದು ಈಗ ಅತ್ಯಗತ್ಯವಾಗಿದೆ. ನಾನೀಗ ಈ ಛಿದ್ರಭಾಷೆಯನ್ನು ಶುದ್ಧಗೊಳಿಸಿ ಸಂಕಲಿಸಿ ಅದಕ್ಕೊಂದು ವ್ಯಾಕರಣವನ್ನು ರಚಿಸುತ್ತೇನೆ ಮತ್ತು ಆ ಮೂಲಕ ಪ್ರಮಾಣ ರಾಜಭಾಷೆಯನ್ನು ನಿರ್ಮಿಸುತ್ತೇನೆ. ಅದಕ್ಕೆ ರಾಣಿಯ ಸಮ್ಮತಿ ಸಹಾಯಗಳನ್ನು ಬೇಡುತ್ತೇನೆ.' ಅಲ್ಲದೆ, ಆತನು ಭಾಷೆ–ಸಾಮ್ರಾಜ್ಯಗಳ ಸಂಬಂಧವನ್ನು ಸೂತ್ರೀಕರಿಸಿ ವಿವರಿಸುತ್ತಾನೆ: 'ಭಾಷೆಯೆನ್ನುವುದು ಯಾವೊತ್ತೂ ಸಾಮ್ರಾಜ್ಯದ ಸಂಗಾತಿ, ಶಾಶ್ವತ ಸಹಚರಿ.'

ಕೊಲಂಬಸ್‌ನ ಸಾಹಸಯಾತ್ರೆಯು ತನ್ನ ರಾಜ್ಯ ವಿಸ್ತರಣೆಗೆ ಹೇಗೆ ಸಹಾಯಕವಾದೀತು ಎಂಬುದೇ ಅರ್ಥವಾಗದೆ, ಮೊದಲಿಗೆ ಅದನ್ನು ನಿರಾಕರಿಸಿದ್ದ ರಾಣಿ ಇಸಾಬೆಲ್ಲಾಳಿಗೆ ನೆಬ್ರಿಜಾನ ಯೋಜನೆ ಹೇಗೆ ಅರ್ಥವಾದೀತು? ಆದರೆ ಕೊಲಂಬಸ್‌ನ ಹಾಗೇ ನೆಬ್ರಿಜಾನೂ ಹಲವು ವಶೀಲಿಗಳ ಮೂಲಕ ಕಡೆಗೂ ರಾಣಿಯನ್ನೊಪ್ಪಿಸಿದ; ರಾಣಿಯ ನೆರವು ಪಡೆದು ಮೊತ್ತಮೊದಲ ಸ್ಪಾನಿಶ್ ವ್ಯಾಕರಣವನ್ನು ರಚಿಸಿ ಪ್ರಕಟಿಸಿದ. ಇದೇ ಐರೋಪ್ಯ ಪ್ರಾಂತಭಾಷೆಗಳಲ್ಲಿ ಬಂದ ಮೊತ್ತಮೊದಲ ವ್ಯಾಕರಣ ಗ್ರಂಥ ಅಂತಲೂ ಇವೊತ್ತಿಗೂ ತನ್ನ ಶ್ರೇಷ್ಠತೆಯನ್ನುಳಿಸಿಕೊಂಡಿರುವಂಥದು ಅಂತಲೂ ಹೇಳುತ್ತಾರೆ.

ಭಾಷೆ–ಸಾಮ್ರಾಜ್ಯಗಳ ಸಂಬಂಧದ ಈ ಹಿನ್ನೆಲೆಯಲ್ಲಿ ಕರಾಮಾ ಗ್ರಂಥವು ಆಕಾಲದ

ಕನ್ನಡರಾಜ್ಯ ನಿರ್ಮಾಣ ಪ್ರಯತ್ನದ ಕೇಂದ್ರಬಿಂದುವಾಗಿ ನನಗೆ ಕಾಣಿಸುತ್ತಿದೆ.

'ಕವಿರಾಜಮಾರ್ಗ'ವೆಂದು ಹೆಸರಿನ ಬಗ್ಗೆ ಎಲ್ಲರೂ ವಿವರಣೆಗಳನ್ನು ಕೊಟ್ಟಿದ್ದಾರೆ. ಆ ಪ್ರಕಾರ ಈತನಕ ಕಲ್ಪಿತವಾಗಿರುವ ಅರ್ಥಗಳು ಎರಡು: ೧. ಕವಿಯ ಅಥವಾ ಕವಿಗಳ ರಾಜ ಮಾರ್ಗ [ಕವಿ+ರಾಜಮಾರ್ಗ]; ೨. ಕವಿಗಳ ರಾಜನಂತಿರುವನು [ರು] ಸಮೆದ ಮಾರ್ಗ [ಕವಿರಾಜ+ಮಾರ್ಗ]. ಆದರೆ ಈ ಗ್ರಂಥದ ಸಂದರ್ಭದಲ್ಲಿ 'ಕವಿರಾಜವಾರ್ಗ' ಎಂಬುದಕ್ಕೆ ಸರಳವಾಗಿ ನೇರವಾಗಿ ಹೊರಡಬೇಕಾದ ಮುಖ್ಯಾರ್ಥವೆಂದರೆ– 'ಕವಿ [ಮತ್ತು] ರಾಜ [ಕೂಡಿ ನಿರ್ಮಿಸಿದ] ಮಾರ್ಗ' ಎನ್ನುವುದೇ. ಯಾಕಂದರೆ, ಅದು ವಾಸ್ತವವಾದದ್ದು. ಶ್ರೀವಿಜಯ ಮತ್ತು ನೃಪತುಂಗರು ಇದರ ಜಂಟಿ ಕರ್ತೃಗಳು. ಈ ಜಂಟಿ ಕರ್ತೃತ್ವದ ವಿಷಯವನ್ನು ಗ್ರಂಥದ ಉದ್ದಕ್ಕೂ ಅನೇಕ ಕಡೆಗಳಲ್ಲಿ ಮತ್ತೆ ಮತ್ತೆ ಖಚಿತಗೊಳಿಸಿ ಹೇಳಲಾಗಿದೆ ಹಾಗೂ ಅದನ್ನೇ ಗ್ರಂಥ ಶೀರ್ಷಿಕೆಯಲ್ಲಿ ಕೂಡಾ ದೃಢೀಕರಿಸಲಾಗಿದೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, 'ಕವಿರಾಜ' ಎನ್ನುವ ನುಡಿಗಟ್ಟಾಗಲಿ ಅಥವಾ 'ರಾಜಮಾರ್ಗ' ಎನ್ನುವ ನುಡಿಗಟ್ಟಾಗಲಿ ಈ ಗ್ರಂಥದ ಕಾಲಕ್ಕೆ ಅಥವಾ ಹಿಂದೆ, ಕನ್ನಡ–ಸಂಸ್ಕೃತ ವಾಙ್ಮಯಗಳಲ್ಲಿ ಪ್ರಚುರವಾಗಿದ್ದಂತೆ ಕಂಡು ಬರುವುದಿಲ್ಲ. ಈ ಕೃತಿಯ ಒಳಗೆ ನೋಡಿದರೆ, ಕವೀಂದ್ರ–ಕವೀಶ–ಕವೀಶ್ವರ–ಕವಿ ವೃಷಭ–ಕವಿ ಪ್ರಧಾನ ಇತ್ಯಾದಿ ಬಗೆಬಗೆಯ ಮಾತುಗಳಿದ್ದರೂ ಕವಿರಾಜ ಎಂಬುದಾಗಲಿ ಅಥವಾ ರಾಜಮಾರ್ಗ ಎಂಬುದಾಗಲಿ ಕಾಣಸಿಗುವುದಿಲ್ಲ. ಇದೊಂದು ಅಲಂಕಾರ ಗ್ರಂಥವೆಂಬ ನಿಶ್ಚಿತಿಯಷ್ಟೇ ಎಲ್ಲರ ಮನಸ್ಸಲ್ಲೂ ನಟ್ಟುಕೊಂಡದ್ದರಿಂದ ಮತ್ತು ಈ ಗ್ರಂಥವನ್ನು ವಿವಿಕ್ತವಾಗಿ ಅಥವಾ ಸೀಮಿತ ಹಿನ್ನೆಲೆಯಲ್ಲಿಟ್ಟು ನೋಡುತ್ತ ಬಂದದ್ದರಿಂದ ಈತನಕವೂ ನಾವು ಶೀರ್ಷಿಕೆಯ ಮುಖ್ಯಾರ್ಥವನ್ನು ಗ್ರಹಿಸಲಿಕ್ಕಾಗದೆ ಕಳೆದುಕೊಂಡು ಬಿಟ್ಟಿದ್ದೇವೆ.

ಹಾಗಂತ, ಈತನಕ ನಾವು ಕೊಟ್ಟುಕೊಂಡಿರುವ ಎರಡು ಅರ್ಥಗಳನ್ನು ನಾನು ನಿರಾಕರಿಸಲಾರೆ. ಶಬ್ದಗಳು ಏನೇನನ್ನು ಧ್ವನಿಸಿ ಕೊಡಬಲ್ಲವೋ ಅವೆಲ್ಲವನ್ನೂ ಭಾವಿಸಿ ಗ್ರಹಿಸಿ ಸಮಸ್ತವನ್ನೂ ಕೈಯೊಡ್ಡಿ ಸ್ವೀಕರಿಸಬೇಕಾದ್ದು ಸಹೃದಯತ್ವದ ಮೊದಲ ಲಕ್ಷಣ. ಈಗ ಇರುವ, ೧. ಕವಿ+ರಾಜಮಾರ್ಗ; ೨. ಕವಿರಾಜ+ಮಾರ್ಗ ಎಂಬ ಅರ್ಥಗಳ ಜೊತೆಗೆ ಇನ್ನೆರಡು ಅರ್ಥಗಳನ್ನು ನಾನು ಸೂಚಿಸುತ್ತೇನೆ; ೩. ಕವಿ [ಮತ್ತು] ರಾಜ [ಜಂಟಿಯಾಗಿ ನಿರ್ಮಿಸಿದ] ಮಾರ್ಗ.; ೪. ಸ್ವತಃ ಕವಿಯಾಗಿರುವ ರಾಜ [ಕವಿರಾಜ(ನು ನಿರ್ಮಿಸಿದ ಮಾರ್ಗ. ಇವುಗಳಲ್ಲಿ 'ಕವಿ ಮತ್ತು ರಾಜ ಜಂಟಿಯಾಗಿ ನಿರ್ಮಿಸಿದ ಮಾರ್ಗ' ಎನ್ನುವುದನ್ನು ಮುಖ್ಯಾರ್ಥವಾಗಿಯೂ ಉಳಿದವನ್ನು ಅದರ ಉಪಾರ್ಥ–ಧ್ವನಿಗಳಾಗಿಯೂ ಗ್ರಹಿಸಬೇಕು ಎನ್ನುವುದು ನನ್ನ ಸೂಚನೆ. ಶೀರ್ಷಿಕೆಯು ಈ ಹಲವು ಅರ್ಥಗಳನ್ನು ಧ್ವನಿಸುತ್ತವೆಂಬುದು ತಿಳಿದೇ ಶ್ರೀವಿಜಯನು ಅದನ್ನು ಆಯ್ಕೆ ಮಾಡಿಕೊಂಡ



ಎಂಬುದರಲ್ಲಿ ಸಂದೇಹವಿಲ್ಲ. ಅಲ್ಲದೆ, 'ಕವಿಯಾಗಿರುವ ರಾಜನು ನಿರ್ಮಿಸಿದ್ದು' ಎಂಬ ಧ್ವನಿಯು ತನ್ನ ಪ್ರೀತಿಯ ರಾಜನಿಗೆ ಪ್ರಿಯವಾದೀತು ಅಂತಲೂ ಆತ ಸಂತೋಷಗೊಂಡಿರಬೇಕು.

ಪ್ರಧಾನ ಅರ್ಥವೆಂದು ನಾನು ಸೂಚಿಸಿರುವುದು ಪಠ್ಯದಿಂದಲೇ ದೊರಕುವ ನೇರ ಸೂಚನೆ ಎನ್ನುವುದಷ್ಟೇ ಅಲ್ಲದೆ, ಈ ಅರ್ಥವು ಗ್ರಂಥವನ್ನೋದುವ ಇವತ್ತಿನ ನಮಗೆ ಗ್ರಂಥದ ಅರ್ಥ ಶ್ರೀಮಂತಿಕೆಯನ್ನು ಕಾಣಿಸಲಿಕ್ಕೂ ಸಹಾಯಕವಾಗುತ್ತದೆ ಎಂದು ನನ್ನ ಭಾವನೆ. ಈ ಅರ್ಥವು ಕವಿಕಾಯಕ ಮತ್ತು ರಾಜಕಾಯಕಗಳ, ಅರ್ಥಾತ್ ಕಾವ್ಯ [ಭಾಷೆ] ಮತ್ತು ಪ್ರಭುತ್ವಗಳ ಶಕ್ತಿಯುತ ಸಂಬಂಧಗಳ ಸೂಚಿಸುವಂತೆ ಉದ್ಬೋಧಕವಾಗಿದೆ. ಕವಿಕಾಯಕವು 'ಭಾವ'ದ ಸೂಕ್ಷ್ಮಸ್ತರಕ್ಕೆ ಸಂಬಂಧಿಸಿದ್ದು ಮತ್ತು ಪ್ರಭುತ್ವ ಕಾಯಕವು 'ಭವ'ದ ಮೂರ್ತಸ್ತರಕ್ಕೆ ಸಂಬಂಧಿಸಿದ್ದು. ಮೊದಲು 'ಭಾವಲೋಕ'ದ ನಿರ್ಮಾಣವಾಗಿ ಅನಂತರ ಅದರ ಆಸ್ತಿವಾರ ನಕ್ಷೆಯ ಮೇಲೆ 'ಭವಲೋಕ'ವು ನಿರ್ಮಾಣಗೊಳ್ಳುತ್ತದೆ. ಭಾವದಲ್ಲಿ ಸ್ಫುರಿಸಿ ಭಾಷೆಯಲ್ಲಿ ನಾಮರೂಪಗಳಾಗಿ ಚಿತ್ರಗೊಳ್ಳದೆ ಯಾವುದೇ ಕ್ರಿಯೆಯೂ ಘಟಿಸಲಾರದಷ್ಟೆ? ಕವಿಯೂ ರಾಜನೂ ಕೂಡಿಕೊಂಡು ಭಾವಕನ್ನಡ ಭವಕನ್ನಡಗಳ ಸಂಯುಕ್ತ ಸೃಷ್ಟಿಗೆ ಕೈಚಾಚಿರುವುದನ್ನು ದಾಖಲಿಸುವ 'ಕವಿರಾಜಮಾರ್ಗ'ವು ಆ ಕಾರಣದಿಂದ, ಅಸಾಧಾರಣ ಅನನ್ಯವಾಗಿದೆ.

ಮೊದಲಿಗೆ ಶ್ರೀವಿಜಯನು 'ಕವಿಮಾರ್ಗ'ವೆಂಬ ಗ್ರಂಥವನ್ನು ರಚಿಸಿದ್ದು ಆಮೇಲೆ ನೃಪತುಂಗನ ಸಹಭಾಗಿತ್ವದೊಂದಿಗೆ ಅದನ್ನು ವಿಸ್ತರಿಸಿ 'ಕವಿರಾಜಮಾರ್ಗ'ವಾಗಿ ಪುನರ್ರೂಪಿಸಿರಬೇಕು ಅಂತ ಕೆಲವರು ಊಹಿಸಿದ್ದಾರೆ. ಗಟ್ಟಿಯಾದ ಆಧಾರವಿಲ್ಲದ ಆ ಊಹೆಯನ್ನು, ಅದು ನಿಜವೇ ಅಂತಲ್ಲದಿದ್ದರೂ, ಕವಿಯ ನುಡಿ–ಪ್ರಯತ್ನಕ್ಕೆ ರಾಜನ ನಾಡು–ಪ್ರಯತ್ನವು ಒಗ್ಗೂಡಿಕೊಂಡಿತು ಎಂಬುದರ 'ಐತಿಹ್ಯ'ವಾಗಿ ಒಪ್ಪಿಕೊಳ್ಳುತ್ತೇನೆ.

ಇಲ್ಲಿ ಪುನಃ, ಭಾಷೆ–ಪ್ರಭುತ್ವಗಳ ಸಂಬಂಧವನ್ನು ಕುರಿತ ನೆಬ್ರಿಜಾನ ಮಾತು ನೆನಪಾಗುತ್ತದೆ. ತತ್ತ್ವಾಧಾರಿತ ಮೇರೆಗಳುಳ್ಳ ಹೊಸಬಗೆಯದೊಂದು 'ಸಾರ್ವಭೌಮತ್ವ' ನಿರ್ಮಾಣಕ್ಕಾಗಿ ಭಾಷಾಪ್ರಯತ್ನ–ಪ್ರಭುತ್ವ ಪ್ರಯತ್ನಗಳು ಹೀಗೆ ಒಗ್ಗೂಡಿಕೊಂಡು ಒಂದು ಪಠ್ಯವನ್ನು ಸೃಷ್ಟಿಸಿರುವ ಉದಾಹರಣೆಯು ಜಗತ್ತಿನ ವಾಙ್ಮಯದಲ್ಲಿ ಇನ್ನೊಂದು ಸಿಕ್ಕಲಿಕ್ಕಿಲ್ಲ.

## ಕವಿ ಪರಿಚಯ

**ಕೆ.ವಿ. ಸುಬ್ಬಣ್ಣ [೧೯೩೨–೨೦೦೫]**

ಖ್ಯಾತ ನಾಟಕಕಾರ, ಚಿಂತಕ ಹಾಗೂ ರಂಗಕರ್ಮಿ. ಸಾಗರ ತಾಲ್ಲೂಕಿನ ಹೆಗ್ಗೋಡಿನಲ್ಲಿ ಅವರು ಕಟ್ಟಿ ಬೆಳೆಸಿದ 'ನೀನಾಸಂ' ಅಂತರರಾಷ್ಟ್ರೀಯ ಮಟ್ಟದ ರಂಗ ತರಬೇತಿ ಸಂಸ್ಥೆಯಾಗಿದೆ. ಕಾಳಿದಾಸ, ಶೇಕ್ಸ್‌ಪಿಯರ್, ಬ್ರೆಕ್ಟ್ ಮುಂತಾದವರ ನಾಟಕಗಳನ್ನು ಕನ್ನಡಕ್ಕೆ ಕವಿ ಸುಬ್ಬಣ್ಣ ಅನುವಾದಿಸಿದ್ದಾರೆ. ಧನಂಜಯನ 'ದಶರೂಪಕ'ವನ್ನು ಸಂಸ್ಕೃತದಿಂದ ಕನ್ನಡಕ್ಕೆ ತಂದಿದ್ದಾರೆ. 'ಅರೆಶತಮಾನದ ಅಲೆಬರಹಗಳು' ಇವರ ಬರಹಗಳ ಸಮಗ್ರ ಸಂಕಲನ. 'ಅಕ್ಷರ ಪ್ರಕಾಶನ'ದ ಮೂಲಕ ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಮ್ಯಾಗ್ಸೆಸೆ, ಪದ್ಮಶ್ರೀ ಮುಂತಾದ ಅನೇಕ ಪ್ರಶಸ್ತಿಗಳಿಗೆ ಸುಬ್ಬಣ್ಣನವರು ಪಾತ್ರರಾಗಿದ್ದರು.

'ಕವಿರಾಜ ಮಾರ್ಗವು ನಿರ್ಮಿಸಿದ ಕನ್ನಡ ಜಗತ್ತು' ಎಂಬ ಸುಬ್ಬಣ್ಣನವರ ಲೇಖನವನ್ನು ಇಲ್ಲಿ ಸಂಕ್ಷೇಪಿಸಿ ನೀಡಿದೆ.

## ಶಬ್ದಾರ್ಥ ವಿವರಣೆ

ವಾಙ್ಮಯ–ಸಾಹಿತ್ಯ; ಸ್ವಾಯತ್ತ–ಸ್ವಂತ ಆಡಳಿತ; ಛಿದ್ರೀಕರಣ–ಒಡಕು; ಕುಮ್ಮಕ್ಕು–ಬೆಂಬಲ; ತ್ವರೆ–ವೇಗ; ವಶೀಲಿ–ಪ್ರಭಾವ; ವಿವಕ್ತ–ಸ್ವತಂತ್ರ, ಬಿಡಿಯಾದ; ಉದ್ಬೋದಕ; ಕಾಯಕ–ಕಾರ್ಯ; ಅಸ್ತಿವಾರ–ತಳಪಾಯ; ಘಟಿಸು–ಸಂಭವಿಸು; ಅನನ್ಯ–ವಿಶಿಷ್ಟ.

## ೧. ಸಂದರ್ಭ ಸಹಿತ ವಿವರಿಸಿ

೧. ಅದು ಹಾಗೇ ಪ್ರಥಮವಾಗಿಯೇ ಉಳಿದುಕೊಂಡಿದೆ.

೨. ಹಿಂದೆ ಓದಿದ್ದಕ್ಕಿಂತ ಭಿನ್ನವಾದ ಬೇರೆಯೇ ಹೊಸಗ್ರಂಥವೆನ್ನುವಂತೆ ಕಂಡಿತು.

೩. ಆ ಮೂಲಕ ಪ್ರಮಾಣ ರಾಜಭಾಷೆಯನ್ನು ನಿರ್ಮಿಸುತ್ತೇನೆ.

೪. ಶೀರ್ಷಿಕೆಯ ಮುಖ್ಯಾರ್ಥವನ್ನು ಗ್ರಹಸಲಿಕ್ಕಾಗದೆ ಕಳೆದುಕೊಂಡು ಬಿಟ್ಟಿದ್ದೇವೆ.

೫. ತನ್ನ ಪ್ರೀತಿಯ ರಾಜನಿಗೆ ಪ್ರಿಯವಾದೀತು.

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಕವಿರಾಜಮಾರ್ಗವು ಮೊದಲು ಪ್ರಕಟವಾದದ್ದು ಯಾವಾಗ ?

೨. ಕವಿರಾಜಮಾರ್ಗವನ್ನು ಲೇಖಕರಿಗೆ ಓದಿ ಹೇಳಿದವರು ಯಾರು ?

೩. ಆಂಟೋನಿಯೋ ನೆಬ್ರಿಜಾ ಯಾರ ಆಸ್ಥಾನದಲ್ಲಿದ್ದನು ?



೪. ನೆಬ್ರಿಜಾ ಯಾವ ಭಾಷೆಗೆ ವ್ಯಾಕರಣವನ್ನು ಬರೆದ ?

೫. ಕವಿರಾಜಮಾರ್ಗದ ಕರ್ತೃಗಳು ಯಾರು ?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಲೇಖಕರ ಪ್ರಕಾರ ಕವಿರಾಜಮಾರ್ಗಕ್ಕೂ ನಮಗೂ ಇರುವ ಕುತೂಹಲದ ಕೊಂಡಿ ಯಾವುದು ?

೨. ನೆಬ್ರಿಜಾ ಯಾರು ? ಆತನ ಸಾಧನೆ ಏನು ?

೩. 'ಕವಿರಾಜಮಾರ್ಗ' ಎಂಬ ಹೆಸರಿಗೆ ಈ ತನಕ ಕಲ್ಪಿತವಾಗಿರುವ ಅರ್ಥಗಳೇನು? ಅವುಗಳಿಗೆ ಲೇಖಕರು ಸೂಚಿಸಿರುವ ಇನ್ನೆರಡು ಅರ್ಥಗಳಾವುವು ?

೪. ಲೇಖಕರ ಪ್ರಕಾರ ಕೃತಿಯ ಶೀರ್ಷಿಕೆಯ ಮುಖ್ಯಾರ್ಥವನ್ನು ನಾವು ಗ್ರಹಿಸದಿರಲು ಕಾರಣವೇನು ?

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. 'ಕವಿರಾಜಮಾರ್ಗ'ವು ಈಚಿನ ಇತಿಹಾಸ ವಾಹಿನಿಯ ಮೇಲೆ ಬೆಳಕು ಚೆಲ್ಲುತ್ತಿದೆ ಎನ್ನುವುದಕ್ಕೆ ಲೇಖಕರು ಉದಾಹರಿಸಿರುವ ಘಟನೆಗಳಾವುವು?

೨. 'ಕವಿರಾಜಮಾರ್ಗ'ವು ಒಂದು ಅಸಾಧಾರಣ, ಅನನ್ಯ ಕೃತಿ ಎಂಬ ಲೇಖಕರ ಅಭಿಪ್ರಾಯವನ್ನು ವಿವರಿಸಿ.

೩. ಕವಿಕಾಯಕ–ರಾಜಕಾಯಕಗಳೆರಡರ ಜೋಡಿಯಾಗಿ ಕವಿರಾಜಮಾರ್ಗವು ಹೇಗೆ ನಿರ್ಮಿತವಾಗಿದೆ ?

***

# ೧೬. ನಮ್ಮ ಅಳತೆಯನ್ನು ಮೀರಲಾರದ ದೇವರು

**ಶಿವರಾಮ ಕಾರಂತ**

## ದೇವರ ಬೆಲೆ

ಎಲ್ಲ ಸಂಪ್ರದಾಯವಾದಿಗಳಂತೆ ನಾನೂ ಒಮ್ಮೆ, ಬದುಕಿನ ಬೆಲೆಯನ್ನು ತಗ್ಗಿಸಿ ದೇವರ ಬೆಲೆಯನ್ನು ಏರಿಸಿ ತಿಳಿದವನು. ಕೊನೆಗೆ ನನ್ನ ಅನುಭವಗಳು, ಈ ನನ್ನ ರೂಢಿಯ ನಂಬಿಕೆಗಳನ್ನು ಕುಲುಕಿಸುವ ಕಾಲ ಬಂದಿತು. ನಮ್ಮ ಬದುಕಿಗಿಂತ ಹಿರಿದಾದ ದೇವರು ನಮಗೆ ನಿಲುಕಲಾರನೆಂಬುದೇ– ನನ್ನ ತಿಳಿವು. ಈ ನಿರ್ಣಯಕ್ಕೆ ಕಾರಣವಾದ ವಿಚಾರಸರಣಿಯನ್ನು ಮುಂದುವರಿಸುತ್ತೇನೆ. ಮೊದಲಿಗೇನೇ– ನಾನು ಸಂಪ್ರದಾಯವಾದಿಗಳ ಕುಟುಂಬದಲ್ಲಿ ಜನಿಸಿದವನು– ಎಂದೆ. ನಮ್ಮ ಮನೆಯವರು ಸ್ಮಾರ್ತ ಬ್ರಾಹ್ಮಣರು. ಅದ್ವೈತಿಗಳಂತೆ ನಾವು ವಿಭೂತಿ ಹಚ್ಚುವವರು. ಇತ್ತ ಶಿವನಲ್ಲಿ ಭಕ್ತಿಯಿದೆ. ವಿಷ್ಣುವಿನಲ್ಲೂ ಭಕ್ತಿಯಿದೆ. ಶಿವರಾತ್ರಿಗೂ ಉಪವಾಸ, ಕೃಷ್ಣಾಷ್ಟಮಿಗೂ ಉಪವಾಸ. ನಮಗೆ ಕುಲದೇವರು ವಿಷ್ಣುವಿನ ಒಂದು ರೂಪ– ಲಕ್ಷ್ಮೀ ನೃಸಿಂಹ. ಹೆಸರಿಗೇನೋ ನಾವು ಅದ್ವೈತಿಗಳು, ಆದರೆ ಅದರಂತೆ ಜ್ಞಾನಪ್ರಧಾನವಾದ ತರ್ಕಸರಣಿ ನಮ್ಮವರದ್ದಲ್ಲ. ದೇವರನ್ನು ಕಾಣುವ ಬಗೆಯೆಲ್ಲವೂ ಭಕ್ತಿ ಮಾರ್ಗದ್ದೇನೆ. ಸೋಹಂ–ಬ್ರಹ್ಮ–ನೆಂಬ ದಿಟ್ಟತನ ನಮ್ಮ ಜನಗಳಲ್ಲಿ ಬೆಳೆದುಬಂದುದು ಕಾಣಿಸುವುದಿಲ್ಲ.

## ಗಾಂಧಿ, ರಾಮಕೃಷ್ಣರು

ನನ್ನ ಹುಡುಗತನದಲ್ಲಿ ಮತದ, ಇಲ್ಲವೆ ಭಕ್ತಿಯ ಯಾವ ವರ್ಚಸ್ಸೂ ನನ್ನ ಮೇಲಿರಲಿಲ್ಲ. ಎಲ್ಲ ಶಾಲೆಯ ಹುಡುಗರಂತೆ ನಾನೂ ಒಬ್ಬ. ಮುಂದೆ ತಾರುಣ್ಯದ ಎಳೆತನದಲ್ಲೇ ಕಾಲೇಜನ್ನು ಬಿಡುವ ಕಾಲ ಬಂತು. ಗಾಂಧೀಜಿಯವರ ರಾಜಕೀಯ ಕರೆಯೇ ಅದಕ್ಕೆ ಕಾರಣವಾಗಿತ್ತು. ಆ ಕರೆಯ ಒಲವು ರಾಜಕೀಯದ್ದಾಗಿದ್ದರೂ, ಅವರ ಪೂರ್ಣ ಆದರ್ಶದ ವರ್ಚಸ್ಸು ನನ್ನ ಮೇಲೆ ಬಿದ್ದಿತ್ತು. ಭಕ್ತಿಯ ಸುಳಿವು



ಬಲವಾಗಿತ್ತು. ಅದರಿಂದಾಗಿ ಗೀತೆಯ ಅಧ್ಯಯನವೂ ನನಗೆ ಪ್ರಿಯವಾಗುತ್ತ ಬಂದಿತು. ನನಗೆ ಗೀತೆ ಎಷ್ಟು ಅರ್ಥವಾಯಿತೋ, ಅದರಿಂದೇನು ತಿಳಿಯಿತೋ ಹೇಳಲಾರೆ– ಅಂತು ಅದನ್ನು ಕನ್ನಡಿಸುವ, ಕಂಠಪಾಠಿಸುವ ಪ್ರಯತ್ನವನ್ನೆಲ್ಲಾ ಮಾಡಿದ್ದೆ. ಇದೇ ವೇಳೆಯಲ್ಲಿ ರಾಮಕೃಷ್ಣ ಪರಮಹಂಸರ ಬರವಣಿಗೆಗಳ ಮೇಲೆ ನನ್ನ ದೃಷ್ಟಿ ಹರಿಯಿತು. ಅವರ ಭಕ್ತಿಜೀವನ ನನ್ನ ಮನಸ್ಸಿನ ಮೇಲೆ ತುಂಬಾ ಪರಿಣಾಮ ಮಾಡಿತು. ಇತ್ತ ಗಾಂಧೀತನ, ಅತ್ತ ರಾಮಕೃಷ್ಣರ ವರ್ಚಸ್ಸು ಇವುಗಳು, ನನ್ನಲ್ಲಿದ್ದ ನಂಬುಗೆಗಳ ಮೇಲೆ ಬಿದ್ದುದರ ಪರಿಣಾಮವಾಗಿ, 'ದೇವರನ್ನು ಕಾಣುವುದೇ ಮಾನವೀ ಜೀವನದ ಗುರಿಯೆಂದೂ, ಅದಕ್ಕೆ ಸಂಸಾರವು ವಿಘ್ನವೆಂದೂ, ಬ್ರಹ್ಮಚರ್ಯ ಜೀವನ, ಧ್ಯಾನ, ತಪಸ್ಸುಗಳು ಮುಖ್ಯ'ವೆಂದೂ ಒಮ್ಮೆಗೇ ನಿರ್ಣಯಿಸಿಬಿಟ್ಟೆ. ಇದು ನನ್ನ ತೀರ್ಮಾನವೆನ್ನುವ ಬದಲು, ನನ್ನ ಮನಸ್ಸು ತನ್ನ ಹಿಂದಿನ ರೂಢಿಯ ನಂಬಿಕೆಗಳಿಗೆ ಕೊಟ್ಟ ಒಪ್ಪಿತವೆಂದರೂ ಸರಿಯೆ.

## ಹಲವು ದೇವರುಗಳು

ಭಕ್ತಿಪಂಥದಲ್ಲಿ ಸವಿಯಿರುವ ನನಗೆ, ಯಾವ ದೇವನಾಗಬೇಕು? ಕುಲದೇವತೆಯಾದ ಲಕ್ಷ್ಮೀನರಸಿಂಹ ಮನಸ್ಸಿಗೆ ಎಂದೂ ಹಿಡಿದಿರಲಿಲ್ಲ. ಆ ಉಗ್ರ ರೂಪವಾಗಲೀ, ಲಕ್ಷ್ಮೀಸಂಜ್ಞಾರ್ಥವಾದ ಸಿರಿತನವಾಗಲೀ ನನಗೆ ಅಂದು ರುಚಿಸುವ ಸ್ಥಿತಿಯಲ್ಲಿರಲಿಲ್ಲ. ನಾವು ಶೈವರಾದರೂ ಶಿವನ ಯಾವುದೇ ರೂಪ, ಅವತಾರಗಳು ಮೋಹಕವಾಗಿ ಮನಸ್ಸಿನ ಮೇಲೆ ಮೂಡಿರಲಿಲ್ಲ. ನನ್ನ ಎಳೆತನದಲ್ಲಿ ಕೇಳಿದ ಹರಿಯ ಕತೆಗಳೇ ರಮಣೀಯವೆನಿಸಿದ್ದುವು. ಊರಿನ ಬಯಲಾಟಗಳಲ್ಲಿ ರಾಮ, ಕೃಷ್ಣರು– ಮನಸ್ಸಿನ ಮೇಲೆ ಮುದ್ರೆಯೊತ್ತಿದ್ದರು. ಮೇಲೆ, ನಮ್ಮ ಮನೆಯಲ್ಲಿ ಮಳೆಗಾಲದಲ್ಲಿ ಭಾಗವತ ಪ್ರವಚನದ ಪರಿಪಾಟವಿರುತ್ತಿತ್ತು. ಹೀಗಾಗಿ ಕೃಷ್ಣನ ಕತೆಗಳು ಆಕರ್ಷಿಸಿದ್ದವು. ಹೀಗಾಗಿ ನನ್ನ ಮನಸ್ಸು ದೇವರನ್ನು ನೆನೆಯುವಾಗ ರಾಮ, ಇಲ್ಲವೇ ಕೃಷ್ಣ– ಇವರಲ್ಲಿ ಒಬ್ಬರ ಕಲ್ಪನೆಯನ್ನು ತರುತ್ತಲಿತ್ತು. ಈ ವೇಳೆಯಲ್ಲೇ ಕೆಲವು ಸಾಮಾಜಿಕ ಪ್ರಶ್ನೆಗಳ ವಿಷಯವಾಗಿ ನನ್ನಲ್ಲಿ ಕ್ರಾಂತಿಗಳು ತಲೆಯೆತ್ತಿದುದರ ಫಲವಾಗಿ, ಏಕಾಗ್ರ ಚಿತ್ತತೆ ಬೆಳೆಸಲು ಪ್ರಾಣಾಯಾಮ ಸಾಧನ ಮಾಡಿದ್ದೆ; ಗಾಂಧೀಜಿಯವರ ಸಾಬರ್ಮತಿ ಆಶ್ರಮದಲ್ಲಿ ಕೆಲದಿನ ಇದ್ದುದರ ಫಲವಾಗಿ, ಅಲ್ಲಿನ ಭಜನೆಯ ರೀತಿಯು ಹಿತವಾಗಿ ಕಂಡಿತು. ಆದರೂ ದೇವರನ್ನು ಗುಲ್ಲೆಬ್ಬಿಸಿ ಎಚ್ಚರಿಸುವ 'ಸಪ್ತಾಹ ಮಾರ್ಗ' ಎಂದೂ ನನಗೆ ರುಚಿಸಿರಲಿಲ್ಲ.

## ಧ್ಯಾನ, ಭಜನೆ

ಇವೆರಡರ ಸಹಾಯದಿಂದ ನಾನು ದೇವರನ್ನು ಕುರಿತು ಚಿಂತಿಸಲು ಕಲಿತೆ. ನಿರ್ಜನಮಸಣ, ಅರಣ್ಯಗಳಲ್ಲಿ ಅಲೆದಾಡುತ್ತ, ಎಷ್ಟು ಮಿತ, ಶಾಂತಜೀವನ ಮಾಡಬಹುದೋ ಅದನ್ನು ಮಾಡುತ್ತ– ಮಿತವಾದ ಅನ್ನಪಾನ, ಆಚಾರಗಳಿಂದ ಸಾಧನೆ ತೊಡಗಿದೆ. ಹತ್ತು ವರ್ಷಗಳ ಕಾಲವಾದರೂ ನಾನು ಹೀಗೆ ದುಡಿದಿರಬೇಕು. ನನ್ನ ಬಹುಮಂದಿ ಗೆಳೆಯರಿಗೆ ಈ ನನ್ನ ಜೀವನ ಅಪರಿಚಿತವಾದುದು. ಏಕೆಂದರೆ– ಅಪರಿಚಿತ ಜನ, ನಾಡು, ನಗರಗಳಲ್ಲೇ ನಾನು ಈ ಕಾಲದಲ್ಲಿ ಬಹುವಾಗಿ ವಾಸ ಮಾಡುತ್ತಿದ್ದೆ. ಈ ಸಾಧನೆಯ ಪ್ರತಿಫಲವಾಗಿಯೇ ನನಗೆ ದೇವರ ಹುಚ್ಚು ಬಿಟ್ಟಿತು. ಅದರ ತೀರ್ಮಾನವನ್ನು ನನ್ನ ಗೆಳೆಯರ ಮುಂದಿರಿಸಿದ್ದಲ್ಲಿ ನನ್ನ ಮುಂದಿನ ವಾದಸರಣಿ ಸ್ಪಷ್ಟವಾದೀತೆಂದು ಹಾಗೆ ಮಾಡುತ್ತಿದ್ದೇನೆ.

## ಯಾವ ದೇವರು?

ತಾಸುತಾಸುಗಳ ತನಕ ನಾನು ಚಿಂತಿಸಿದ ದೇವರು ಯಾರು? ಕೆಲವೊಮ್ಮೆ ಭಾವನೆಯು ಉಕ್ಕಿ 'ದೇವರೇ ಕಾಣಿಸು' ಎಂದು ಕಣ್ಣೀರು ಕರೆದುದು ಯಾರ ಸಲುವಾಗಿ? ಅವನನ್ನು ಚಿಂತಿಸುವ ಗಳಿಗೆಯಲ್ಲೆಲ್ಲ– 'ರಾಮ', 'ಕೃಷ್ಣ' ಎಂಬುವಾಗಲೆಲ್ಲ, ನನ್ನ ಮನದ ಮುಂದೆ ಏನು ನಿಂತಿರುತ್ತಿತ್ತು? ನನ್ನ ದೇವರ ಔದಾರ್ಯದ ಗಾನ ಮಾಡುವಾಗ, ಯಾವ ಗುಣಗಳ ಕಲ್ಪನೆ ನನಗಾಗುತ್ತಿತ್ತು?– ಇವನ್ನೆಲ್ಲ ನಾನು ಯೋಚಿಸದೆ ಇರಲಿಲ್ಲ.

ನಾನು ಎಷ್ಟೂ ಚಿಂತಿಸಲಿ, ಹೇಗೂ ಚಿಂತಿಸಲಿ– ನನ್ನ ದೇವರು ನನ್ನ ಮಿತಿಯನ್ನು, ನನ್ನ ಜೀವನ ಅನುಭವಗಳ ಮಿತಿಯನ್ನು ಹೊರಗೆಡುವುದಾಗಿತ್ತು. ದೇವರ ಚೆಲುವು, ದೊಡ್ಡಸ್ತಿಕೆ, ಉದಾರಗುಣಗಳು ನಮ್ಮ ನಮ್ಮ ಅನುಭವಗಳ ಮಿತಿಯನ್ನು ದಾಟಲಾರದೆಂಬುವ ತಿಳುವಿಗೆ ನಾನು ಬರಬೇಕಾಯಿತು.

## ಶಬ್ದ

ನಮ್ಮ ಈಶ ಚಿಂತನೆಯು ಪ್ರಯತ್ನದಲ್ಲಿ ದೇವರ ರೂಪು, ಕೃತಿಗಳು, ಅವನ ಗುಣಗಳು ನಮ್ಮ ಚಿಂತನೆಗೆ ಗುರಿಯಾಗುವಾಗ ಅನೇಕ ಬಿಂಬಮಾಲೆಗಳು, ಅದನ್ನೇ ಪುಷ್ಟಿಗೊಳಿಸುವ ಮಾತುಗಳು, ಮನಸ್ಸಿನಲ್ಲಿ ಓಡಾಡುತ್ತವೆ. ದೇವರ ರೂಪನ್ನು ನಾವು ನೆನೆಯಲು ಯತ್ನಿಸುತ್ತೇವೆಂದು ತಿಳಿಯುವ. ಮನಸ್ಸು ಅವನಿಗೊಂದು ಚೆಲುವಿನ ಆಕೃತಿಯನ್ನು ಹೆಣೆಯುತ್ತದೆ. ಅವನ ವಿಷಯವಾದ ನಮ್ಮ ಕೇಳಿಕೆಗಳಲ್ಲಿ, 'ಅವನು ಮನುಷ್ಯರೂಪಿ'ಯಾಗಿದ್ದರೆ, ಸುಂದರ ಮನುಷ್ಯನೊಬ್ಬನು ನಮಗೆ ಇದಿರಾಗುತ್ತಾನೆ. ಎಷ್ಟು ಸುಂದರನವನು? ಆಗ– ರವಿವರ್ಮನ ಒಂದು ಚಿತ್ರಬಿಂಬವೋ, ಒಂದು ಶಿಲ್ಪದಲ್ಲಿ ಕಂಡ ಬಿಂಬವೋ, ನಾಟಕ ಮಂಡಲದಲ್ಲಿ ಕೃಷ್ಣನ ಭೂಮಿಕೆಯನ್ನು ವಹಿಸಿದ ಹುಡುಗನ ಬಿಂಬವೋ ಬರುತ್ತದೆ. ದೇವರ ಉಡುಪು ತೊಡುಪುಗಳು ನಮ್ಮ ಪರಿಚಿತ ಆವರಣದಿಂದಲೇ ಅಲ್ಲಿಗೆ ಬಂದು ಸೇರಬೇಕು. ಅವನ ವರ್ಣನೆಯಲ್ಲಿ ನಾವು ಕಂಡಿರದ ಆಭರಣದ ಹೆಸರೊಂದಿದ್ದರೆ 'ವತ್ಸಲಾಂಛನ' ಎಂದಿದ್ದರೆ, ಅದು ಬರುವುದಿಲ್ಲ. ಬದಲು ನಮಗೆ ನಿತ್ಯ ಜೀವನದಲ್ಲಿ ಪರಿಚಿತವಾದ ತೋಡಾ, ವಂಕಿ, ಸರಿಗೆ, ಸರ, ಕಿರೀಟ, ಪೀತಾಂಬರ– ಇವುಗಳು ಬಂದು ಸೇರುತ್ತವೆ. ಇವುಗಳನ್ನು ಕಾಣದಿದ್ದಲ್ಲಿ, ಇವುಗಳ ನಕಲಿಗಳು ಬೇರೊಂದು ಚಿತ್ರದಿಂದಲೋ, ಶಿಲ್ಪದಿಂದಲೋ, ನಟನ ಉಡುಗೆಯಿಂದಲೋ ಬಂದು ಕುಳಿತಿರಬೇಕಾಗುತ್ತದೆ.



## ಅನುಭವದ ಮಿತಿ

ನನ್ನ ನಿತ್ಯಜೀವನದ ನೋಟದಲ್ಲಿ ರವಿವರ್ಮನ ಕೃಷ್ಣ. ನಾಟಕ ಮಂಡಲದ ಕೃಷ್ಣನು ಮಾತ್ರ ಪರಿಚಿತರಾಗಿದ್ದರೆ, ಆಗ ಅವರು ಮಾತ್ರ ನನ್ನ ಧ್ಯಾನದ ಎಟುಕಿಗೆ ಸಿಗುವಂತಹರಾಗುತ್ತಾರೆ. ಒಂದೆರಡು ಶಿಲ್ಪವನ್ನೋ, ನಂದಲಾಲರ ಚಿತ್ರಗಳನ್ನೋ ನಾನು ಕಂಡಿರಲು ಅವುಗಳಾದರೂ ಬಂದಾವು. ಬದಲು, ನಾನೇ ನಂದಲಾಲರಂತೆ ಕೃಷ್ಣನನ್ನು ಕಟ್ಟಹೋದರೋ– ಒಂದಿಲ್ಲೊಂದು ಮನುಷ್ಯ ವಿಗ್ರಹ, ನನ್ನ ಹಳೆಯ ಅನುಭವಗಳ ವಿಶೇಷಪಾಕದಿಂದ ಉದ್ಭವಿಸಬೇಕು. ನಿತ್ಯಜೀವನದಲ್ಲಿ ನಾನು ಎಷ್ಟೆಷ್ಟು ಸುಂದರಕಾಯರನ್ನು ಕಂಡಿರುತ್ತೇನೆಯೋ ಅಷ್ಟಷ್ಟು ಸುಂದರ ಕೃಷ್ಣ–ರಾಮರನ್ನು ಮಾತ್ರ ನಾನು ಕಾಣಲು ಶಕ್ಯ. ನನ್ನ ಊಹಾಬಲವನ್ನು ನಾನು ಆದರಿಸುವವನಾದರೆ, ಈ ಅನುಭವಕ್ಕಿಂತ ಬರಿಯ ಒಂದು ಹೆಜ್ಜೆ ಮುಂದುವರಿದು– ಒಂದು ರೂಪದ ಕೈ, ಒಂದು ಮುಖ, ಒಂದರ ಅರಿವೆ, ಮತ್ತೊಂದೆರಡು ಹೊಸ ಒಡವೆಗಳನ್ನು ಕಟ್ಟಿ ಸೇರಿಸಬಹುದು. ಒಟ್ಟಿನಲ್ಲಿ ನನ್ನ ರೂಪಾನುಭವಗಳ ಮಿತಿಯಿಂದ ನನ್ನ ದೇವರ ರೂಪವು ಮಿತಿಗೊಳ್ಳುವುದಾಯಿತು.

## ಗುಣ ಚಿಂತನೆ

ಇನ್ನು ಭಜನೆಯಿಂದಲೋ ಕೇಕೆಯಿಂದಲೋ ಪರಿಣಾಮಗೊಂಡ ಮನಸ್ಸು ದೇವರ ಗುಣಾತಿಶಯವನ್ನು ಎಣಿಸಹೋದರೆ ಅದರ ಚಳಕ ಮತ್ತಷ್ಟೂ ಕಡಿಮೆ.

ಬಿಂಬಗಳು ಮಾಡಲಾರದ ಹಲವು ಕೆಲಸಗಳಿವೆ; ಶಬ್ದಗಳು ಅದನ್ನು

ಪೂರೈಸಬೇಕಾಗುತ್ತದೆ. ದೇವರ ಗುಣಾತಿಶಯಗಳನ್ನು ಕುರಿತು ಚಿಂತಿಸುತ್ತೇವೆ– ಎಂದು ತಿಳಿಯಿರಿ. ಆಗ ಔದಾರ್ಯ, ಪ್ರೇಮ ಮೊದಲಾದುವುಗಳು ಮಾತುಗಳು ನಮಗೆದುರಾಗುತ್ತವೆ. ಅವುಗಳನ್ನು ಕುರಿತು ಇನ್ನಷ್ಟು ವಿಚಾರ ಮಾಡಿದಲ್ಲಿ– ಪ್ರೀತಿಸುವ ಜನಗಳ, ತಾಯ್ತಂದೆಗಳ ಚಿತ್ರವೋ, ಉದಾರಿಗಳ ಕೃತಿಯ ಬಿಂಬವೋ ಎದುರಾಗುತ್ತದೆ. ಹೀಗೆ ಯಾವ ಬಗೆಯಿಂದ ನಾವು ಚಿಂತನೆ ಮಾಡುತ್ತಾ ಹೋದರು– ಆಗ ನಮ್ಮ ನಿತ್ಯ ಜೀವನದ ಒಂದೊಂದು ಅನುಭವವೂ ಈ ಬಿಂಬಗಳ ರಚನೆಗೆ ಕಾರಣವಾಗುತ್ತದೆ. ನಾವು ಕಂಡ ಉದಾರಿಗಳ ಮೇಲಿಂದ, ದೇವರ ಔದಾರ್ಯದ ಕಲ್ಪನೆಯಾಗಬೇಕು. ನಾವು ಸವಿದ, ಕಂಡ, ಪ್ರೇಮದ ನೋಟಗಳಿಂದ, ದೇವರ ಪ್ರೇಮದ ನೋಟ ಕೆರಳಬೇಕು. ಈ ರೀತಿ ಅನುಭವದಿಂದ ನಿಲ್ಲಲಾರದ ಯಾವತ್ತೂ ಗುಣರೂಪಣೆಗಳು, ಬರಿಯ ಶಬ್ದಗಳಾಗಿಯೇ ಉಳಿಯುತ್ತವೆ. ಕೇವಲ ಅರ್ಥವಿಲ್ಲದೆ ಶಬ್ದಗಳಿಗೂ ಅದಕ್ಕೂ ವ್ಯತ್ಯಾಸ ಉಳಿಯುತ್ತದೆ.

## ವಿಸ್ತೃತ ಜೀವನದಿಂದ

ನಾವು ಕೃಷ್ಣನ ಮಧುರಭಾವವನ್ನು ಧ್ಯಾನಿಸುವಾಗ, ಅದರ ನೆಲೆಗಟ್ಟು ನಾವು ಕೇಳಿದ ಕತೆಗಳ ಮೇಲೆ ನಿಲ್ಲಬೇಕಾಗುತ್ತದೆ. ರಾಧಾಕೃಷ್ಣರ ಕತೆ ನಮಗೆ ತಿಳಿದುದಾದರೂ, ಅದರ ಮಧುರಭಾವವೇನೆಂದು ಕಲ್ಪಿಸುವಾಗ, ನಾವು ಕಂಡ ಉತ್ತಮ ದಾಂಪತ್ಯಜೀವನದ ನೆನಪೇ ಅದನ್ನು ಬಿಂಬಿಸಬೇಕು. ರಾಮನ ಶೌರ್ಯವು ನಾವು ಜೀವನದಲ್ಲಿ ಕಂಡ ಜೀವನದ ಯಾವುದಾದರೊಂದು ಶೂರಕೃತಿಯಿಂದ ಬಿಂಬಿತವಾಗಬೇಕು. ಆದರೆ ನಾವು ಮೂಲತಃ ಸುಂದರವಾದ ದಾಂಪತ್ಯವನ್ನು, ಶೂರತನದ ಯಾವ ಕೃತಿಗಳನ್ನೂ ಕಾಣದವರಾಗಿದ್ದರೆ– ಆಗ ಕೃಷ್ಣನ ಮಧುರಭಾವ, ರಾಮನ ಶೌರ್ಯಗಳು ಬರಿಯ ಸದ್ದುಗಳಾಗಿಯೇ ಉಳಿಯುತ್ತವೆ. ಹುಟ್ಟು ಕಿವುಡನೊಬ್ಬನು ಕೃಷ್ಣನ ಕೊಳಲಗಾನದ ಕಲ್ಪನೆ ಮಾಡಲಾರನು. ಕಿವಿಯುಳ್ಳವನು ಸಹ, ಕೃಷ್ಣನ ಕೊಳಲ ಸವಿಯನ್ನು ನೆನೆಯಲು ಹೋದರೆ, ಜೀವನದಲ್ಲಿ ಕೇಳಿದ ಏನಾದರೊಂದು ಕೊಳಲಗಾನದಿಂದಲೇ ಅದು ಬಿಂಬಿತವಾಗಬೇಕಾಗುತ್ತದೆ. ಹೀಗೆ ನಮ್ಮ ಜೀವನದ ಅನುಭವವು ಎಷ್ಟೆಷ್ಟು ವಿಸ್ತೃತವಾಗುವುದೋ ಅಷ್ಟು ಹೆಚ್ಚಿಗೆ ನಮ್ಮ ಭಾವನೆಯು ಕೆರಳಲು, ಬೆಳೆಯಲು ಸಫಲವಾಗಲು ಅನುಕೂಲವಾಗುತ್ತದೆ.

## ಜೀವನ ಮುಖ್ಯ

ಇದರಿಂದ ನನಗೆ ಹೊಳೆದ ಮುಖ್ಯವಾದೊಂದು ವಿಷಯವೆಂದರೆ ನಮ್ಮ ಬದುಕೇ ನಮ್ಮ ಭಾವನೆಗಳಿಗೆ ಅಡ್ಡಿಗಲ್ಲು. ನಮ್ಮ ದೇವರು ಭಾವನೆಗಳಲ್ಲಿ ದೊಡ್ಡವನಾಗುವುದಕ್ಕೆ,



ಜೀವನ ದೊಡ್ಡದಾಗಬೇಕೆಂದು, ಎಷ್ಟು ಸವಿಯಾದ ಸವಿಸ್ತಾರವಾದ ಜೀವನದ ಹಿನ್ನೆಲೆಯು ನಮಗಿರುತ್ತದೋ ಅಷ್ಟು ವಿಸ್ತಾರವಾದ ದೇವನು ನಮಗೆ ಇದಿರಾಗುತ್ತಾನೆ. ದೇವರು ನಮ್ಮ ಅನುಭವಗಳ ಮಿತಿಗೆ ಒಳಗಾಗಿರಲು, ಅನುಭವಗಳನ್ನು ನಿರಾಕರಿಸುವ ಸಿದ್ಧಾಂತ ನನಗೆ ಸಲ್ಲದೆನ್ನಿಸಿತು. ಜೀವನದಿಂದಲೇ ದೇವರು ಉದ್ಭವಿಸಬೇಕು, ಬೆಳೆಯಬೇಕು, ಹಿರಿಯನಾಗಬೇಕು. ಎಷ್ಟು ಎಷ್ಟು ಜೀವನ ಹಿರಿದೋ, ಅಷ್ಟು ಅಷ್ಟು ದೇವರು ಹಿರಿಯ. ಆದುದರಿಂದಲೇ ದೇವರಿಗಿಂತ ಜೀವನ ದೊಡ್ಡದು. ಅದೇ ದೇವರ ಮೂಲ.

## ಇಲ್ಲಿಂದ ತಪೋರಾಜ್ಯಕ್ಕೆ

ಅಮಾವಾಸ್ಯೆಯ ಕಗ್ಗತ್ತಲ್ಲಲ್ಲಿ, ಬಾನಿಗೆ ಮುಖ ಮಾಡಿಕೊಂಡು ಮಲಗಿರುತ್ತ, ಚುಕ್ಕಿಗಳ ವಿಸ್ತಾರ ರಾಜ್ಯವನ್ನು ನೋಡುತ್ತಿರಲು ಭ'ವ್ಯ ಶಾಂತಿಯು ಅನುಭವವಾಗುವುದಿಲ್ಲವೇ? ಕಡಲಿನ ಮಳಲ ದಂಡೆಯ ಮೇಲೆ ಕುಳಿತು ದಿಗಂತದ ಹರಹನ್ನೆಲ್ಲ ತುಂಬುವ ಸಾಗರದ ನೀಲಿಮತೆಯನ್ನು ಕಂಡರೆ ಎದೆಯು ತುಂಬುವುದಿಲ್ಲವೇ? ಬಾನನ್ನು ಮುಟ್ಟುವ ಬೆಟ್ಟದ ಇದಿರಿನಲ್ಲಿ ನಿಂತು, ಅದರ ಉನ್ನತಿಯನ್ನು ನೆನೆಯುತ್ತಿದ್ದರೆ ಮನಸ್ಸಿಗೆ ಯಾವುದೋ ಒಂದು ಬಗೆಯ ಗಂಭೀರ ಶಾಂತಿಯ ಬೋಧೆಯಾಗುವುದಿಲ್ಲವೇ? ಸೃಷ್ಟಿಯ ಅಪಾರತೆಯನ್ನು ಅನುಪಮತೆಯನ್ನು ನೋಡಬಲ್ಲ ಕಣ್ಣನ್ನು ಬೆಳೆಸಿಕೊಂಡಲ್ಲಿ ನಾವು ಶಾಂತಿಯನ್ನು ಹೊಂದಲಾರೆವೇ? ಒಮ್ಮೆ ಪಡೆದ ಅಂಥ ಅನುಭವಗಳನ್ನು ನೆನೆದಾಗಲೆಲ್ಲ ಅದೇ ಭವ್ಯತೆಯ ಪುನರ್‌ಸೃಷ್ಟಿ ಮನದ ಎದುರಿಗೆ ನಿಂತು ಆನಂದವನ್ನುಂಟು ಮಾಡುತ್ತದೆ; ಶಾಂತಿಯನ್ನು ಕೊಡುತ್ತದೆ. ಜೀವನದ ವಿಸ್ತಾರವಾದ ಯಾವುದೊಂದು ನೋಟವು ಸಣ್ಣಪುಟ್ಟ ವಿಷಯಗಳಿಂದ ನಮ್ಮ ಮನಸ್ಸನ್ನು ಸೆಳೆದು, ಇನ್ನಾವುದೋ ಭವ್ಯತೆಯ ದರ್ಶನ ಮಾಡಿಸಿಕೊಡಬಲ್ಲುದು. ಈ ಬಗೆಯ ಸೊಗಸು ಆನಂದ ಶಾಂತಿಗಳು, ಗೀತ ಭಜನೆಗಳಿಂದ ದೊರಕುವ ಶಾಂತಿಗೆ ಕಡಿಮೆಯಾದುವಲ್ಲ. ದೈವಚಿಂತನೆಯಿಂದಲೂ ಮನಸ್ಸು ಹೆಚ್ಚಿನ ಶಾಂತಿಯನ್ನು ಪಡೆಯಲು ಪ್ರಕೃತಿಯ ಅನೇಕ ಭವ್ಯ ವಸ್ತುಗಳ, ಅನುಪಮ ಸೊಗಸುಗಳ ಪರಿಚಯ ನಮಗಾಗಿರಬೇಕು. ಬರಿಯ ಚಂದನದ ಗೊಂಬೆಗಿಂತ ಹೆಚ್ಚಿನ ಸುಂದರ ಒಡವೆಯನ್ನು ಕಾಣದವನು ದೈವಮೂರ್ತಿಯ ಭವ್ಯ ಸೊಗಸಿನ ಕಲ್ಪನೆಯನ್ನು ತಂದುಕೊಳ್ಳುವುದಕ್ಕೆ ಅಶಕ್ತನಾಗುತ್ತಾನೆ. ಸೃಷ್ಟಿಯ ಸವಿಯುಲಿಗಳ, ಇಂಚರಗಳ ಪರಿಚಯ ಪಡೆಯದವನು, ದೈವವಾಣಿಯ ಸವಿಯನ್ನು ತಂದುಕೊಳ್ಳಲಾರನು. ಇಲ್ಲಿ ಬೆಳೆದ ಬದುಕಿನ ಮೇಲಿಂದಲೇ ನಮ್ಮ ತಪೋರಾಜ್ಯದ ಬದುಕು ಬೆಳೆಯಬೇಕು. ಇಲ್ಲಿಯ ಬದುಕು ನೀರಸತೆ ನಿರ್ಗಂಧತೆಗಳ ಮೇಲೆ ಕಟ್ಟಲ್ಪಟ್ಟುದಾದರೆ ತಪೋ ರಾಜ್ಯದ ಸವಿಯು ಮಸಣದ ಪ್ರತೀಕವಾಗಬಹುದು.

ವಿಸ್ತೃತವಾದ ಬದುಕಿನ ಪರಿಚಯವು ಜೀವನಕ್ಕೆ ತಂದುಕೊಡಲಾರದ ಸುಖವನ್ನು

ಬದುಕಿನಿಂದ ಹಿಂದೆಗೆದ ಮನಸ್ಸಿನ ಮನಸ್ಸಿನ ತಪಸ್ಸೂ ತಂದುಕೊಡಲಾರದು. ಇಹದ ರೂಪ, ರಸ, ಗಂಧಗಳು ಅಡಿಗಲ್ಲಾಗಿ ದೊರೆಯದೆ ಹೋದರೆ, ಅದರ ಮೇಲೆ ಯಾವೊಂದು ಸೊಗದ, ಸವಿಯ 'ಪರ'ವನ್ನು ನಾವು ಕಟ್ಟಲಾರೆವು.

## ಲೇಖಕರ ಪರಿಚಯ

**ಶಿವರಾಮ ಕಾರಂತ** [೧೯೦೨–೧೯೯೭]

**'ಕಡಲತಡಿಯ ಭಾರ್ಗವ', 'ನಡೆದಾಡುವ ವಿಶ್ವಕೋಶ'** ಎಂದೇ ಪ್ರಸಿದ್ಧರಾಗಿದ್ದ ಕೋಟ ಶಿವರಾಮ ಕಾರಂತರು ಕನ್ನಡ ನಾಡು ಕಂಡ ಅಪರೂಪದ ಬಹುಮುಖ ಪ್ರತಿಭೆ. ಕವಿ, ಕಾದಂಬರಿಕಾರ, ನಾಟಕಕಾರ, ಅನುವಾದಕ, ವೈಜ್ಞಾನಿಕ ಬರಹಗಾರ, ಚಿತ್ರಕಾರ ಎಲ್ಲವೂ ಆಗಿದ್ದ ಕಾರಂತರು ಕೈಯಾಡಿಸದಿದ್ದ ಕ್ಷೇತ್ರವೇ ಇಲ್ಲ. ಮೂಕಜ್ಜಿಯ ಕನಸುಗಳು, ಚೋಮನದುಡಿ, ಅಳಿದ ಮೇಲೆ ಮುಂತಾದ ನಲವತ್ತು ಕಾದಂಬರಿಗಳು; ಗರ್ಭಗುಡಿ, ಮುಕ್ತದ್ವಾರ ಮುಂತಾದ ನಾಟಕಗಳು; ಗ್ನಾನ, ಮೈಲಿಕಲ್ಲಿನೊಡನೆ ಮಾತುಕತೆಗಳು, ಹಳ್ಳಿಯ ಹತ್ತು ಸಮಸ್ತರು ಮೊದಲಾದ ಪ್ರಬಂಧ ಸಂಕಲನಗಳು; ಅಪೂರ್ವ ಪಶ್ಚಿಮ, ಅರಸಿಕರಲ್ಲ, ಅಬುವಿನಿಂದ ಬೂಮಕ್ಕೆ ಇತ್ಯಾದಿ ಪ್ರವಾಸ ಕೃತಿಗಳು ಶಿವರಾಮ ಕಾರಂತರ ಹೆಸರನ್ನು ಚಿರಸ್ಥಾಯಿಯಾಗಿಸಿವೆ. ಚಲನಚಿತ್ರ, ಪರಿಸರ ಚಳುವಳಿ, ರಾಜಕಾರಣ, ಯಕ್ಷಗಾನ ಮುಂತಾದ ಕ್ಷೇತ್ರಗಳಲ್ಲಿಯೂ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು. ಪದ್ಮಭೂಷಣ, ಪಂಪಪ್ರಶಸ್ತಿ ಮುಂತಾದವುಗಳಿಂದ ಹಿಡಿದು ಜ್ಞಾನಪೀಠದವರೆಗೆ ಹಲವಾರು ಗೌರವಗಳಿಗೆ ಕಾರಂತರು ಗೌರವ ತಂದುಕೊಟ್ಟವರು. ಇಲ್ಲಿ ಮೂಲ ಲೇಖನದ ಸಂಕ್ಷೇಪಿತ ರೂಪವನ್ನು ನೀಡಲಾಗಿದೆ.

## ಶಬ್ದಾರ್ಥ ವಿವರಣೆ

ವರ್ಚಸ್ಸು– ಪ್ರಭಾವ; ವಿಘ್ನ– ಅಡ್ಡಿ; ಗುಲ್ಲು–ಗದ್ದಲ; ಬಿಂಬ– ಪ್ರತಿರೂಪ, ಮೂರ್ತಿ; ಗಂಧ–ವಾಸನೆ; ರಸ–ರುಚಿ; ತೋಡಾ–ಮುಂಗೈಗೆ ತೊಡುವ ಒಂದು ಆಭರಣ; ವಂಕಿ–ತೋಳುಬಂದಿ; ಸರಿಗೆ– ಒಂದು ಆಭರಣ; ಚಳಕ–ಚಟುವಟಿಕೆ, ತೀವ್ರತೆ; ಅತಿಕರಿಸು– ಅತಿಯಾಗಿ ಮಾಡು, ತ್ವಚೆ– ಚರ್ಮ.

## ೧. ಸಂದರ್ಭ ಸಹಿತ ವಿವರಿಸಿ

೧. ಈ ಸಾಧನೆಯ ಪ್ರತಿಫಲವಾಗಿಯೇ ನನಗೆ ದೇವರ ಹುಚ್ಚು ಬಿಟ್ಟಿತು.

೨. ನನ್ನ ರೂಪಾನುಭವಗಳ ಮಿತಿಯಿಂದ ನನ್ನ ದೇವರ ರೂಪವು ಮಿತಿಗೊಳ್ಳುವುದಾಯಿತು.



೩. ಹುಟ್ಟು ಕಿವುಡನೊಬ್ಬ ಕೃಷ್ಣನ ಕೊಳಲಗಾನದ ಕಲ್ಪನೆ ಮಾಡಲಾರನು.

೪. ನಮ್ಮ ಬದುಕೇ ನಮ್ಮ ಭಾವನೆಗಳಿಗೆ ಅಡಿಗಲ್ಲು.

೫. ದೇವರಿಗಿಂತ ಜೀವನ ದೊಡ್ಡದು.

## ೨. ನೇರ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ತಾವು ಎಂತಹ ಕುಟುಂಬದಲ್ಲಿ ಜನಿಸಿದವರು ಎಂದು ಲೇಖಕರು ಹೇಳುತ್ತಾರೆ?

೨. ನಮ್ಮ ಜನಗಳಲ್ಲಿ ಏನು ಬೆಳೆದು ಬಂದುದು ಕಾಣಸಿಗುವುದಿಲ್ಲ ?

೩. ಲೇಖಕರಿಗೆ ಎಳೆಯತನದಲ್ಲಿ ಯಾರ ಕತೆಗಳು ರಮಣೀಯವೆನಿಸಿದ್ದವು ?

೪. ಬಿಂಬಗಳು ಮಾಡಲಾರದೆ ಕೆಲಸಗಳನ್ನು ಯಾವುವು ಮಾಡುತ್ತವೆ ?

೫. ನಮ್ಮ ಭಾವನೆಗಳಿಗೆ ಅಡಿಗಲ್ಲು ಯಾವುದು ?

## ೩. ಸಂಕ್ಷಿಪ್ತ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ತಮ್ಮ ಕುಟುಂಬದ ಹಿನ್ನೆಲೆಯ ಬಗ್ಗೆ ಕಾರಂತರು ನೀಡಿರುವ ವಿವರಗಳನ್ನು ಸಂಗ್ರಹಿಸಿ.

೨. ಗಾಂಧೀಜಿ, ರಾಮಕೃಷ್ಣ ಪರಮಹಂಸರ ಪ್ರಭಾವ ಲೇಖಕರ ಮೇಲೆ ಬೀರಿದ ಪರಿಣಾಮವೇನು ?

೩. ನರಸಿಂಹ, ಶಿವ, ರಾಮ–ಕೃಷ್ಣರ ಬಗೆಗೆ ಲೇಖಕರಿಗಿದ್ದ ಭಾವನೆಗಳಾವುವು?

೪. ದೇವರ ರೂಪವನ್ನು ನಾವು ನೆನೆಯಲು ಯತ್ನಿಸಿದಾಗ ಆಗುವುದೇನು?

೫. ದೇವರ ಗುಣಚಿಂತನೆಯ ಇತಿಮಿತಿಗಳೇನು?

## ೪. ವಿವರವಾದ ಉತ್ತರವನ್ನು ಬಯಸುವ ಪ್ರಶ್ನೆಗಳು

೧. ಲೇಖಕರು ತಮ್ಮ ಬಾಲ್ಯ ಮತ್ತು ಯೌವನದ ದಿನಗಳಲ್ಲಿ ದೇವರನ್ನು ಕುರಿತು ನಡೆಸಿದ ಚಿಂತನೆ–ಪ್ರಯೋಗಗಳನ್ನು ವಿವರಿಸಿ.

೨. ದೇವರರೂಪ ಮತ್ತು ಗುಣಗಳ ಚಿಂತನೆಯು ನಮ್ಮ ಅನುಭವದ ಮಿತಿಯನ್ನು ಮೀರಲಾರವು ಎಂದು ಲೇಖಕರು ವಿವರಿಸಿರುವ ಬಗೆ ಹೇಗೆ ?

೩. 'ಬದುಕೇ ನಮ್ಮ ಭಾವನೆಗಳಿಗೆ ಅಡಿಗಲ್ಲು' ಎಂಬ ಲೇಖಕರ ವಾದವನ್ನು ವಿಮರ್ಶಿಸಿ.

***

# ಭಾಷಾಭ್ಯಾಸ

## ೧. ಕಠಿಣಪದಗಳ ಅರ್ಥ

ಯಾವುದೇ ಒಂದು ಸಾಹಿತ್ಯ ಕೃತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಅದರಲ್ಲಿ ಬಳಕೆಯಾಗಿರುವ ಪದಗಳ ಅರ್ಥವನ್ನು ಗ್ರಹಿಸಬೇಕಾದ್ದು ಅತ್ಯಗತ್ಯ. ಅವುಗಳಲ್ಲಿ ಕೆಲವು ಸರಳವಾಗಿ ಅರ್ಥವಾಗುವಂತಹವುಗಳಾದರೆ ಮತ್ತೆ ಕೆಲವು ತಕ್ಷಣಕ್ಕೆ ತಮ್ಮ ಅರ್ಥವನ್ನು ಬಿಟ್ಟುಕೊಡುವುದಿಲ್ಲ. ಅಂತಹ ಕಠಿಣಪದಗಳಿಗೆ ಅರ್ಥವನ್ನು ನಿಘಂಟುಗಳನ್ನು ಪರಿಶೀಲಿಸುವುದರ ಮೂಲಕ ಅಥವಾ ಅಧ್ಯಾಪಕರ ನೆರವಿನಿಂದ ತಿಳಿಯಿರಿ. ಪ್ರತಿ ಪದ್ಯ/ಪಾಠದ ಕಡೆಯಲ್ಲಿ ಕೆಲವು ಕಠಿಣಪದಗಳಿಗೆ ಅರ್ಥವನ್ನು ನೀಡಿದೆ. ಅವುಗಳನ್ನು ಅಭ್ಯಾಸ ಮಾಡಿ.

## ೨. ದ್ವಿರುಕ್ತಿಗಳು ಮತ್ತು ಅನುಕರಣಾವ್ಯಯಗಳು

ನಾವು ದಿನನಿತ್ಯ ಬಳಸುವ ಪದಗಳಲ್ಲಿ ಅನೇಕ ದ್ವಿರುಕ್ತಿಗಳಿರುತ್ತವೆ. ಎರಡು ಬಾರಿ ಒಂದೇ ಪದವನ್ನು ಉಚ್ಚರಿಸುವುದನ್ನು ದ್ವಿರುಕ್ತಿಗಳೆನ್ನಬಹುದು. ಸರಸರ, ಫಳಫಳ, ಝುಳಝುಳ, ಢಣಢಣ – ಮುಂತಾದವು ದ್ವಿರುಕ್ತಿಗಳಂತೆ ತೋರುವುದಾದರೂ ಇವೆಲ್ಲವೂ ಅನುಕರಣಾವ್ಯಯಗಳು. ಬಹುಜನರಿಗೆ ಅನುಕರಣಾವ್ಯಯ ಮತ್ತು ದ್ವಿರುಕ್ತಿಗಳ ನಡುವಿನ ಅಂತರವೇ ಗೊತ್ತಿರುವುದಿಲ್ಲ. ಒಂದರ ಸ್ಥಾನದಲ್ಲಿ ಮತ್ತೊಂದನ್ನು ಹೆಸರಿಸುತ್ತಿರುತ್ತೇವೆ. ಕೇಳಿದ ಯಾವುದೇ ಧ್ವನಿಯನ್ನು ಅನುಕರಿಸುವ ಶಬ್ದಗಳೇ ಅನುಕರಣಾವ್ಯಯಗಳು. ಉದಾ : ಚಟಚಟ, ಪಟಪಟ, ಧಗಧಗ, ಇತ್ಯಾದಿ. ಇವೆಲ್ಲವೂ ಎರಡೆರಡು ಬಾರಿ ಉಕ್ತಗೊಳ್ಳುತ್ತವಾದರೂ ಇವು ದ್ವಿರುಕ್ತಿಗಳಲ್ಲ.

"ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನೋ, ಒಂದು ವಾಕ್ಯವನ್ನೋ ಎರಡೆರಡು ಸಲ ಪ್ರಯೋಗ ಮಾಡುವುದಕ್ಕೆ ದ್ವಿರುಕ್ತಿಯೆನ್ನುವರು."

ಉದಾಹರಣೆ : ೧. ಅವಳು <u>ಬೇಗಬೇಗ</u> ನಡೆದು ಬರುತ್ತಿದ್ದಳು.

೨. ಅವರ ಬಳಿ <u>ದೊಡ್ಡದೊಡ್ಡ</u> ಗ್ರಂಥಗಳಿದ್ದವು.

೩. ನೀನು <u>ಓಡಿಓಡಿ</u> ಬಂದಂತಿದೆ.



ಮೇಲಿನ ಉದಾಹರಣೆಗಳಲ್ಲಿ ಅಡಿಗೆರೆ ಎಳೆದಿರುವ ಪದಗಳೆಲ್ಲವನ್ನೂ ಎರಡೆರಡು ಬಾರಿ ಪ್ರಯೋಗಿಸಿರುವುದನ್ನು ಗಮನಿಸಬಹುದು. ದ್ವಿರುಕ್ತಿಗಳ ಪ್ರಯೋಗದಿಂದ ಭಾವನೆಗಳ ಅಭಿವ್ಯಕ್ತಿಗೆ ಪುಷ್ಟಿ ದೊರೆಯುತ್ತದೆ ಮತ್ತು ಕೇಳುಗರ ಮನಸಿನ ಮೇಲೆ ಪರಿಣಾಮ ಉಂಟಾಗುತ್ತದೆ.

ಕೆಲವು ವಿಶೇಷ ರೂಪಗಳನ್ನು ಗಮನಿಸಿ :

೧. ಮೊತ್ತಮೊದಲು = ಮೊದಲು + ಮೊದಲು

೨. ಕಟ್ಟಕಡೆಗೆ, ಕಡೆಕಡೆಗೆ = ಕಡೆಗೆ + ಕಡೆಗೆ

೩. ಕೊನೆಕೊನೆಗೆ = ಕೊನೆಗೆ + ಕೊನೆಗೆ

೪. ಹೊಚ್ಚಹೊಸದು = ಹೊಸದು + ಹೊಸದು

೫. ಹಸಿಹಸಿರು = ಹಸಿರು + ಹಸಿರು

೬. ತುತ್ತತುದಿ = ತುದಿ + ತುದಿ

**ಅಭ್ಯಾಸ ೧: ಕೆಳಗಿನ ದ್ವಿರುಕ್ತಿಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.**

ನಡೆನಡೆದು, ಪರಿಪರಿಯಾಗಿ, ಹೌದುಹೌದು, ನೋಡುನೋಡು, ಕುಣಿಕುಣಿದು, ತುತ್ತತುದಿ, ಬಿದ್ದೂಬಿದ್ದೂ, ನಡುನಡುವೆ, ಬರೆಬರೆದು, ಮೆಲ್ಲಮೆಲ್ಲನೆ.

**ಅಭ್ಯಾಸ ೨ : ಕೆಳಗಿನವುಗಳನ್ನು ದ್ವಿರುಕ್ತಿಗಳು ಮತ್ತು ಅನುಕರಣಾವ್ಯಯಗಳಾಗಿ ವಿಂಗಡಿಸಿ**

ಕಿಸಕ್ಕನೆ, ಓಡೋಡಿ, ಕುರುಂ ಕುರುಂ, ಪರಿಪರಿಯಾಗಿ ಗಡಗಡನೆ, ನಲಿನಲಿದು, ಗರಗರ, ಅಗಲಗಲಿ, ಗಳಗಳನೆ, ಹಳೆಹಳೆಯ, ಗಿರ್ರನೆ, ದಳದಳ, ಪಳಪಳನೆ.

**ಅಭ್ಯಾಸ ೩ : ಕೆಳಗಿನ ಅನುಕರಣಾವ್ಯಯಗಳನ್ನು ಸ್ವಂತವಾಕ್ಯಗಳಲ್ಲಿ ಬಳಸಿ.**

ಸರಸರನೆ, ಭುಸಭುಸ, ಟಪಟಪಾರ್, ದಢದಢ, ಪಟಪಟ, ಗುಳುಗುಳು.

## ೩. ನಾಮಪದಗಳು – ಗುಣವಾಚಕಗಳು – ವಿಭಕ್ತಿ ಪ್ರತ್ಯಯಗಳು

ನಾವಾಡುವ ನುಡಿಯಲ್ಲಿರುವ ಪದಗಳನ್ನು ವ್ಯಾಕರಣದಲ್ಲಿ ಮುಖ್ಯವಾಗಿ ಮೂರು ಗುಂಪುಗಳನ್ನಾಗಿಸುತ್ತೇವೆ. ಅವುಗಳೆಂದರೆ ನಾಮಪದ, ಕ್ರಿಯಾಪದ ಮತ್ತು ಅವ್ಯಯ. ಹೆಸರನ್ನು ಸೂಚಿಸುವ ಪದವೇ ನಾಮಪದ; ಕ್ರಿಯೆಯನ್ನು ತಿಳಿಸುವ ಪದವೇ ಕ್ರಿಯಾಪದ; ಲಿಂಗ ವಚನ ವಿಭಕ್ತಿಗಳಿಗಾಗಿ ಬದಲಾವಣೆ ಹೊಂದದ ಪದಗಳಿಗೆ ಅವ್ಯಯ ಎನ್ನುವರು.

ಉದಾ : ಜಗದೀಶನು ಸೀತಾಳನ್ನು ಚೆನ್ನಾಗಿ ಆದರಿಸಿದನು.

ಈ ವಾಕ್ಯದಲ್ಲಿ ಜಗದೀಶನು, ಸೀತಾಳನ್ನು – ನಾಮಪದಗಳು; ಆದರಿಸಿದನು – ಕ್ರಿಯಾಪದ; ಚೆನ್ನಾಗಿ – ಅವ್ಯಯ.

ನಾಮ ಎಂದರೆ ಹೆಸರು. ವಸ್ತು, ವ್ಯಕ್ತಿ, ಸ್ಥಳ ಮತ್ತು ಭಾವಗಳನ್ನು ಹೆಸರಿಸುವ ಪದವೇ ನಾಮಪದ.

ನಾಮಪದದ ಮೂಲರೂಪವನ್ನೂ, ಕ್ರಿಯೆಯ ಅರ್ಥವನ್ನು ತಿಳಿಸದಿರುವ ಶಬ್ದಗಳನ್ನು ನಾಮಪ್ರಕೃತಿ ಎನ್ನುತ್ತಾರೆ. ಇವಕ್ಕೆ ಪ್ರಾತಿಪದಿಕಗಳು ಅಥವಾ ನಾಮವಾಚಕ ಎಂದೂ ಕರೆಯುವುದೂ ಉಂಟು. ನಾಮಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರಿ ನಾಮಪದಗಳೆಂದೆನಿಸಿವೆ.

ಸ್ವತಃ ಅರ್ಥವಿರದೆ ನಾಮಪ್ರಕೃತಿಗಳ ಮುಂದೆ ಸೇರಿ, ಬಗೆಬಗೆಯ ಅರ್ಥವನ್ನುಂಟುಮಾಡುವ ಉ, ಅನ್ನು, ಇಂದ, ಗೆ ಮೊದಲಾದವು ವಿಭಕ್ತಿ ಪ್ರತ್ಯಯಗಳೆನಿಸುವುವು. ನಾಮಪ್ರಕೃತಿಗಳಿಗೆ ಬೇರೆಬೇರೆ ಪ್ರತ್ಯಯಗಳು ಸೇರಿ ನಾಮಪದಗಳಾಗಿವೆ. [ವಿಭಕ್ತಿ ಪ್ರತ್ಯಯಗಳ ಬಗ್ಗೆ ಮುಂದೆ ತಿಳಿಯೋಣ]

ನಾಮಪ್ರಕೃತಿಯಲ್ಲಿ ಮುಖ್ಯವಾಗಿ ಎರಡು ಬಗೆಯಿವೆ.

**೧. ಸಹಜ ನಾಮಪ್ರಕೃತಿಗಳು**

೨. ಸಾಧಿತ ನಾಮಪ್ರಕೃತಿಗಳು [ಸಮಾಸ, ಕೃದಂತ ಮತ್ತು ತದ್ಧಿತಾಂತಗಳು]

ಸಹಜ ನಾಮಪ್ರಕೃತಿಗಳಲ್ಲಿ ಮುಖ್ಯವಾಗಿ : [೧] ವಸ್ತುವಾಚಕಗಳು, [೨] ಗುಣವಾಚಕಗಳು, [೩] ಸಂಖ್ಯಾವಾಚಕಗಳು, [೪] ಸಂಖ್ಯೇಯವಾಚಕಗಳು, [೫] ಭಾವನಾಮಗಳು, [೬] ಪರಿಮಾಣವಾಚಕಗಳು, [೭] ಪ್ರಕಾರ ವಾಚಕಗಳು, [೮] ದಿಗ್ವಾಚಕಗಳು, [೯] ಸರ್ವನಾಮಗಳು ಎಂದು ಅನೇಕ ಗುಂಪುಗಳನ್ನೂ ಮಾಡಬಹುದು.

**೧. ವಸ್ತುವಾಚಕಗಳು :**

ವಸ್ತುಗಳ ಹೆಸರನ್ನು ಸೂಚಿಸುವ ಶಬ್ದಗಳೆಲ್ಲವೂ ವಸ್ತುವಾಚಕಗಳೆನಿಸಿವೆ. ವಸ್ತುವಾಚಕಗಳಲ್ಲಿ [೧] ರೂಢನಾಮ, [೨] ಅಂಕಿತನಾಮ, [೩] ಅನ್ವರ್ಥನಾಮ – ಎಂದು ಮೂರು ವಿಧಗಳಿವೆ.



೧. ರೂಢನಾಮ : ರೂಢಿಯಿಂದ ಬಂದ ಸಾಮಾನ್ಯ ವಾಚಕಗಳೆಲ್ಲ ರೂಢನಾಮಗಳೆನಿಸಿವೆ.

ಉದಾ : ಹುಡುಗಿ, ಗಂಡಸು, ಪ್ರಾಣಿ, ಗಿಡ, ಹೂ, ಹಣ್ಣು, ನಾಡು, ದೇಶ, ನದಿ, ಪರ್ವತ, ಮನುಷ್ಯ ಇತ್ಯಾದಿ.

೨. ಅಂಕಿತನಾಮ : ವ್ಯವಹಾರದ ಅನುಕೂಲಕ್ಕೆ ಇಟ್ಟುಕೊಂಡ ಹೆಸರುಗಳೆಲ್ಲ ಅಂಕಿತನಾಮಗಳಾಗಿವೆ.

ಉದಾ : ಗಿರಿಜಾ, ಶಂಕರ, ರಾಮ, ಸೀತೆ, ಹಿಮಾಲಯ, ಮಾವು, ಬೇವು, ಮೈಸೂರು, ಬೀದರ, ತೇಗ, ಗಂಧ, ಸಹ್ಯಾದ್ರಿ ಇತ್ಯಾದಿ.

೩. ಅನ್ವರ್ಥನಾಮ : ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೆಲ್ಲ ಅನ್ವರ್ಥನಾಮಗಳಾಗುತ್ತವೆ.

ಉದಾ : ಜಾಣೆ, ಧೀರ, ಸಾಧು, ಕಳ್ಳ, ಕರಿಯ, ಕೆಂಪಿ, ಕುಂಟ, ಕುರುಡ, ಕಿವುಡ, ವಿದ್ವಾಂಸ, ಯೋಗಿ ಇತ್ಯಾದಿ.

**೨. ಗುಣವಾಚಕಗಳು :**

ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣಗಳಿಗೆ ಗುಣವಾಚಕಗಳೆಂದು ಕರೆಯುವರು. ಉದಾ : ಕರಿದು, ಬಿಳಿದು, ಒಳ್ಳೆಯ, ದೊಡ್ಡ, ಹಿರಿದು, ಎಳೆದು, ಕಪ್ಪು, ಸುಂದರ – ಮೊದಲಾದವುಗಳು. ಈ ವಿಶೇಷಣಗಳೆಲ್ಲ ಯಾವುದನ್ನು ಕುರಿತು ಹೇಳಿದೆಯೋ ಅವು ವಿಶೇಷ್ಯಗಳು.

| **ವಿಶೇಷಣ** | **ವಿಶೇಷ್ಯ** |
|---|---|
| ಸುಂದರ | ನಾಡು |
| ಒಳ್ಳೆಯ | ಹುಡುಗಿ |
| ಹಸಿರು | ಬೆಟ್ಟ |
| ದೊಡ್ಡ | ಹುಡುಗ |

**೩. ಸಂಖ್ಯಾವಾಚಕಗಳು :**

ಸಂಖ್ಯೆಯನ್ನು ಹೇಳುವ ಪದಗಳೆಲ್ಲ ಸಂಖ್ಯಾವಾಚಕಗಳು.

ಉದಾ : ಒಂದು, ಎರಡು, ಐದು, ಹತ್ತು, ನೂರು, ಸಾವಿರ, ಲಕ್ಷ – ಇತ್ಯಾದಿ.

**೪. ಸಂಖ್ಯೇಯವಾಚಕಗಳು :**

ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಪದಗಳೆಲ್ಲ ಸಂಖ್ಯೇಯವಾಚಕಗಳು.

ಉದಾ : ಒಂದನೆಯ, ಇಬ್ಬರು, ನಾಲ್ವರು, ಇಮ್ಮಡಿ, ಹತ್ತನೆಯ, ನೂರ್ಮಡಿ – ಇತ್ಯಾದಿ.

**೫. ಭಾವನಾಮಗಳು :**

ವಸ್ತುಗಳು ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಪದಗಳಿಗೆ ಭಾವನಾಮಗಳೆನ್ನುವರು.

ಉದಾ : ಕರಿದರ ಭಾವ = ಕಪ್ಪು; ಹಿರಿದರ ಭಾವ = ಹಿರಿದು; ನೋಡುವುದರ ಭಾವ = ನೋಟ; ಕೂಡುವುದರ ಭಾವ = ಕೂಟ – ಇತ್ಯಾದಿ.

**೬. ಪರಿಮಾಣ ವಾಚಕಗಳು :**

ವಸ್ತುಗಳ ಸಾಮಾನ್ಯ ಅಳತೆ, ಗಾತ್ರ, ಪರಿಮಾಣ – ಇತ್ಯಾದಿಗಳನ್ನು ಸೂಚಿಸುವ ಪದಗಳು ಪರಿಮಾಣವಾಚಕಗಳೆನಿಸುವುವು.

ಉದಾ : ಇನಿತು, ಎನಿತು, ಅಷ್ಟು, ಇಷ್ಟು, ಹಲವು, ಕೆಲವು, ಪಲವು – ಇತ್ಯಾದಿ.

**೭. ಪ್ರಕಾರ ವಾಚಕಗಳು :**

ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಪದಗಳೆಲ್ಲ ಪ್ರಕಾರವಾಚಕಗಳೆಂದು ಕರೆಯುವರು. ಇವು ಕೂಡ ಒಂದು ಬಗೆಯ ಗುಣವಾಚಕಗಳೇ ಆಗಿರುತ್ತವೆ.

ಉದಾ : ಅಂತಹ, ಇಂತಹ, ಎಂತಹ, ಅಂಥ, ಇಂಥ, ಎಂಥ – ಇತ್ಯಾದಿ.

**೮. ದಿಗ್ವಾಚಕಗಳು :**

ದಿಕ್ಕುಗಳು ಹೆಸರನ್ನು ಸೂಚಿಸುವ ಪದಗಳೆಲ್ಲ ದಿಗ್ವಾಚಕಗಳೆನ್ನಿಸಿವೆ.

ಉದಾ : ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಆಚೆ, ಈಚೆ, ಮೂಡಲು, ತೆಂಕಲು, ಬಡಗಲು, ಪಡುವಲು – ಇತ್ಯಾದಿ.

**೯. ಸರ್ವನಾಮಗಳು :**

ನಾಮಪದಗಳಿಗೆ ಬದಲಾಗಿ ಬಳಸುವ ಪದಗಳೆಲ್ಲ ಸರ್ವನಾಮಗಳೆನಿಸುವುವು.

ಉದಾ : ಅದು, ಇದು, ಯಾವುದು, ಎಲ್ಲ, ಏನು, ಅವನು, ಇವಳು, ತಾನು, ನೀವು, ಯಾವನು, ಆರ್, ಏನ್, ಆನ್ – ಇತ್ಯಾದಿ.

**ಅಭ್ಯಾಸ :**

**ಇವುಗಳ ಗುಣವಾಚಕಗಳನ್ನು ಗುರುತಿಸಿ.**

ಉದಾಹರಣೆ : ಒಳ್ಳೆಯ ಮನುಷ್ಯ – ಒಳ್ಳೆಯ ಎಂಬುದು ಗುಣವಾಚಕ.

ವಕ್ತ್ರಪದ್ಮ ; ಪೊಲ್ಲವಾರ್ತೆ ; ಮಂಗಳಲಿಂಗ ; ಲಘುವರ್ತನ ; ಘೋರಪಾತಕಿ; ಘೋರತರ ವಿಷ ; ಕುಜನರು ; ಕಲಿಭೀಮ ; ಅಪ್ರತಿಮಲ್ಲ ; ನಸುಮಿಸುಕು ; ಮರಿಗೂಗೆ ; ಕಡುಪಾಪ ; ಹೆಮ್ಮರ ; ದುರ್ಗಂಧ ; ಬಿನ್ನಾಣದ ಮಾತು ; ದುರ್ಜನ.



**ವಿಭಕ್ತಿ ಪ್ರತ್ಯಯಗಳು**

ನಾಮಪ್ರಕೃತಿಗಳ ಜೊತೆ ಸೇರಿ ಪದದ ಅರ್ಥವನ್ನು ಆಯಾಯ ಸಂದರ್ಭಗಳಿಗನುಗುಣವಾಗಿ ಬದಲಾವಣೆ ಮಾಡುವ ಪ್ರತ್ಯಯಗಳಿಗೆ ನಾಮ ವಿಭಕ್ತಿ ಪ್ರತ್ಯಯಗಳೆಂದು ಕರೆಯಲಾಗಿದೆ. ಒಂದು ವಾಕ್ಯದಲ್ಲಿ ಬರುವ ಒಂದು ನಾಮಪದಕ್ಕೂ ಇನ್ನಿತರ ಪದಗಳಿಗೂ ಇರುವ ಸಂಬಂಧವನ್ನೂ ತಿಳಿಸುತ್ತವೆ. ಕ್ರಿಯಾಪದಕ್ಕೂ ವಾಕ್ಯದ ಇತರ ನಾಮಪದಗಳಿಗೂ ಸಂಬಂಧವನ್ನು ಕಲ್ಪಿಸುವ ನಾನಾ ಪ್ರಕಾರದ ವಿಭಕ್ತಿಗಳು ಸೂಚಿಸುವ ಅರ್ಥಕ್ಕೆ ಕಾರಕಾರ್ಥವೆನ್ನುವರು. ನಾಮ ವಿಭಕ್ತಿ ಪ್ರತ್ಯಯಗಳಲ್ಲಿ ಒಟ್ಟು ಎಂಟು ವಿಧಗಳನ್ನು ಗುರುತಿಸಲಾಗಿದೆ.

| ವಿಭಕ್ತಿಗಳು | ಕಾರಕಾರ್ಥಗಳು | ವಿಭಕ್ತಿ ಪ್ರತ್ಯಯ | | ಪ್ರಯೋಗ | |
|---|---|---|---|---|---|
| | | ಹೊಸಗನ್ನಡ | ಹಳಗನ್ನಡ | ಹೊಸಗನ್ನಡ | ಹಳಗನ್ನಡ |
| ಪ್ರಥಮಾ | ಕರ್ತ್ರರ್ಥ | ಉ | ಮ್ | ರಾಮನು | ರಾಮಮ್ |
| ದ್ವಿತೀಯಾ | ಕರ್ಮಾರ್ಥ | ಅನ್ನು | ಅಂ | ರಾಮನನ್ನು | ರಾಮನಂ |
| ತೃತೀಯಾ | ಕರಣಾರ್ಥ (ಸಾಧನಾರ್ಥ) | ಇಂದ | ಇಂ, ಇಂದಂ, ಇಂದೆ | ರಾಮನಿಂದ | ರಾಮನಿಂ ರಾಮನಿಂದಂ |
| ಚತುರ್ಥೀ | ಸಂಪ್ರದಾನ (ಕೂಡುವಿಕೆ) | ಗೆ, ಇಗೆ, ಕ್ಕೆ, ಅಕ್ಕೆ | ಗೆ, ಕೆ, ಕ್ಕೆ | ರಾಮನಿಗೆ | ರಾಮಂಗೆ |
| ಪಂಚಮೀ | ಅಪಾದಾನ (ಅಗಲಿಕೆ) | ದೆಸೆಯಿಂದ | ಅತ್ತಣಿಂ ಅತ್ತಣಿಂದಂ | ರಾಮನ ದೆಸೆಯಿಂದ | ರಾಮನತ್ತಣಿಂ ರಾಮನತ್ತಣಿಂದೆ |
| ಷಷ್ಠೀ | ಸಂಬಂಧ | ಅ | ಅ | ರಾಮನ | ರಾಮನ |
| ಸಪ್ತಮೀ | ಅಧಿಕರಣ | ಅಲ್ಲಿ, ಇಲ್ಲಿ | ಒಳ್ ಎ, ಒಳು | ರಾಮನಲ್ಲಿ | ರಾಮನೊಳ್ ರಾಮನೊಳು |
| ಸಂಬೋಧನಾ | ಅಭಿಮುಖೀಕರಣ (ಕರೆಯುವಿಕೆ) | ಅ, ಏ, ಇರಾ, ಈ | ಆ, ಏ, ಇರಾ, ಈ | ರಾಮಾ ರಾಮನೇ | ರಾಮಾ ರಾಮನೇ |

**ಅಭ್ಯಾಸ :** ಈ ಮುಂದಿನ ಪದಗಳಲ್ಲಿ ಬಳಕೆಯಾಗಿರುವ ವಿಭಕ್ತಿ ಪ್ರತ್ಯಯಗಳನ್ನು ಗಮನಿಸಿ, ವಿಭಕ್ತಿಗಳ ಹೆಸರನ್ನು ಬರೆಯಿರಿ.

೧. ಕದಡಿದ, ೨. ಜಲಮಂ, ೩. ಧುರದೊಳ್, ೪. ಇವರಂ, ೫. ರಾಮನತ್ತಣಿಂ, ೬. ಅಂಧಕನು, ೭. ಗುರುವಿಗೆ, ೮. ಯಮಸುತಂಗೆ, ೯. ಕಲಿಭೀಮನೇ, ೧೦. ವಲ್ಲಭನ, ೧೧. ಸಮತೆಯನ್ನು, ೧೨. ಧರ್ಮಜನಿಗೆ, ೧೩. ಬಲ್ಲವರಿಂದ, ೧೪. ಮಂತ್ರಿಯಾಗು, ೧೫. ಪೈರಿಗೆ, ೧೬. ಧರೆಯೊಳ್, ೧೭. ಪುರಂದರವಿಠಲನ, ೧೮. ಕಟ್ಟಿಗೆಯ ದೆಸೆಯಿಂ, ೧೯. ಹರೆಯಕ್ಕೆ, ೨೦. ಬಸ್‌ಸ್ಟಾಪಿನಲ್ಲಿ.

## ೪. ಕ್ರಿಯಾಪದಗಳು–ಧಾತು–ಕಾಲಸೂಚಕಗಳು–ನಿಷೇಧಾರ್ಥಕ ರೂಪ

ಪೂರ್ಣಗೊಂಡ ಒಂದು ಕ್ರಿಯೆಯ ಅರ್ಥವನ್ನು ನೀಡುವ ಪದಗಳು ಕ್ರಿಯಾಪದಗಳೆನಿಸಿಕೊಳ್ಳುತ್ತವೆ. ಇವು ಕರ್ತೃವಿನ ಕ್ರಿಯೆಯನ್ನು ಹೇಳುವ ಪದಗಳಾಗಿವೆ. ಕ್ರಿಯಾಪದದ ಮೂಲ ರೂಪವೇ 'ಧಾತು' ಅಥವಾ 'ಕ್ರಿಯಾಪ್ರಕೃತಿ'.

ಧಾತುಗಳ ಮುಂದೆ ಕಾಲಸೂಚಕ ಪ್ರತ್ಯಯಗಳು ಹಾಗೂ ಕೊನೆಯಲ್ಲಿ ಆಖ್ಯಾತ ಪ್ರತ್ಯಯಗಳು ಸೇರಿ ಕ್ರಿಯಾಪದಗಳು ರೂಪುಗೊಳ್ಳುತ್ತವೆ.

ಉದಾ :

| ಧಾತು | ಕಾಲಸೂಚಕ ಪ್ರತ್ಯಯ | ಆಖ್ಯಾತ ಪ್ರತ್ಯಯ | ಕ್ರಿಯಾಪದ |
|---|---|---|---|
| ನೋಡು | ಉತ್ತ | ಆನೆ/ಆಳೆ | ನೋಡುತ್ತಾನೆ/ಳೆ |
| ನೋಡು | ದ | ಅನು/ಅಳು | ನೋಡಿದನು/ಳು |
| ನೋಡು | ವ | ಅನು/ಅಳು | ನೋಡುವನು/ಳು |
| ಓದು | ಉತ್ತ | ಆನು/ಆಳು | ಓದುತ್ತಾನೆ/ಳು |
| ಓದು | ಒ | ಆನು/ಆಳು | ಓದಿದನು/ಳು |
| ಓದ | ಏ | ಅನು/ಅಳು | ಓದುವನು/ಳು |

**ಧಾತುಗಳ ವಿಧಗಳು :**

ಧಾತುಗಳಲ್ಲಿ [೧] ಮೂಲಧಾತು ಹಾಗೂ [೨] ಸಾಧಿತಧಾತು ಎಂಬೆರಡು ವಿಧಗಳಿವೆ.

**ಮೂಲಧಾತು :**

ಯಾವುದೇ ಪ್ರತ್ಯಯವನ್ನು ಹೊಂದದೇ ತಮ್ಮ ಮೂಲರೂಪದಲ್ಲಿಯೇ ಪ್ರಯೋಗಿಸಲ್ಪಡುತ್ತಿದ್ದರೆ ಅಂತಹ ರೂಪಗಳಿಗೆ ಮೂಲಧಾತು ಅಥವಾ ಸಹಜಧಾತು ಎನ್ನುತ್ತಾರೆ. ಇವು ಆಯಾ ಭಾಷೆಯಲ್ಲಿ ಸಹಜವಾಗಿ ಇರುವಂತಹವುಗಳಾಗಿವೆ.

ಉದಾ : ನಡೆ, ಓಡು, ತೂಗು, ಹಿಗ್ಗು, ನಡುಗು, ಹಿಡಿ, ಕೊಡು, ಬೆಳಗು, ಹೊಗಳು, ಮಿಂಚು, ಹೊಳೆ, ಚಿಗುರು, ಸಾಕು, ಹರಡು, ತಿನ್ನು.

**ಸಾಧಿತಧಾತು :**

ಕೆಲವು ನಾಮಪ್ರಕೃತಿಗಳಿಗೆ, ಅನುಕರಣ, ಅವ್ಯಯಗಳಿಗೆ ಮತ್ತು ಎಲ್ಲ ಪ್ರೇರಣಾರ್ಥ ಪದಗಳಿಗೆ 'ಇಸು' ಎಂಬ ಪ್ರತ್ಯಯ ಸೇರಿದರೆ ಸಾಧಿತ ಧಾತುಗಳು ರೂಪಗೊಳ್ಳುತ್ತವೆ. ಇವುಗಳಿಗೆ 'ಪ್ರತ್ಯಯಾಂತ ಧಾತು' ಎಂದೂ ಕರೆಯುತ್ತಾರೆ.

೧] ನಾಮ ಪ್ರಕೃತಿಗಳಿಗೆ 'ಇಸು' ಪ್ರತ್ಯಯ ಸೇರಿದಾಗ ಸಾಧಿತ ಧಾತುಗಳು ಉಂಟಾಗುತ್ತವೆ.



(ಅ] ಕನ್ನಡ + ಇಸು = ಕನ್ನಡಿಸು

(ಆ] ಅಬ್ಬರ + ಇಸು = ಅಬ್ಬರಿಸು

ಇದೇ ರೀತಿ, ರಕ್ಷಿಸು, ನಿರ್ಣಯಿಸು, ಪೂಜಿಸು, ಪ್ರಯತ್ನಿಸು, ಚಲಿಸು ಇತ್ಯಾದಿ.

೨] ಅನುಕರಣಾವ್ಯಯಗಳಿಗೆ 'ಇಸು' ಪ್ರತ್ಯಯ ಸೇರಿದಾಗ.

ಉದಾ : ಧಗಧಗ + ಇಸು = ಧಗಧಗಿಸು; ಘಮಘಮ + ಇಸು = ಘಮಘಮಿಸು.

೩] ಪ್ರೇರಣಾರ್ಥಕ ಶಬ್ದಗಳ ಮುಂದೆ 'ಇಸು' ಪ್ರತ್ಯಯ ಸೇರಿದಾಗ.

ಉದಾ : ಚಿಂತೆ + ಇಸು = ಚಿಂತಿಸು; ಮಲಗು + ಇಸು = ಮಲಗಿಸು;

ಗಮನ + ಇಸು = ಗಮನಿಸು; ಪ್ರಲಾಪ + ಇಸು = ಪ್ರಲಾಪಿಸು.

**ಅಭ್ಯಾಸ ೧ : ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ :**

ಗಳೆ, ಪಾಡು, ನೋಡು, ಕುಗ್ಗು, ಬಿಡು, ಜಗ್ಗು, ನುಗ್ಗು, ಬೇಕು, ಬರು, ತಿವಿ.

**ಅಭ್ಯಾಸ ೨ : ಕೆಳಗಿನ ವಾಕ್ಯಖಂಡದಲ್ಲಿ ಮೂಲಧಾತು ಮತ್ತು ಸಹಜಧಾತುಗಳನ್ನು ಗುರುತಿಸಿ ಪಟ್ಟಿಮಾಡಿ :**

ಪುರಂದರ ದಾಸರು ಸಮಾಜ ವಿಮರ್ಶೆಯನ್ನು ಕುರಿತು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಡಾಂಭಿಕತೆಯನ್ನು ಕಟುವಾಗಿ ಟೀಕಿಸಿದ್ದಾರೆ. ದುರ್ಜನರನ್ನು ಲೇವಡಿ ಮಾಡಿದ್ದಾರೆ. ಸಂಸ್ಕೃತದ ಅನೇಕ ಉದಾತ್ತ ತತ್ವಗಳನ್ನು ಕನ್ನಡಿಸಿದ್ದಾರೆ. ಇವರ ಬರಹಗಳಿಂದಾಗಿ ಕನ್ನಡ ಸಾಹಿತ್ಯ ಕಳೆಗಟ್ಟಿದೆ, ಚಂದಗೊಂಡಿದೆ.

**ಕಾಲಸೂಚಕಗಳು**

'ಕಾಲ' ಎಂದರೆ ಸಮಯ. ಕ್ರಿಯಾಪದಗಳು ಕಾಲಭೇದವನ್ನು ತಿಳಿಸುತ್ತವೆ. ಇವು ವರ್ತಮಾನಕಾಲ, ಭೂತಕಾಲ ಮತ್ತು ಭವಿಷ್ಯತ್‌ಕಾಲ ಎಂದು ಮೂರು ಬಗೆಯಾಗಿವೆ.

ಎಲ್ಲ ಧಾತುಗಳಿಗೂ ಆಖ್ಯಾತ ಪ್ರತ್ಯಯಗಳು ವರ್ತಮಾನ, ಭೂತ, ಭವಿಷ್ಯತ್ ಕಾಲಗಳಲ್ಲೂ; ವಿಧ್ಯರ್ಥ, ನಿಷೇಧಾರ್ಥ, ಸಂಭಾವನಾರ್ಥಗಳೆಂಬ ಮೂರು ಅರ್ಥಗಳಲ್ಲೂ ಸೇರಿ ಒಟ್ಟು ಆರು ಪ್ರಕಾರದ ಕ್ರಿಯಾಪದ ರೂಪಗಳು ಉಂಟಾಗುತ್ತವೆ.

**೧. ವರ್ತಮಾನ ಕಾಲ :**

ಈಗ ಪ್ರಸ್ತುತದಲ್ಲಿ ನಡೆಯುತ್ತಿರುವ ಕ್ರಿಯೆಯನ್ನು ಸೂಚಿಸುವ ಕಾಲಕ್ಕೆ ವರ್ತಮಾನ ಕಾಲ ಎನ್ನುವರು. ಧಾತುಗಳಿಗೆ ವರ್ತಮಾನ ಕಾಲದಲ್ಲಿ, ಧಾತು ಮತ್ತು ಆಖ್ಯಾತ ಪ್ರತ್ಯಯಗಳ ಮಧ್ಯದಲ್ಲಿ 'ಉತ್ತ' ಎಂಬ ಕಾಲಸೂಚಕ ಪ್ರತ್ಯಯ ಸೇರಿ ವರ್ತಮಾನ ಕಾಲ ಕ್ರಿಯಾಪದವೆನಿಸುತ್ತವೆ. ಈ ಕ್ರಿಯಾಪದಗಳು ಕರ್ತೃವಿನ ಪುರುಷ, ಲಿಂಗ ಮತ್ತು ವಚನಗಳನ್ನು ಆಧರಿಸಿಕೊಂಡಿರುತ್ತವೆ.

ವರ್ತಮಾನ ಕಾಲವನ್ನು ಸೂಚಿಸಲು 'ಉತ್ತ' ಎಂಬ ಕಾಲಸೂಚಕ ಪ್ರತ್ಯಯ ಬರುವುದಾದರೂ ಕೆಲವೊಮ್ಮೆ ಉಂಟು, ಇದೆ, ಇವೆ ಎಂಬುದಾಗಿ ಬಳಕೆಯಾಗುತ್ತವೆ. ಇವು 'ಇರು' ಎಂಬ ಧಾತುವಿನ ಅರ್ಥದಲ್ಲಿ ವರ್ತಮಾನ ಕಾಲದ ಎಲ್ಲ ಕ್ರಿಯಾಪದಗಳ ರೂಪದಲ್ಲಿ ಬಳಸಲ್ಪಡುತ್ತವೆ.

ಉದಾ : ಹಕ್ಕಿಯು ಗೂಡಿನಲ್ಲಿ ಇದೆ. [ಇರುತ್ತದೆ]

ಹಕ್ಕಿಗಳು ಗೂಡಿನಲ್ಲಿ ಇವೆ. [ಇರುತ್ತವೆ]

**೨. ಭೂತಕಾಲ :**

ಈ ಹಿಂದೆ ಆಗಿಹೋದ ಕ್ರಿಯೆಯನ್ನು ಸೂಚಿಸುವ ಕಾಲಕ್ಕೆ ಭೂತಕಾಲವೆನ್ನುವರು. 'ದ' ಎಂಬ ಕಾಲಸೂಚಕ ಪ್ರತ್ಯಯವು ಎಲ್ಲ ಕಡೆಗೂ ಬರುತ್ತದೆ.

ಉದಾ : ಅವನು ಮನೆಗೆ ಹೋದನು.

ನಾವೆಲ್ಲ ಶಾಲೆಗೆ ಹೋದೆವು.

ಹಕ್ಕಿಗಳು ಹಾರಿ ಹೋದವು.

**೩. ಭವಿಷ್ಯತ್‌ಕಾಲ :**

ಮುಂದೆ ನಡೆಯಲಿರುವ ಕ್ರಿಯೆಯನ್ನು ಸೂಚಿಸುವ ಕಾಲಕ್ಕೆ ಭವಿಷ್ಯತ್‌ಕಾಲ ವೆನ್ನುವರು. ಸಾಮಾನ್ಯವಾಗಿ 'ವ' ಎಂಬ ಕಾಲಸೂಚಕ ಪ್ರತ್ಯಯ ಬರುತ್ತದೆ. ಕೆಲವೊಮ್ಮೆ 'ಎವ' ಎಂಬ ಪ್ರತ್ಯಯವೂ ಬರುವುದುಂಟು. [ಇ, ಎ ಕಾರಾಂತ ಧಾತುಗಳ ಮೇಲೆ ಬರುತ್ತದೆ]

ಉದಾ : ರಮೇಶ ಹೋಗುವನು, ಆನಂದಿ ಬರುವವಳಿದ್ದಾಳೆ, ರೆಹಮಾನ್ ಹೊರಡಲಿದ್ದಾನೆ.



**ಕ್ರಿಯಾಪದದ ಅರ್ಥರೂಪಗಳು :**

ಪೂರ್ಣಕ್ರಿಯಾಪದಗಳು ಕನ್ನಡದಲ್ಲಿ ಕೆಲ ನಿರ್ದಿಷ್ಟವಾದ ಅರ್ಥಗಳಲ್ಲಿ ಬಳಸಲ್ಪಡುತ್ತಿದ್ದರೂ, ಪ್ರಮುಖವಾಗಿ ವಿಧ್ಯರ್ಥ, ಸಂಭಾವನಾರ್ಥ ಹಾಗೂ ನಿಷೇಧಾರ್ಥಗಳೆಂಬ ಮೂರು ರೀತಿಯಲ್ಲಿ ಬಳಸಲ್ಪಡುತ್ತವೆ. ಇವುಗಳಿಗೆ ಕಾಲಸೂಚಕ ಪ್ರತ್ಯಯಗಳು ಸೇರುವುದಿಲ್ಲವಾದ್ದರಿಂದ, ಇಲ್ಲಿ ಕಾಲಭೇದಗಳಿಲ್ಲ.

ಉದಾ : ೧. ವಿದ್ಯಾರ್ಥಿಗಳಿಂದ ನಮ್ಮ ಶಾಲೆಗೆ ಕೀರ್ತಿ ಬರಲಿ. [ವಿಧ್ಯರ್ಥ]

೨. ವಿದ್ಯಾರ್ಥಿಗಳಿಂದ ನಮ್ಮ ಶಾಲೆಗೆ ಕೀರ್ತಿ ಬಂದೀತು. [ಸಂಭವನಾರ್ಥ]

೩. ವಿದ್ಯಾರ್ಥಿಗಳಿಂದ ನಮ್ಮ ಶಾಲೆಗೆ ಕೀರ್ತಿ ಬಾರದು. [ನಿಷೇಧಾರ್ಥ]

ಮೇಲಿನ ಉದಾಹರಣೆಗಳಲ್ಲಿ ಬರಲಿ, ಬಂದೀತು, ಬಾರದು ಈ ಕ್ರಿಯಾಪದಗಳು 'ಬರು' ಎಂಬ ಧಾತುವಿನಿಂದ ರೂಪುಗೊಂಡಿವೆ. ಮೊದಲ ವಾಕ್ಯದಲ್ಲಿ ಬರಲಿ ಎಂಬ ಕ್ರಿಯಾಪದವು, ಮನದ ಬಯಕೆಯನ್ನು ಸೂಚಿಸುವುದರಿಂದ ವಿಧ್ಯರ್ಥರೂಪದ ಕ್ರಿಯಾಪದವೆನಿಸುವುದು. ವಿಧಿ ಎಂದರೆ ಆಜ್ಞೆ, ಅಪ್ಪಣೆ, ಆಶೀರ್ವಾದ, ವಿನಂತಿ ಇತ್ಯಾದಿ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವ ಕ್ರಿಯಾಪದಗಳಿಗೆ ವಿಧ್ಯರ್ಥಕ ಕ್ರಿಯಾಪದಗಳೆನ್ನುತ್ತಾರೆ.

ಎರಡನೆಯ ವಾಕ್ಯದಲ್ಲಿ ಬಂದಿರುವ 'ಬಂದೀತು' ಎಂಬ ಕ್ರಿಯಾಪದವು ಕ್ರಿಯೆ ನಡೆಯುವ ಸಂಭವವನ್ನು ಸೂಚಿಸುತ್ತದೆ. ಊಹೆ, ಸಂಶಯ, ತರ್ಕ ಇತ್ಯಾದಿ ಸಂಭವನೀಯತೆಯನ್ನು ಸೂಚಿಸುವ ಕ್ರಿಯಾಪದಗಳೇ ಸಂಭವನಾರ್ಥಕ ಕ್ರಿಯಾಪದಗಳೆನಿಸುತ್ತವೆ.

ಕೊನೆಯ ವಾಕ್ಯದಲ್ಲಿ ಬಂದಿರುವ 'ಬಾರದು' ಎಂಬ ಕ್ರಿಯಾಪದವು ಕ್ರಿಯೆಯ ಕಾರ್ಯವು ನಡೆಯುವುದಿಲ್ಲ ಎಂಬರ್ಥವನ್ನು ಸೂಚಿಸುವುದರಿಂದ ಇದು ನಿಷೇಧಾರ್ಥಕ ಕ್ರಿಯಾಪದವೆನಿಸುತ್ತದೆ.

**ನಿಷೇಧ ಕ್ರಿಯಾರೂಪಗಳು :**

ಕ್ರಿಯೆಯೊಂದು ನಡೆಯಲಿಲ್ಲ ಎಂಬ ಅರ್ಥವನ್ನು ಸೂಚಿಸುವ ಕ್ರಿಯಾಪದಗಳಿಗೆ ನಿಷೇಧಾರ್ಥಕ ಕ್ರಿಯಾಪದಗಳೆನ್ನುವರು.

ಏಕವಚನದಲ್ಲಿ ಅ, ಅನು, ಅಳು, ಅದು, ಎ, ಎನು ಎಂಬ ಆಖ್ಯಾತ ಪ್ರತ್ಯಯಗಳೂ; ಬಹುವಚನದಲ್ಲಿ ಅರು, ಅರು, ಅವು, ಅರಿ, ಎವು ಎಂಬ ಆಖ್ಯಾತ ಪ್ರತ್ಯಯಗಳೂ ಧಾತುಗಳ ಮೇಲೆ ಸೇರಿ ನಿಷೇಧಾರ್ಥಕ ಕ್ರಿಯಾಪದಗಳು ರೂಪುಗೊಳ್ಳುತ್ತವೆ.

ಉದಾ : 'ಬರು' ಧಾತುವಿಗೆ – ಬಾರದು, ಬಾರಳು, ಬಾರದು, ಬಾರರು, ಬಾರವು, ಬಾರ, ಬಾರಿರಿ.

ಆದರೆ ಇತ್ತೀಚಿನ ದಿನಗಳಲ್ಲಿ, ಈ ನಿಷೇಧ ರೂಪಗಳ ಬದಲಾಗಿ 'ಇಲ್ಲ' ಎಂಬ ಕ್ರಿಯಾರ್ಥಕ ಅವ್ಯಯವನ್ನು, ಕೃದಂತಕ್ಕೆ ಜೋಡಿಸಿ, ನಿಷೇಧ ರೂಪಗಳನ್ನು ಹೇಳುವ ಪರಿಪಾಠ ಹೆಚ್ಚುತ್ತಿದೆ. ಇದು ಎಲ್ಲಾ ಲಿಂಗ ಮತ್ತು ವಚನಗಳಲ್ಲಿ ಒಂದೇ ರೀತಿಯಾಗಿ ಬಳಕೆಯಾಗುತ್ತಿದೆ.

ಉದಾ :

ಅವನು, ಅವಳು, ಅದು, ಅವರು>ಬರುವುದಿಲ್ಲ [ಬರನು, ಬಾರಳು, ಬಾರದು, ಬಾರರು, ಬಾರವು ಎಂಬರ್ಥದಲ್ಲಿ]

**ಅಭ್ಯಾಸ ೧ : ಈ ಕ್ರಿಯಾಪದಗಳ 'ಧಾತು'ವನ್ನು ಗುರುತಿಸಿರಿ :**

೧. ಓದಿದನು, ೨. ತಿಂದನು, ೩. ಬಂದವು, ೪. ನಿಂತರು, ೫. ಹಾಡುವಳು, ೬. ತೋರಿಸು, ೭. ಕುಡಿಸು, ೮. ನಲಿಯುತ್ತಾ, ೯. ಕಟ್ಟಿಸು, ೧೦. ಓಡುವರು, ೧೧. ಬೀಸುತ್ತಿತ್ತು, ೧೨. ಹೇಳಿದಾಗ, ೧೩. ನೋಡಿದನು, ೧೪. ಬರೆಯುವಳು, ೧೫. ಕಲಿಯುವರು, ೧೬. ಹೋದರು, ೧೭. ಹೋಯಿತು, ೧೮. ಅಳುತ್ತಿತ್ತು, ೧೯. ಬಾರಿಸುವಳು, ೨೦. ನುಡಿಸುವಳು.

**ಅಭ್ಯಾಸ ೨ : ಈ ಕೆಳಗಿನ ಕ್ರಿಯಾಪದಗಳ ಕಾಲವನ್ನು ಸೂಚಿಸಿ :**

೧. ಹೋದವು, ೨. ಬರುವವು, ೩. ಕುಣಿಯುತ್ತಿತ್ತು, ೪. ಓದಿದರು, ೫. ಓಡಿದರು, ೬. ಬಂದಿತು, ೭. ನೋಡಿದಳು, ೮. ಬರುತ್ತಿದ್ದರು, ೯. ನಿಂತರು, ೧೦. ಕರೆವರು, ೧೧. ನೋಡಿತು, ೧೨. ಹಾಡಿದಳು, ೧೩. ಕೇಳುತ್ತಾರೆ, ೧೪. ನಗುವರು, ೧೫. ತಿಂದನು, ೧೬. ಕಟ್ಟುವರು, ೧೭. ಹೋಯಿತು. ೧೮. ಹೋದರು

**ಅಭ್ಯಾಸ ೩ : ಇವುಗಳನ್ನು ನಿಷೇಧ ರೂಪದಲ್ಲಿ ಬರೆಯಿರಿ :**

೧. ಹೋಗುವನು, ೨. ಬರುವರು, ೩. ನೋಡಿದಳು, ೪. ನೋಡುವರು, ೫. ತರುವರು, ೬. ಹಾಡುವನು, ೭. ಆಡಿದರು, ೮. ಆಡಿತು, ೯. ಹೋಗುವಿರಿ, ೧೦. ಕೇಳುವರು, ೧೧. ತಿನ್ನುವಳು, ೧೨. ಬರುವುದು, ೧೩. ಹಾಡುವೆ.



## ೫. ಗಾದೆಗಳ ವಿಸ್ತರಣೆ

ಜನಪದ ಸಾಹಿತ್ಯದ ಉಳಿದ ಪ್ರಕಾರಗಳಂತೆ ಗಾದೆಯೂ ಒಂದು ವಿಶಿಷ್ಟ ಕಲಾ ವರ್ಗಕ್ಕೆ ಸೇರಿದ ಪ್ರಕಾರ. ಉಳಿದೆಲ್ಲ ಜನಪದ ಪ್ರಕಾರಗಳಿಗಿಂತಲೂ ಹೆಚ್ಚು ಜನಪ್ರಿಯತೆಯಲ್ಲೂ ಜನಬಳಕೆಯಲ್ಲೂ ಸೇರಿಹೋಗಿರುವಂತಹದ್ದು. ಗಾದೆಗಳು ಜನರ ಅನುಭವದ ಸಾಂದ್ರತೆಗೆ, ವಸ್ತು ವೈವಿಧ್ಯತೆಗೆ, ಸಂಸ್ಕೃತಿ ಸಂಪನ್ನತೆಗೆ, ವಿಚಾರ ವೈಭವಕ್ಕೆ ಸಾಕ್ಷಿಯಾಗಿವೆ. ಗಾದೆಗಳು ನಮ್ಮ ಬದುಕನ್ನು ಆವರಿಸಿ ಪ್ರಭಾವಿಸಿರುವುದು ಮಾತ್ರವಲ್ಲದೆ ನಮ್ಮ ಭಾಷೆಗೆ ಶಕ್ತಿಯನ್ನೂ ಸಂಪನ್ನತೆಯನ್ನೂ ತಂದುಕೊಟ್ಟಿವೆ. ಗಾದೆಗಳಿಲ್ಲದ ನಮ್ಮ ಬದುಕನ್ನಾಗಲೀ ಭಾಷೆಯನ್ನಾಗಲೀ ಕಲ್ಪಿಸಿಕೊಳ್ಳುವುದೇ ಕಷ್ಟಸಾಧ್ಯ. ಊಟಕ್ಕೆ ಉಪ್ಪಿನಕಾಯಿ ವ್ಯಂಜಕವಾದರೆ, ಮಾತಿಗೆ ಗಾದೆ ವ್ಯಂಜಕವಾಗುತ್ತದೆ. ಕಿರಿದರಲ್ಲಿ ಹಿರಿದಾದ ಅರ್ಥ ತುಂಬಿದ ಗಾದೆಗಳು ಸರ್ವಾದರಣೀಯವಾಗಿ ಕಾಣಿಸಿಕೊಳ್ಳುತ್ತವೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಗಾದೆಮಾತನ್ನು ಗಾದೆಗಳಿಗೇ ಅನ್ವಯಿಸಬಹುದು.

ಮೊದಲಿಗೆ ನೀವು ಆಯ್ದುಕೊಂಡ ಗಾದೆಯ ಅರ್ಥವನ್ನು ಗ್ರಹಿಸಬೇಕು. ಸಾಮಾನ್ಯವಾಗಿ ಗಾದೆಗಳು ಮಿತವಾದ ಶಬ್ದಗಳಲ್ಲಿ ಅಗಾಧ ಅರ್ಥವನ್ನು ಅಭಿವ್ಯಕ್ತಿಸಿರುತ್ತವೆ. ಸಂಕ್ಷಿಪ್ತವಾಗಿದ್ದರೂ ವಿವೇಕಪೂರ್ಣವಾದ, ತೀಕ್ಷ್ಣವಾದ ವಿಚಾರವನ್ನು ಒಳಗೊಂಡಿರುತ್ತವೆ. ಗಾದೆಯ ಅರ್ಥ ಹೊಳೆಯದಿದ್ದರೆ ಅವುಗಳನ್ನು ವಿಸ್ತರಿಸುವುದು ಅಸಾಧ್ಯ. ಆದ್ದರಿಂದ ಗಾದೆಯನ್ನು ಅರ್ಥಮಾಡಿಕೊಳ್ಳುವುದು ಮೊದಲ ಹಂತ. ಆನಂತರ ಸಾಂದರ್ಭಿಕ ಘಟನೆಗಳನ್ನೋ, ಕಥೆಯನ್ನೋ, ಸ್ವಾನುಭವದ ಸಂಗತಿಗಳನ್ನೋ ಹದವಾಗಿ ಬೆರೆಸಿ ಗಾದೆಯನ್ನು ವಿಸ್ತರಿಸುತ್ತಾ ಹೋಗಬಹುದು.

**ತಾಳಿದವನು ಬಾಳಿಯಾನು**

ಗಾದೆಗಳು ಜನಪದರ ಅನುಭವದ ಜಾಣ್ನುಡಿಗಳು. ಅದರ ಸ್ವರೂಪ ಕಿರಿದಾಗಿದ್ದರೂ ಬೆಟ್ಟದಷ್ಟು ಅರ್ಥವನ್ನು ಹೇಳುವ ಸಾಮರ್ಥ್ಯವಿರುತ್ತದೆ. ಇದನ್ನೇ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವಂತೆ ಅದರ ಮಹತ್ವವನ್ನು ಪಡೆದುಕೊಂಡಿದೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬುದು ಗಾದೆಗಳಿಗೆ ಇರುವ ಸಾಮರ್ಥ್ಯವನ್ನು ಗಾದೆ ಮಾತಿನಲ್ಲಿಯೇ ರೂಢಿಗೆ ಬಂದಿದೆ.

ಪ್ರಸ್ತುತ ಗಾದೆ ನಿಧಾನವೇ ಪ್ರಧಾನ, ಎಂಬ ಅರ್ಥವನ್ನು ಧ್ವನಿಸುತ್ತದೆ. ತಾಳ್ಮೆ ಮಾನವನ ಹಿರಿಯ ಗುಣ, ತಾಳ್ಮೆಯಿದ್ದರೆ ಎಂತಹ ಆಪತ್ತನ್ನಾದರೂ ದಾಟಬಹುದು. ತಾಳ್ಮೆಗೆಟ್ಟಾಗ ಬುದ್ಧಿ ಹಿಡಿತದಲ್ಲಿರುವುದಿಲ್ಲ. ಅದರಿಂದ ಆಪತ್ತಿಗೆ ಆಹ್ವಾನ ನೀಡಿದಂತಾಗುತ್ತದೆ.

ಇತ್ತೀಚಿನ ಯುವಕರಲ್ಲಿ ಸಹನೆ, ತಾಳ್ಮೆ ಎನ್ನುವ ಸ್ವಭಾವಗಳೇ ಮಾಯವಾಗುತ್ತಿವೆ. ಉದಾಹರಣೆಗೆ ವಾಹನಗಳನ್ನು ಚಲಾಯಿಸುವ ಯುವಕರನ್ನು ನೋಡಿದಾಗ ಈ

ಮಾತು ಸತ್ಯವೆನಿಸುತ್ತದೆ. ಕೆಂಪು ದೀಪ ಇದ್ದರೂ ಹಿಂದು ಮುಂದು ನೋಡದೆ ವಾಹನಗಳನ್ನು ಓಡಿಸುವುದು, ಅದರಿಂದ ಅಪಘಾತಗಳು ಸಂಭವಿಸಿ ಪ್ರಾಣಗಳನ್ನು ಕಳೆದುಕೊಳ್ಳುವುದು, ಹಾಗೆ ಸಣ್ಣ ಸಣ್ಣ ವಿಷಯಗಳಿಗೆ ಆತ್ಮಹತ್ಯೆಗಳಿಗೆ ಶರಣಾಗುವುದು, ಮನೆಬಿಟ್ಟು ಓಡಿಹೋಗುವುದು ಇಂತಹ ಅನೇಕ ದುರಂತಗಳನ್ನು ಮಾಧ್ಯಮಗಳಲ್ಲಿ ಕೇಳುತ್ತಿರುತ್ತೇವೆ, ನೋಡುತ್ತಿರುತ್ತೇವೆ.

ಹೀಗಾಗಿ ತಾಳ್ಮೆ ಮನುಷ್ಯನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ರೂಪಿಸುತ್ತದೆ. ಅಂತಹ ವ್ಯಕ್ತಿಗಳು ತಮ್ಮ ಜೀವನವನ್ನು ಸಂತೋಷ ನೆಮ್ಮದಿಯಿಂದ ಅನುಭವಿಸುತ್ತಾರೆ.

**ಅಭ್ಯಾಸಕ್ಕಾಗಿ ಕೆಲವು ಗಾದೆಗಳು**

೧. ಅಂಗೈ ಹುಣ್ಣಿಗೆ ಕನ್ನಡಿ ಬೇಕೆ ?

೨. ಅಕ್ಕಿ ಮೇಲಾಸೆ ನೆಂಟರ ಮೇಲೆ ಪ್ರೀತಿ.

೩. ಆಕಳು ಕಪ್ಪಾದರೆ ಹಾಲು ಕಪ್ಪೇ ?

೪. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ?

೫. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

೬. ಆರು ಕೊಟ್ಟರೆ ಅತ್ತೆ ಕಡೆ, ಮೂರು ಕೊಟ್ಟರೆ ಸೊಸೆ ಕಡೆ

೭. ನಾಯಿ ಬಾಲ ಡೊಂಕು

೮. ತಾಯಿ ಮಾಡಿದ ಹೊಟ್ಟೆ, ಊರು ಮಾಡಿದ ಕೊಳಗ

೯. ಕಳ್ಳನಿಗೊಂದು ಪಿಳ್ಳೆ ನೆವ

೧೦. ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ

೧೧. ಊರಿಗೆ ಉಪಕಾರಿ ಮನೆಗೆ ಮಾರಿ

೧೨. ಎತ್ತು ಏರಿಗೆ ಎಳೆದ್ರೆ, ಕೋಣ ನೀರಿಗೆ ಎಳೀತು

೧೩. ತುಂಬಿದ ಕೊಡ ತುಳುಕುವುದಿಲ್ಲ

೧೪. ಬೆಳ್ಳಗಿರುವುದೆಲ್ಲ ಹಾಲಲ್ಲ

೧೫. ಮಾಡಿದ್ದುಣ್ಣೋ ಮಹಾರಾಯ

೧೬. ತಾಳಿದವನು ಬಾಳಿಯಾನು

೧೭. ಮಾತು ಬೆಳ್ಳಿ ಮೌನ ಬಂಗಾರ

೧೮. ಗಡ್ಡಕ್ಕೆ ಬೆಂಕಿ ಹತ್ತಿದಾಗ ಭಾವಿ ತೋಡಿದಂತೆ



## ೬. ಪ್ರಬಂಧ ರಚನೆ

ಇಪ್ಪತ್ತನೆಯ ಶತಮಾನದಲ್ಲಿ ವೈವಿಧ್ಯಪೂರ್ಣವಾಗಿ ಬೆಳೆದ ಸಾಹಿತ್ಯಪ್ರಕಾರಗಳಲ್ಲಿ ಪ್ರಬಂಧ ಪ್ರಕಾರವೂ ಒಂದು. ಇದು ಇಂಗ್ಲಿಷಿನ 'Essay' ಎನ್ನುವ ಪ್ರಕಾರಕ್ಕೆ ಸಂವಾದಿಯಾಗಿ ಬಂದಿದೆ. ಪ್ರಬಂಧ ಒಂದು ಲೇಖನಕಲೆ. ಒಂದು ನಿರ್ದಿಷ್ಟ ವಿಷಯದ ಕುರಿತು ಆಕರ್ಷಕವಾಗಿ, ನಿಖರವಾಗಿ ಬರೆದ ಗದ್ಯರಚನೆಗಳನ್ನು ಈ ಹೆಸರಿನಿಂದ ಕರೆಯಲಾಗಿದೆ.

ಖಚಿತವಾದ ವಿಷಯಜ್ಞಾನ, ನಿರೂಪಣೆಯಲ್ಲಿ ಸ್ಪಷ್ಟತೆ, ಆಕರ್ಷಕ ಶೈಲಿ ಇವೆಲ್ಲ ಇದ್ದಾಗ ಉತ್ತಮ ಪ್ರಬಂಧ ರೂಪುಗೊಳ್ಳುತ್ತದೆ. ಮೇಲಾಗಿ ಎಲ್ಲ ಅಂಶಗಳನ್ನು ತನ್ನದೇ ಆದ ದೃಷ್ಟಿಕೋನದಲ್ಲಿ ನೋಡುವ, ವಿಶ್ಲೇಷಿಸುವ ಗುಣ ಅಗತ್ಯ. ಪ್ರಬಂಧದ ಗುರಿ ವಿಷಯದ ಆಳ, ವಿಸ್ತಾರದ ಬಗ್ಗೆ ತಿಳುವಳಿಕೆ ನೀಡುವುದೇ ಆಗಿದೆ.

ವಿಷಯವನ್ನು ಕ್ರಮಬದ್ಧವಾಗಿ ಹೇಳುವುದು ಇಲ್ಲಿ ಮುಖ್ಯ. ಈ ಹಿನ್ನೆಲೆಯಲ್ಲಿ ನೋಡಿದಾಗ ಪ್ರಬಂಧದಲ್ಲಿ ಪೀಠಿಕೆ, ವಿಷಯ ಪ್ರತಿಪಾದನೆ, ಮತ್ತು ಮುಕ್ತಾಯ ಎಂಬ ಮೂರು ಹಂತಗಳಿರುವುದು ಅಗತ್ಯ. ಮೊದಲ ಹಂತದಲ್ಲಿ ವಿಷಯದ ಮಹತ್ತ್ವವನ್ನು ಸಂಕ್ಷಿಪ್ತವಾಗಿ ಒತ್ತಿ ಹೇಳುವ, ಎರಡನೆಯ ಹಂತದಲ್ಲಿ ಪೂರಕ ಸಾಮಗ್ರಿಗಳ ಮೂಲಕ ಅಂದರೆ ಸಾಕಷ್ಟು ಉದಾಹರಣೆಗಳೊಂದಿಗೆ ಅಭಿಪ್ರಾಯಗಳನ್ನು ತರ್ಕಬದ್ಧವಾಗಿ ಮಂಡಿಸುವ ಮೂಲಕ ವಿಷಯ ಪ್ರತಿಪಾದನೆ ಮಾಡುವ ಕೌಶಲ ಇರಬೇಕು. ಕೊನೆಗೆ ಪ್ರಬಂಧದ ಒಟ್ಟು ಸಾರವನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ಗಾದೆಮಾತು, ಸೂಕ್ತಿ ಅಥವಾ ಪ್ರಶ್ನೆಗಳ ಮೂಲಕ ಮುಕ್ತಾಯಗೊಳಿಸುವ ಅರಿವು ಇರಬೇಕು.

ಆಳವಾದ ವಿಷಯಜ್ಞಾನ, ಹಿರಿಯರು, ಜ್ಞಾನಿಗಳು ಹೇಳಿರುವ ಸೂಕ್ತಿ, ಗಾದೆಮಾತು, ಪ್ರಸಿದ್ಧ ಕವಿಗಳ ಕವಿತೆಯ ಸಾಲುಗಳು ಮೊದಲಾದ ಅಂಶಗಳನ್ನು ಸಂದರ್ಭೋಚಿತವಾಗಿ ಬಳಸುವ ಕೌಶಲ, ವ್ಯಾಕರಣ ಶುದ್ಧತೆ, ವಿಷಯವನ್ನು ಸರಳವಾಗಿ ಮಂಡನೆ ಮಾಡಬಲ್ಲ ಬುದ್ಧಿವಂತಿಕೆ ಇವೆಲ್ಲ ಇದ್ದಾಗ ಪ್ರಬಂಧ ಹೆಚ್ಚು ಅರ್ಥಪೂರ್ಣವಾಗುತ್ತದೆ.

**ಕ್ರೀಡೆ ಮತ್ತು ಆರೋಗ್ಯ**

ಮನುಷ್ಯ ಬುದ್ಧಿಜೀವಿ. ಆತ ಸದಾ ಒಂದಿಲ್ಲೊಂದು ಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುತ್ತಾನೆ. ಬೌದ್ಧಿಕವಾಗಲೀ, ದೈಹಿಕವಾಗಲೀ ಅವನು ಸದಾ ನಿರತನಾಗಿರುತ್ತಾನೆ. ಇಂದಿನ ಯಾಂತ್ರಿಕ ಜೀವನದಲ್ಲಿ ಪರಿಶ್ರಮವೂ ಹೆಚ್ಚು. ಬಿಡುವಿಲ್ಲದ ಕಾರ್ಯದ ನಡುವೆ ಆತ ಮನಸ್ಸಿಗೆ ಉಲ್ಲಾಸ ಬಯಸುವುದು ಸಹಜ.

ಮನುಷ್ಯ ತನ್ನ ಮನಸ್ಸಿಗೆ ಉಲ್ಲಾಸ ಪಡೆಯಲು ಆತ ಹಲವು ಉಪಾಯಗಳನ್ನು ಕಂಡುಕೊಂಡಿದ್ದಾನೆ. ಮನುಷ್ಯನ ಮನಸ್ಸು ಮನರಂಜನೆಯನ್ನು ಬಯಸುತ್ತದೆ. ಕ್ರೀಡೆಗಳು ಮನಕ್ಕೆ ಮುದ ನೀಡುತ್ತವೆ. ಅಷ್ಟೇ ಅಲ್ಲ, ದೈಹಿಕ ಪೋಷಣೆಗೂ ಸಹಾಯಕವಾಗುತ್ತದೆ. ದೇಹಕ್ಕೆ ಆಹಾರ ಎಷ್ಟು ಮುಖ್ಯವೋ ಹಾಗೆಯೇ ನಿಯಮಿತ ವ್ಯಾಯಾಮವೂ ಅಷ್ಟೇ ಅಗತ್ಯ. ಕ್ರೀಡೆಗಳಿಂದ ದೇಹಕ್ಕೆ ವ್ಯಾಯಾಮ ದೊರೆಯುತ್ತದೆ. ಶರೀರದಲ್ಲಿ ರಕ್ತ ಪರಿಚಲನೆ

ಹೆಚ್ಚಿ ದೇಹದ ಎಲ್ಲಾ ಅಂಗಾಂಗಳಿಗೂ ಪೋಷಣೆ ದೊರೆಯುತ್ತದೆ. ದೈಹಿಕ ಬೆಳವಣಿಗೆ, ಹೊಂದಾಣಿಕೆ, ಶಿಸ್ತು, ಸಹಬಾಳ್ವೆ ಅಲ್ಲದೇ ಅಂತಾರಾಷ್ಟ್ರೀಯ ಸಂಬಂಧವೃದ್ಧಿಗೂ ಕ್ರೀಡೆಗಳು ಅತ್ಯಗತ್ಯಗಳಾಗಿವೆ.

ಕ್ರೀಡೆಗಳಲ್ಲಿ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳೆಂದು ಎರಡು ವಿಧಗಳನ್ನು ಗುರುತಿಸಬಹುದು. ಚೆಸ್, ಕೇರಂ, ಚೌಕಾಬಾರ, ಪಗಡೆ, ಚೆನ್ನೇಮಣೆ ಇತ್ಯಾದಿ ಮನೆಯ ಒಳಗೇ ಕುಳಿತು ಆಡಬಹುದಾದ ಆಟಗಳು. ಇವು ಒಳಾಂಗಣ ಕ್ರೀಡೆಗಳು. ವಿಶಾಲವಾದ ಅಂಗಳದಲ್ಲಿ ದೈಹಿಕ ಕಸರತ್ತುಗಳೊಂದಿಗೆ ಆಡುವ ಹಾಕಿ, ಕ್ರಿಕೆಟ್, ಫುಟ್‌ಬಾಲ್, ಕಬಡ್ಡಿ ಮೊದಲಾದ ಕ್ರೀಡೆಗಳು ಹೊರಾಂಗಣ ಆಟಗಳಾಗಿವೆ. ಹೊರಾಂಗಣ ಕ್ರೀಡೆಗಳಿಗೆ ಮುಖ್ಯವಾಗಿ ದೈಹಿಕ ಕಸರತ್ತು ಅಗತ್ಯವಾಗಿದ್ದು ಇದರಿಂದ ದೇಹದಾರ್ಢ್ಯತೆ ಹೆಚ್ಚಿದರೆ, ಒಳಾಂಗಣ ಕ್ರೀಡೆಗಳಿಂದ ನಮ್ಮ ಬೌದ್ಧಿಕ ಕೌಶಲ್ಯಗಳು ಹೆಚ್ಚುತ್ತವೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಲ್ಲಿ ಕ್ರೀಡೆಗಳಿಂದ ಸ್ಪರ್ಧಾ ಮನೋಭಾವನೆ ಮೂಡಿಸುವುದು ಸಾಧ್ಯವಾಗಿದೆ. ಅಲ್ಲದೇ ಅಂತರ ಶಾಲಾ ಕ್ರೀಡಾಕೂಟಗಳಿಂದ ಪರಸ್ಪರ ಸ್ನೇಹ, ಸೌಹಾರ್ದತೆಗಳು ಮೂಡುವಲ್ಲಿ ಸಹಕಾರಿಯಾಗಿವೆ. ಅರಿತು ಬೆರೆತು ಒಂದಾಗಿ ನಡೆಯಲು ಸಹಾಯವಾಗುತ್ತದೆ. ಕ್ರೀಡೆಯಲ್ಲಿ ಜಿಲ್ಲಾಮಟ್ಟ, ರಾಜ್ಯ–ರಾಷ್ಟ್ರ ಮಟ್ಟದಲ್ಲಿ ಅನೇಕ ಪ್ರಶಸ್ತಿ ಪುರಸ್ಕಾರಗಳಿವೆ. ಕ್ರೀಡಾಪಟುಗಳಿಗೆ ದೇಶ–ವಿದೇಶ ಮಟ್ಟದಲ್ಲಿ ವಿಶೇಷ ಮನ್ನಣೆಯಿದೆ. ವಿದ್ಯಾರ್ಥಿದೆಸೆಯಲ್ಲಿ ಕ್ರೀಡಾಪಟುಗಳಾದವರಿಗೆ ತಾಂತ್ರಿಕ ಶಿಕ್ಷಣದಲ್ಲಿ ಮೀಸಲಾತಿ ಹಾಗೂ ಉದ್ಯೋಗಾವಕಾಶಗಳು ವಿಪುಲವಾಗಿದೆ.

ಅಂತರ ರಾಷ್ಟ್ರೀಯ ಸಂಬಂಧ ವೃದ್ಧಿಗೆ ಕ್ರೀಡೆಗಳ ಕೊಡುಗೆ ಅಪಾರವಾದುದು. ಸುದ್ದಿ ಮಾಧ್ಯಮಗಳಲ್ಲಿ ದೂರದರ್ಶನಗಳಲ್ಲಿ ಕ್ರೀಡೆಗಳ ವಿಷಯವೇ ಪ್ರತ್ಯೇಕ ಸ್ಥಾನವನ್ನು ಹೊಂದಿರುವುದನ್ನು ನೋಡಿದರೆ ಕ್ರೀಡೆಗಳ ಮಹತ್ವವನ್ನು ಅರಿಯಬಹುದು.



## ೭. ಪತ್ರಲೇಖನ

ಯಾವುದೇ ಬಗೆಯ ವ್ಯಾಪಾರ, ವಹಿವಾಟು ಅಥವಾ ಆಡಳಿತವನ್ನು ನಡೆಸುವಲ್ಲಿ ಪತ್ರವ್ಯವಹಾರವು ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತದೆ. ದೂರವಾಣಿ, SMSನಂತಹ ಸಂಪರ್ಕ ಸಾಧನಗಳು ಇಂದು ಬಳಕೆಯಲ್ಲಿ ಇವೆಯಾದರೂ ಕಾಗದದ ದಾಖಲೆಗಳ [Paper Documents] ಪ್ರಾಮುಖ್ಯತೆ ತಪ್ಪಿಲ್ಲ. ಇತ್ತೀಚೆಗೆ ಪತ್ರ ವ್ಯವಹಾರಕ್ಕಾಗಿ ಇ–ಮೇಲ್‌ನ್ನು ಬಳಸಲಾಗುತ್ತಿದೆಯಾದರೂ ಇದು ಪರೋಕ್ಷವಾಗಿ ಕಾಗದದ ದಾಖಲೆಗಳನ್ನೇ ಪ್ರತಿನಿಧಿಸುತ್ತವೆ.

ಪತ್ರವ್ಯವಹಾರಗಳಲ್ಲಿ ವೈಯಕ್ತಿಕ ಪತ್ರವ್ಯವಹಾರ ಮತ್ತು ಅಧಿಕೃತ ಪತ್ರವ್ಯವಹಾರ ಎಂಬ ಎರಡು ಬಗೆಗಳಿವೆ. ಅವುಗಳ ವ್ಯತ್ಯಾಸ ಈ ಕೆಳಗಿನಂತೆ ಇದೆ :

| **ವೈಯಕ್ತಿಕ ಪತ್ರ** | **ಅಧಿಕೃತ ಪತ್ರ** |
|---|---|
| ೧. ಖಾಸಗಿ ಸ್ವರೂಪದ ಪತ್ರವ್ಯವಹಾರ. | ೧. ಅಧಿಕೃತ ಸ್ವರೂಪದ ಪತ್ರವ್ಯವಹಾರ. |
| ೨. ಪತ್ರದ ಸ್ವರೂಪ ಬಹುಮಟ್ಟಿಗೆ ಅನಿರ್ದಿಷ್ಟ. | ೨. ಪತ್ರದ ಸ್ವರೂಪ ಖಚಿತ ಮತ್ತು ಪೂರ್ವನಿರ್ಧರಿತ. |
| ೩. ಪರಿಚಿತರಿಗೆ ಮಾತ್ರ | ೩. ವ್ಯವಹಾರದಲ್ಲಿ ಸಂಬಂಧಿಸಿದ ಎಲ್ಲರಿಗೂ. |
| ೪. ಬರವಣಿಗೆಯ ಧಾಟಿ ಸಹಜ, ಸ್ವಾಭಾವಿಕ ಮತ್ತು ಆಪ್ತ ಸ್ವರೂಪದ್ದು. | ೪. ಬರವಣಿಗೆಯ ಭಾಷೆ ಖಚಿತ ಸ್ವರೂಪದ್ದು, ಗಂಭೀರ ಮತ್ತು ನಿರ್ಭಾವುಕವಾದದ್ದು. |
| ೫. ಹಲವು ಸಂಗತಿಗಳನ್ನು ಬೆರೆಸಿ ಬರೆಯಬಹುದು. | ೫. ಒಂದು ನಿರ್ದಿಷ್ಟ ವಿಷಯವನ್ನು ಮಾತ್ರ ಪ್ರಸ್ತಾಪಿಸುವುದು. |
| ೬. ಕಾಲಮಿತಿ ಬಹುಮಟ್ಟಿಗೆ ಇಲ್ಲ. | ೬. ನಿರ್ದಿಷ್ಟ ಕಾಲಮಿತಿ ಹೊಂದಿದೆ. |
| ೭. ಪತ್ರದ ಬರವಣಿಗೆ ಮತ್ತು ಅದಕ್ಕೆ ಉತ್ತರ ಕಡ್ಡಾಯವಲ್ಲ. | ೭. ಇದು ಬಹುಮಟ್ಟಿಗೆ ಕಡ್ಡಾಯ. |
| ೮. ಪತ್ರದಲ್ಲಿನ ಆದೇಶಗಳನ್ನು ಉಲ್ಲಂಘಿಸಿದರೂ ದಂಡನೆಯ ಭೀತಿ ಇಲ್ಲ. | ೮. ಪತ್ರದಲ್ಲಿನ ಆದೇಶಗಳನ್ನು ಉಲ್ಲಂಘಿಸಿದರೆ ದಂಡನೆಯ ಸಾಧ್ಯತೆ ಇದೆ. |
| ೯. ವೈಯಕ್ತಿಕ ಪತ್ರಗಳನ್ನು ಸಂರಕ್ಷಿಸುವ ಅಗತ್ಯವಿಲ್ಲ. | ೯. ಅಧಿಕೃತ ಪತ್ರಗಳನ್ನು ಕೆಲವು ಕಾಲದವರೆಗಾದರೂ ಸಂರಕ್ಷಿಸ ಬೇಕಾದ್ದು ಅತ್ಯಗತ್ಯ. |
| ೧೦. ಹುದ್ದೆ ಇತ್ಯಾದಿ ಅಗತ್ಯವಿಲ್ಲ. | ೧೦. ಅಗತ್ಯ ಇದೆ. |

**ಅಧಿಕೃತ ಪತ್ರದ ಭಾಗಗಳು :**

ಸಾಮಾನ್ಯವಾಗಿ ಎಲ್ಲ ಅಧಿಕೃತ ಪತ್ರಗಳು ಬಹುಮಟ್ಟಿಗೆ ಒಂದು ಖಚಿತವಾದ ಸ್ವರೂಪದಲ್ಲಿ ಇರುತ್ತದೆ. ಇದರಿಂದಾಗಿ ಪತ್ರದ ಓದುಗರು ಮಾಹಿತಿಗಾಗಿ ತಡಕಾಡಬೇಕಿಲ್ಲ. ಇದರಿಂದ ಕಾಲದ ಉಳಿತಾಯ ಸಾಧ್ಯ.

**ಒಂದು ಅಧಿಕೃತ ಪತ್ರವು ಕೆಳಕಂಡ ಭಾಗಗಳನ್ನು ಒಳಗೊಂಡಿರುತ್ತದೆ :**

೧. ತಲೆಬರಹ ಅಥವಾ ಸ್ವವಿಳಾಸದ ವಿವರಗಳು.

೨. ದಿನಾಂಕ

೩. ಉಲ್ಲೇಖ

೪. ಪತ್ರ ತಲುಪಬೇಕಿರುವವರ ವಿಳಾಸ

೫. ಗೌರವ ಸಂಬೋಧನೆ

೬. ವಿಷಯ

೭. ಹಿಂದಿನ ಉಲ್ಲೇಖ

೮. ಪತ್ರದ ಒಡಲು

೯. ವಂದನಾಪೂರ್ವಕ ಮುಕ್ತಾಯ

೧೦. ಸಹಿ ಮತ್ತು ಹುದ್ದೆ

೧೧. ಅಡಕ [Enclosure]

೧೨. ಪತ್ರ ತಯಾರಕರ ಸಂಕೇತ



## ವ್ಯವಹಾರ ಪತ್ರದ ಮಾದರಿ

GST : 175432 **ಗೌತಮ್ ಬುಕ್ಸ್** Ph............
ಪುಸ್ತಕಗಳ ಸಗಟು ವ್ಯಾಪಾರಿಗಳು Fax............
ನಂ. 10, 7ನೇ ಅಡ್ಡರಸ್ತೆ, email............
ಜಯನಗರ 4ನೇ ಬ್ಲಾಕ್, ಬೆಂಗಳೂರು
ಗ್ರ.ಪು.ಪೂ./ಬೆಂ.ನ.ಶಾ/122/12.9.18

ದಿನಾಂಕ : 4ನೇ ಅಕ್ಟೋಬರ್ 2018

ಇವರಿಗೆ,
**ಪ್ರಾಂಶುಪಾಲರು**
ಭಾರತೀ ಪ್ರಥಮದರ್ಜೆ ಕಾಲೇಜು
ವಿ.ಆರ್. ರಸ್ತೆ, ನಂದನವನ
ಮತ್ತೀಸಂದ್ರ.

ಮಾನ್ಯರೇ,

ವಿಷಯ : ಗ್ರಂಥಾಲಯಕ್ಕೆ ಪುಸ್ತಕಗಳ ಸರಬರಾಜು

ಉಲ್ಲೇಖ : BILS/ಪು.ಖ./03/1–9–2018

ತಮ್ಮ ಮೇಲ್ಕಂಡ ಉಲ್ಲೇಖನದ ಆದೇಶದಂತೆ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ದಿನಾಂಕ 3 ಅಕ್ಟೋಬರ್ 2013ರಂದು ಬ್ಲೂಡಾರ್ಟ್ ಕೊರಿಯರ್ ಮೂಲಕ [ರಸೀದಿ ಸಂಖ್ಯೆ 345568] ಕಳುಹಿಸಲಾಗಿದೆ.

| | | | |
|---|---|---|---|
| 1. ಭಾರತದ ಸಂವಿಧಾನ | 25 ಪ್ರತಿಗಳು | 25x200= | 5000–00 |
| 2. ನಮ್ಮ ಸಂಸತ್ತು | 10 ಪ್ರತಿಗಳು | 10x100 = | 1000–00 |
| 3. ಶಾಸಕಾಂಗ | 10 ಪ್ರತಿಗಳು | 10x100 = | 1000–00 |
| | | ಒಟ್ಟು | 7000–00 |

ಪುಸ್ತಕಗಳು ಸುಸ್ಥಿತಿಯಲ್ಲಿ ತಲುಪಿದ್ದರ ಬಗ್ಗೆ ದಯವಿಟ್ಟು ತಿಳಿಸಿ. ಮೇಲ್ಕಂಡ ಮೊಬಲಗಿನ ಚೆಕ್ಕನ್ನು ಇನ್ನು 15 ದಿನಗಳ ಒಳಗೆ ಕಳುಹಿಸುವಿರೆಂದು ನಂಬಿದ್ದೇವೆ. ವಿಶ್ವಾಸವಿರಲಿ.

ವಂದನೆಗಳೊಂದಿಗೆ,

ಅಡಕ : ತಮ್ಮ ವಿಶ್ವಾಸಿ
ಬಿಲ್ಲುಗಳು–ತ್ರಿಪ್ರತಿಯಲ್ಲಿ **ಮ್ಯಾನೇಜರ್**
NVS/B.S./104/19-9-18 ಗೌತಮ್ ಬುಕ್ಸ್

## ಕಛೇರಿ ಪತ್ರ ಮಾದರಿ

ನಿಮ್ಮ ಪ್ರದೇಶದ ಬರಗಾಲವನ್ನು ವಿವರಿಸಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಬರ ಪರಿಹಾರ ಕಾರ್ಯ ಕೈಗೊಳ್ಳಲು ವಿನಂತಿಸಿ.

25 ಮೇ 2018
ರಾಯಚೂರು

ಇಂದ,

**ಚಿದಾನಂದ ಪಾಟೀಲ**
ನಂ. 54, ಕೋ.ಚೆನ್ನಬಸಪ್ಪ ರಸ್ತೆ,
ಲಾಲ್‌ಬಹದ್ದೂರ್ ಶಾಸ್ತ್ರಿ ನಗರ,
ರಾಯಚೂರು.

ಗೆ,

**ಮಾನ್ಯ ಜಿಲ್ಲಾಧಿಕಾರಿಗಳು,**
ರಾಯಚೂರು ಜಿಲ್ಲೆ,
ರಾಯಚೂರು.

ಮಾನ್ಯರೆ,

**ವಿಷಯ : ಬರಗಾಲ ಪರಿಹಾರ ಕಾರ್ಯ ಕೈಗೊಳ್ಳಲು ಮನವಿ**

ಕಳೆದ ಮೂರು ವರುಷಗಳಿಂದ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಮಳೆ ಬಂದಿಲ್ಲ. ವರ್ಷವಿಡೀ ಮಳೆ ಬೀಳದೆ ಬೆಳೆಯು ಇಲ್ಲವಾಗಿದೆ. ಮೊದಲೇ ಬರಡು ಪ್ರದೇಶವೆಂದು ಖ್ಯಾತಿ ಗಳಿಸಿರುವ ರಾಯಚೂರು ಜಿಲ್ಲೆಯಲ್ಲಿ ಕುಡಿಯಲು ನೀರಿಲ್ಲ. ಜಾನುವಾರುಗಳಿಗೆ ಮೇವಿಲ್ಲದೆ ಸಾಯುತ್ತಿವೆ. ಜನರು ಗುಳೆ ಹೋಗುತ್ತಿದ್ದಾರೆ. ಆದಷ್ಟು ಬೇಗ ನಮ್ಮ ಜಿಲ್ಲೆಯ ಜನತೆಗೆ ಬರಗಾಲ ಪರಿಹಾರ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ಕೈಗೊಂಡು ಜನರಿಗೆ ನೀರು, ಆಹಾರ ವ್ಯವಸ್ಥೆ, ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವಿನ ವ್ಯವಸ್ಥೆ ಮಾಡಬೇಕೆಂದು ವಿನಂತಿಸುತ್ತೇನೆ.

ವಂದನೆಗಳೊಂದಿಗೆ, ತಮ್ಮ ವಿಶ್ವಾಸಿ
**ಚಿ. ಪಾಟೀಲ**



## ವೈಯಕ್ತಿಕ ಪತ್ರದ ಮಾದರಿ

21 ಮಾರ್ಚ್ 2018

ಪ್ರೀತಿಯಿಂದ ಗೆಳೆಯನಿಗೆ/ಗೆಳತಿಗೆ,

ನೀನು ಕ್ಷೇಮವಾಗಿರುವೆ ಎಂದು ಭಾವಿಸುತ್ತೇನೆ. ನಾನು ಕ್ಷೇಮವಾಗಿದ್ದೇನೆ. ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರವಾಸವನ್ನು ಏರ್ಪಡಿಸಿದ್ದರು. ಪ್ರವಾಸಕ್ಕೆ ಹೋಗುವ ಮುಂಚೆ ನಿನಗೆ ಪತ್ರವನ್ನು ಬರೆದಿದ್ದೆನು.

ನಾವೆಲ್ಲರೂ ಬೇಲೂರು, ಹಳೇಬೀಡು, ಧರ್ಮಸ್ಥಳ, ಉಡುಪಿ, ಮಂಗಳೂರು, ಮಲ್ಪೆ, ಕಾರವಾರ, ಹೊರನಾಡು, ಶೃಂಗೇರಿ ಮುಂತಾದ ಸ್ಥಳಗಳನ್ನು ನೋಡಿದೆವು. ತುಂಬಾ ಸುಂದರವಾದ, ಅದ್ಭುತವಾದ ಸ್ಥಳಗಳಾಗಿದ್ದವು. ನಮ್ಮ ಇತಿಹಾಸವನ್ನು ಸಾಂಸ್ಕೃತಿಕ ಪರಂಪರೆಯನ್ನು ನೆನಪಿಸುವ ದೇವಾಲಯಗಳು, ಸ್ಮಾರಕಗಳು ಚೆನ್ನಾಗಿವೆ. ಜೀವನದಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ಸಲ ನೋಡಲೇಬೇಕು.

ಸಮುದ್ರ ತೀರವನ್ನು ಹೊಂದಿರುವ ಮಂಗಳೂರು, ಮಲ್ಪೆ ತುಂಬಾ ಸುಂದರವಾದ, ರಮಣೀಯವಾದ ಪ್ರಕೃತಿ ಸೌಂದರ್ಯವನ್ನು ಹೊಂದಿವೆ. ನೀನು ನನ್ನ ಜೊತೆಯಲ್ಲಿದ್ದಿದ್ದರೆ ಚೆನ್ನಾಗಿರುತ್ತಿತ್ತು.

ನೆನಪುಗಳೊಂದಿಗೆ, ನಿನ್ನ ಪ್ರೀತಿಯ ಗೆಳೆಯ/ತಿ
**ಆಕಾಶ್/ಅನುರಾಧಾ**

ಗೆ,

**ಧೀರಜ್**
ನಂ. 127, 4ನೇ ಅಡ್ಡರಸ್ತೆ,
3ನೇ ಮುಖ್ಯರಸ್ತೆ,
ವಿನೋಬನಗರ,
ಬೆಂಗಳೂರು.

# ಪ್ರಶ್ನಪತ್ರಿಕೆಯ ಸ್ವರೂಪ

## ಭಾಗ – 1

| | | | |
|---|---|---|---|
| 1. ನೇರ ಉತ್ತರ ಬಯಸುವ ಪ್ರಶ್ನೆಗಳು | [1 ಅಂಕ X 10 ಪ್ರಶ್ನೆಗಳು] | = | 10 |
| 2. ಸಂಕ್ಷಿಪ್ತ ಉತ್ತರ ಬಯಸುವ ಪ್ರಶ್ನೆಗಳು | [4 ಅಂಕ X 4 ಪ್ರಶ್ನೆಗಳು] | = | 16 |
| 3. ವಿವರವಾದ ಉತ್ತರ ಬಯಸುವ ಪ್ರಶ್ನೆಗಳು | [8 ಅಂಕ X 3 ಪ್ರಶ್ನೆಗಳು] | = | 24 |
| 4. ಸಂದರ್ಭದ ವಿವರಣೆ | [4 ಅಂಕ X 5 ಪ್ರಶ್ನೆಗಳು] | = | 20 |
| 5. ಪದ್ಯಭಾಗದ ಭಾವಾರ್ಥ | [5 ಅಂಕ X 1 ಪ್ರಶ್ನೆ] | = | 05 |
| | | | **ಅಂಕಗಳು 75** |

## ಭಾಗ – 2

| | | | |
|---|---|---|---|
| 6. ಸೂಚನೆಗೆ ಅನುಸಾರವಾಗಿ ಉತ್ತರಿಸಿ<br>ಕಠಿಣ ಪದಾರ್ಥ, ನಾನಾರ್ಥ,<br>ಸಮಾನಾರ್ಥ, ವಿರುದ್ಧಾರ್ಥ,<br>ತತ್ಸಮ–ತದ್ಭವ, ದೇಶ್ಯ ಅನ್ಯದೇಶ್ಯ,<br>ಬಿಡಿಸಿ ಬರೆಯಿರಿ, ನುಡಿಗಟ್ಟು | [2 ಅಂಕ X 5 ಪ್ರಶ್ನೆಗಳು] | = | 10 |
| 7. ಗಾದೆ ವಿಸ್ತರಣೆ | [5 ಅಂಕ X 1 ಪ್ರಶ್ನೆ] | = | 05 |
| 8. ಪ್ರಬಂಧ ರಚನೆ | [5 ಅಂಕಗಳು X 1 ಪ್ರಶ್ನೆ] | = | 05 |
| 9. ಪತ್ರ ಲೇಖನ | [5 ಅಂಕಗಳು X 1 ಪ್ರಶ್ನೆ] | = | 05 |
| | | | **ಅಂಕಗಳು 25** |

**ಒಟ್ಟು ಅಂಕಗಳು 100**